ಶ್ಲೋಕ [illegible]

ವೈಯಾ [illegible]

ವರಗಿಲ್ಲ [illegible]

ಜಿದು- [illegible]

ಬಂಯದ್ದ [illegible]

ಟ್ರ ಪ್ರಿತ [illegible]

೪ ಶೋ ೪ [illegible]

ವಾದ ಬ [illegible]

ಕಾರಣದ್ರಿ [illegible]

ಸಪ್ತಾ ನ [illegible]

ಚೇ(ತು- [illegible]

ಬುದ್ಧಿ [illegible]

ಕಿಲವರ [illegible]

ಯಾವ [illegible]

ಅಂಥಾ [illegible]

ಂತ್ರೆ ಜಾ [illegible]

దైవపరీక్షెయు

శ్లోకః॥ ఏకో దేవస్సర్వభూతేషు శుద్ధస్సర్వవ్యాపి సర్వభూతాంతరాత్మః। కర్మాధ్యక్షస్స
ర్వభూతాధివాససాక్షీ చేతా కేవలో నిర్గుణాశ్చ ॥౧॥ ॥దైవవుంటెందు మనుష్యరాగి హుట్టిద
వరిగెల్లరిగు ప్రసిద్ధవాద వాక్యవు- మనుష్యను అరణ్యదల్లి జన్మిసి మనుష్యరొళు సంచరిసదె ఒందు
జీదు- ఒందు విద్యా- ఒందు శాస్త్రవూ ఇల్లదె దుష్టమృగగళొళగె దుష్టమృగద హాగె కలతు వర్తి
సియిద్దరు అంథావను భూమండల జ్యోతిర్మండలగళు ధ్యానిసి నోడువాగలు బ్రహ్మాండగళొ
ళు ప్రవర్తిసుత్తిరువ స్థావరజంగమాదిగళ క్రమవూ విచిత్ర లక్షణగళు ఆశ్చర్యగుణగళు ప
రిశోధిసి నోడిదరె- ఇవెల్లాందు వస్తుగళు తానే ఆగిరలారదె అవ్యక్త ఆదిమూలవు ఆదిపురానా
వాద బేరె ఒందు వస్తు ఉంటెందు తన్న స్వభావ బుద్ధియింద గ్రహిసల్పడుదు- గ్రహిసిద మేలె అంథా
కారణాద్దైవవెందు పరాపరవస్తువెందు జగత్కర్తనెందు హేళి అంథా దేవర మేలె భయ భక్తి విశ్వా
సవూ నంబిగెయన్నూ యిడువదక్కె అవనిగె స్వతంత్రవాద మనస్సుంటెందు అనుమానవిల్లదె నిశ్చైస
బేకు- ఈ మాతు సహజవేసరి- హ్యాగందరె- బంజుకులదవనిగె ఈ జ్ఞానవూ యష్టు మాత్ర తన్న
బుద్ధియింద సంపాదిసువదక్కె అశ్యాంతరవాగదెయిత్తు- కెలవు వేళెగళల్లి పట్టణద నివాసిగళాద
కెలవరు ఈ జీదు ఆ జీదుకళతు హేళువ మాతుగళేనందరె- ఎల్లా సుళ్ళుయెందు ప్రపంచదమే
యొ వికారవెందు దేవరన్ను నోడిదవరు దారు ఎందు యుక్తివిచారిసుత్తా ఇద్దిరియెందు కేళిదరె
అంథావరు తమ్మ ఆత్మగళన్ను పాపకర్మాచరవరాగి కామాంధకారదింద కురుడరాగి ఏళలారదెము
త్రిజ్ఞానద బెళకను తమ్మ హృదయగళల్లి బెళగగొడదే కారణ దేహను బహిరంగగళన్ను అపేక్షిసుత్తిరు

ವರಲ್ಲದೆ ಈ ಅಂಧಕಾರದಿಂದ ಮೃಗದಗುಣವಾಗಿಯೂ ದ್ವಿಪಾದ ಪಶುಗಳಾಗಿಯೂ ದೇವರ ಮೇಲೆ
ಯೂ ಅವರು ಮಾಡತಕ್ಕ ಸದ್ಗತಿ ದುರ್ಗತಿಗಳ ಮೇಲೆಯೂ ಸ್ಮರಣೆಯಿಲ್ಲದೆ ಇದ್ದಾರೆ- ಸ್ವಲ್ಪವಾದ
ರು ಜ್ಞಾನದೃಷ್ಟಿಯನ್ನು ತೆರದು ಯದೃಷ್ಟಂ ತದೃಷ್ಟಂ ಯೆಂದು ಕೆಟ್ಟು ಹೋಗದ ಶರೀರವೂ ಕಣ್ಣಿಗೆ
ಕಾಣಲ್ಪಡುವ ವಸ್ತುಗಳೂ ನಾಶವಾಗಿ ಹೋಗುತ್ತವೆ ಅದುಕಾರಣ ದೈವವು ನಿರಾಕಾರವು ನಿರಂಜನಸ್ವರೂ
ಪವಾಗಿ ಇರಬೇಕೆಂದು ಹೇಳಿದರೆ ತಿಳಿಯಬಾರದೆ ಇಂಥಾವರಿಗೆ ಜೀವಾತ್ಮವಿಲ್ಲೆಂದು ಜೀವಾ
ತ್ಮನ ಕಂಡವರು ದಾರು ಯೆಂದು ಹೇಳಿದರೆ ತಮಗೆ ಮುತ್ತಾತಗಳು ಇಲ್ಲೆಂದು ತಮ್ಮ ಮುತ್ತಾತಗ
ಳ ಕಂಡವರ್ಯಾರೆಂದು ಹೇಳಿದರೆ ಈ ನ್ಯಾಯಕ್ಕೆ ಒಪ್ಪುವರೋ ಇಲ್ಲವಲ್ಲ - ಈ ಪ್ರಕಾರವಾಗಿ ಕಾರ್ಯ
ಸ್ವರೂಪವಾದ ಈ ಲೋಕಪ್ರಪಂಚ ಇರಲಿಕ್ಕೆ ಅದರ ಸೃಷ್ಟಿ ಸ್ಥಿತಿ ಲಯಗಳಿಗೆ ಪರಮಕಾರಣಕರ್ತನು ಕಡೆ
ಯಿಲ್ಲದ ಕೃಪೆಯುಳ್ಳ ಕುರುಹಿಲ್ಲದ ಜ್ಞಾನವೂ ಸಾಮರ್ಥ್ಯವೂ ವುಳ್ಳ ಸ್ವಾಮಿ ಇದ್ದಾನೆಂದು ಪ್ರ-
ತ್ಯಕ್ಷವಾಗಿ ಬುದ್ಧಿಯಿಂದ ಕಾಣಬಾರದೆ ಪಾಪಪುಣ್ಯಗಳು ಉಂಟಾಗಿರಲಿಕ್ಕೆ ಮೋಕ್ಷನರಕಗಳಿ
ಪಾಪಪುಣ್ಯಗಳು ಸುಖಕಷ್ಟಗಳು ಇರುವಂಥಾ ಮಿತಿಯಿಲ್ಲದ ಜ್ಞಾನವೂ ಸಾಟಿಯಿಲ್ಲದ ನೀತಿಸ್ವರೂಪ
ವಾಗಿರುವಂಥಾ ದೇವರು ಇದ್ದಾನೆಂದು ನಿಶ್ಚೈಸಕೂಡದೋ ಈ ಮಹಾ ಜ್ಞಾನದ ನೀತಿಗಳ ಮೇಲೆ ಸಂದೇಹಪು
ಟ್ಟಿಸುವಂಥಾ ಪಾಪಾತ್ಮರು ತಾವೆ ದಿಕ್ಕು ತಪ್ಪಿ ಬಹಳ ಸಂಕಟ ಬಂದ ವೇಳೆಯಲ್ಲಿ ಅಯ್ಯೋ ದೈವವೇ ನೀ
ನೇ ದಿಕ್ಕು ಇನ್ನು ಯಾರೂ ಇಲ್ಲವೆಂದು ಅಹಂಕಾರವನು ಳಿದು ಮೊರೆಯಿಟ್ಟುಕೊಳ್ಳುತ್ತಾ ಇದ್ದಾರು-
ಇಂಥಾ ದುಷ್ಟರ ಮೇಲೆ ಹೆಚ್ಚಾಗಿ ಹೇಳುವದೇನು - ದೇವರು ಭೂಲೋಕದ ಜನರ ಪಾಪಗಳನ್ನು ಸೈರಿಸಿ
ಮಿತಿಯಿಲ್ಲದ ಕೃಪೆಯನ್ನು ತೋರಿಸುವಾಗಲು ದೇವರನ್ನು ತಿಳಿಯದೆ ಹೋದವರೆಲ್ಲ ನರಕದಲ್ಲಿ ಬಿದ್ದು
ಕಡೆಯಿಲ್ಲದ ಕಾಲಾಗ್ನಿಯಲ್ಲಿ ಬೇಯುವಾಗಲು ದೇವರು ಇಷ್ಟಂಥಾ ಶಿಕ್ಷೆಯು ಯಾಕೆಂದಾರಾ.

ನಾಬಲ್ಲರು ದೈವವಿಲ್ಲವೆಂದು ಹೇಳುವರು ಮುಖ್ಯತನವಸಂಗಡಕೂಡಿದ ನಿನಸ ಬಾರದದ್ರೋಹವುಸರಿ
ನಿಜವಾದ ದೇವರನ್ನು ಮರೆತು ದೈವತ್ವವಿಲ್ಲದವಸ್ತುಗಳನ್ನು ದೈವವೆಂದು ಭಾವಿಸಿ ನೇಮಿಸುವರು ಪೂಜಾರಾ
ಧನೆಮಾಡುವರು ಅದಕ್ಕೆ ಸಮಾನವಾದದ್ರೋಹವು ಸಂದೇಹವಿಲ್ಲ- ಈ ಅಜ್ಞಾನವು ಹಿಂದು ಜನರೊ
ಳಗೆಬಹಳ ಹೆಚ್ಚಾಗಿನಡೆಯುತ್ತಾಯಿದ್ದೀತು ಹಿಂದುದೇಶವು ಎಂಥದೆಂದರೆ- ಕಾಶಿರಾಮೇಶ್ವರ
ದಪರಿಯಂತರದಲ್ಲಿರುವ ದೇಶದ ವಿಸ್ತಾರವು ಒಂದು ಅರಳಿಯ ಎಲೆಯ ಮಾತ್ರವಾಗಿ ಭಾವಿಸಿದರೆ ಹಿಂ
ದುರಾಜ್ಯವೆಲ್ಲ ಅರಳಿಯ ಎಲೆಯ ಕೊನೆಯ ಹಾಗೆ ಇರುವದಲ್ಲದೆ ಹೆಚ್ಚಾದದ್ದಲ್ಲ- ಭೂಮಂಡಲವನ್ನು ಸಾವಿ
ರಪಾಲಾಗಿ ಭಾಗವಿಟ್ಟಕಾಲಕ್ಕೂ ಸಾವಿರಭಾಗದೊಳು ಹಿಂದುರಾಜ್ಯ ಒಂದು ಭಾಗವಾಗಿರುವದು ಇಷ್ಟು
ಸ್ವಲ್ಪವಾದಭೂಮಿಯಲ್ಲಿ ಮಾತ್ರ ಅನೇಕಕೋಟಿ ಪರಿಯಂತರವಿರುವದು- ಇದರಲ್ಲಿರುವ ಅಷ್ಟುವಸ್ತು
ಗಳೆಲ್ಲಾ ದೇವರೆಂದು ಹೇಳಿ ಪೂಜಾನಮಸ್ಕಾರಗಳು ಮಾಡುವದು ತಾವಿರುವ ಭೂಮಿ ದೈವವೆಂದು ಶರಣುಮಾ
ಡುವದು ಒಬ್ಬೊಬ್ಬನು ತನ್ನ ಉದ್ಯೋಗಗಳ ಪ್ರಯುಕ್ತಕ್ಕೆ ಖಂಪರು ತಮ್ಮ ಆಯುಧಗಳಿಗೂ ಬರದು ಓದುವರು
ತಮ್ಮ ಘಂಟೆಗಳಿಗೂ ಪುಸ್ತಕಗಳಿಗೂ ನೇಯುವವರು ಅವರು ತಮ್ಮ ಮಗ್ಗದ ಹಾನಿಗೆಗಳಿಗೂ ಅಗಸರು ಸಹ ಉಬ್ಬೆ
ದೇವರೆಂದು ಪೂಜಾನಮಸ್ಕಾರಗಳುಮಾಡುವರು ಮನೆಯಲ್ಲಿರುವ ಹೆಂಗಸರು ವಿಶೇಷವಾಗಿ ಮೊರಪು
ಟ್ಟಿ ಚೆಂಬು ಕೊಡಗಡಿಗೆಗಳು ಬಿಂದಿಗೆಗಳು ಮೊದಲಾದವುಗಳಿಗೆ ಪೂಜೆಯನ್ನು ನಡೆಸುವರು ಗಿಡಗ
ಳಾಳು ತುಳಸಿ ಅರಳಿಮರಕ್ಕು ಸುತ್ತಿರುಗಿ ನಮಸ್ಕರಿಸಿ ವಂದನಾದಿ ವ್ಯಾಪಾರಗಳನ್ನು ಮಾಡುವರು-
ಮೃಗಜಂತುಗಳೊಳಗೆ ಪಶುವುಗಳು ಆಕಳು ಎತ್ತು ಕುದುರೆ ಆನೆ ಕೋತಿ ಇವು ಹದ್ದುಗಳು ಪ
ಕ್ಷಿಗಳು ಸರ್ಪಗಳು ಇವು ಮೊದಲಾದವು ಪೂಜಿಸುವದು ಯಾತರ ಬುದ್ಧಿ ಇಂಥಾ ಅಲ್ಪಬುದ್ಧಿಲ
ಕ್ಷಣಗಳು ಹೊಂದಿ ನೋಡುವಾಗಲು ಕೆಲವರು ತಮ್ಮ ನಾಚಿಕೆವುಳ್ಳಿಸಿಕೊಂಡು ಪರಿಹರಿಸಿ
ಕ್ಕೆ ಉತ್ತರವನ್ನು ಕೊಡುತ್ತಾಯಿದ್ದಾರೆ- ಯೇನೆಂದರೆ ದೇವರು ಸರ್ವಾಂತರ್ಯಾಮಿ ಅಷ್ಟರಲ್ಲು ಪರಿ
ಪೂರ್ಣನಿಷ್ಠ ಅಂಥಾವಸ್ತುಗಳಿಗೆ ನಮಸ್ಕಾರಮಾಡುವದು ಸಲ್ಲದೋ ಯೆನುತ್ತಾರೆ- ಈ ಅಬ

ದ್ಧನ್ಯಾಯವು ಸಾಧ್ಯವಾಗಿ ತರುವಾಗ ಸಕಲ ಪದಾರ್ಥಗಳಿಗು ಎಷ್ಟು ಪವಿತ್ರವಾದರು ನಮಸ್ಕರಿಸಿಸು।
ತಿಸಲು ವರವನ್ನು ಕೇಳಬಹುದೆಂಬುವದಕ್ಕೆ ಸಮಾನವು - ಯಿದಲ್ಲದೆ ಎತ್ತು ಕುದುರೆಗು ಯಿದಕ್ಕು ಅದಕ್ಕು
ಮಾಡಿದ ನಮಸ್ಕಾರವನ್ನು ಮಾಡಿದ ಕೀರ್ತನೆಯೂ ದೇವರಿಗೆ ಸಲ್ಲಿದರೆ ಸರಿ ನ್ಯಾಂಯದ ಸಂಗದ ಕುದು
ರೆಗೆ ಮಾಡಿದ ಅಪಕೀರ್ತಿ ಅವಮಾನ ಬಬುಕಿನ ಸಂಗದ ಹೊಡೆದ ಪೆಟ್ಟುಗಳು ಕಾಣಿನ ಸಂಗ
ದವದ್ದ ವದೆಗಳು ದೇವರಿಗೆ ಸಲ್ಲಬೇಕೋ - ಇದು ಹುಚ್ಚುಮಾತಲ್ಲವೆ ಹಿಂಗೆಯೇ ಸರಿ ಹುಚ್ಚುಮಾತು -
ಈ ರೀತಿಯಾಗಿ ಅನೇಕ ಜನರು ಅನಿತ್ಯವಾದ ಬಾಹ್ಯಗಳ ಮೇಲೆ ಪ್ರೇಮಪಟ್ಟು ಅವೇ ತಮಗೆ ದಿಂಯ
ಂದು ಪಿರಿತಿಗೆಯದೆ ಅವೆಲ್ಲಾ ಮಾಡಿದವರು ದಾರೆಂದು ಏನು ನಿಮಿತ್ತವೆಂಬುವಾಂ ಯುದ್ಧಾರಿಂ
ದು ನೆನಸದೆ ಅಜ್ಞಾನವು ಹೊದ್ದಿ ದೈವವನ್ನು ಮರತು ದುರ್ಗತಿಯನ್ನು ಹೊಂದುತ್ತಾ ಯುದ್ಧಾರೆ -
ಅರಸು ಒಬ್ಬ ತನ್ನ ಖಂಪನ ಮೇಲೆಕ ಪ್ರಾತ್ಮವಿಟ್ಟು ಅವನಿಗೆ ಅಪರೂಪವಾದ ಉಡುಗೊರೆ ಹಾ
ದ್ದಿಸಿ ಬಹಳ ರೂಕ್ಷಸ್ಥಾನಿಗಳು ಆಂದಣಾಗಳು ವಾಹನಾದಿಗಳು ಕೊಟ್ಟು ಸತ್ಪಾಂಗ ಬಹುಮಾ
ನಗಳದಂಯ ಮಾಡಿಕಳು ಹಿಂಸದವನಾದರೆ ಇಷ್ಟು ಬಹುಮಾನಗಳ ತಿಗದು ಕೊಂಡ ಮೇಲೆ ಅಂಥಾ
ಅರಸಿನಲ್ಲಿ ಬಂದು ಬೃತ್ಯ ಬಂದು ಸ್ಮರಣೆಯಾದರು ಯಿಲ್ಲದೆ ಬಂದುಸ್ತ್ರ ತಿ ಉಪಚಾರವಾದ
ರುನು ಬಿಯದೆ ತನಗೆ ಬಂದಂಥಾ ಬಾಗ್ಯಗಳು ನೋಡಿ ನೀವೆನನಗೆ ಅರಸು ನೀವೆನನಗೆ ದಿನ
ಮಗೆಸ್ತ್ರ ತಿಗಳೆಂದು ಹೇಳದರೆ ಅಂಥಾ ವಸ್ತು ಅಲ್ಪನೆಂದು ಹೀನನೆಂದು ಪಾಪಿಯೆಂದು ಅನ್ನಿಸಿ
ಕೊಳ್ಳನೆ - ಯಿದಲ್ಲದೆ ಅರಸಿನ ಚಿತ್ರವು ಕೆಟ್ಟು ಅರಸಿಗೆ ದೂರಸ್ಥನಾಗಿ ತಿಗದು ಕೊಂಡ ಬಾಗ್ಯ
ಗಳ ಆದ್ಯಂತವು ಕಳಕೊಳ್ಳಿಕ್ಕೆ ಮಾರ್ಗವ ಮಾಡಿ ಕೊಳ್ಳುವದಲ್ಲವೆ - ಅದೇ ರೀತಿಯಾಗಿ ಸ್ವಲ್ಪ
ಬುದ್ಧಿಯ ಮನುಷ್ಯರು ತಮಗೆ ಉಪಕಾರವಾಗಿಯೂ ಪರಿಚಾರವಾಗಿಯೂ ಪ್ರಪಂಚದ ವಸ್ತು
ಗಳನ್ನೆಲ್ಲಾ ಸೃಷ್ಟಿಸಿದ ಅನಂತದಯಾರಸವುಳ್ಳ ದೇವರನ್ನು ನೆನಸದೆ ಸ್ತೋತ್ರವು ಮಾಡದೆ ತಮ

ಗೆ ಅಧಮವಾಗಿರುವ ವಸ್ತುಗಳೇ ಗತಿಸ್ವರೂಪವಾಗಿ ಯಿಷ್ಟು ಪಾಪಕ್ಕೆ ಯೆಷ್ಟು ಶಿಕ್ಷೆಯುಷ್ಟು ಕಷ್ಟ ಗಳು ಬರುವವೋ ನರಕಾನುಭವದ ಸಂಗತಿ ಳಿದೇತಲ್ಲದೆ ಹೇಳಿಕ್ಕೆ ಶಕ್ಯವಲ್ಲವು —

ಪ್ರತಿಮೆಗಳು

ಇಂಥಾ ಅಶ್ವತ್ವಕ್ಕೆ ವಳಗಾದ ತರುವಾಯ ಮತ್ತು ಮತ್ತು ಅವಿವೇಕ ಹೆಚ್ಚಿ ತಮ್ಮ ಅಜ್ಞಾನಕ್ಕೆ ಕಡೆಯಿಲ್ಲದ ಹಾಗೆ ಮಾಡುತ್ತಿದ್ದಾರೆ ನಮಗೆ ಉಳಿಸಿ ಕೋಸ್ಕರವಾ ಉಂಟಾದ ವಸ್ತುಗಳು ದೇವರ ಸ್ವರೂಪವೆಂದು ನೋಡುವದಲ್ಲದೆ ಯಿದು ಸಾಲದೆಂಯನ್ನ ತಮ್ಮ ಉಪಮೆಗಳಿಂದ ಸಾವಿರ ಪ್ರತಿಮೆಗಳನ್ನು ಪುಂಟು ಮಾಡಿ ಅವುಗಳಿಗೆ ಪ್ರಳಯವಾಗಿ ಪೂಜಾನಮಸ್ಕಾರಗಳು ಅರ್ಪಿಸುತ್ತಿದ್ದಾರೆ- ಮತ್ತು ಬಂದು ಲೋಹವಾದರೂ ಮರದ ಕೊರಡನಾದರೂ ಹೊರಗೆ ಬಿದ್ದಿರುವ ಕಲ್ಲನ್ನಾದರೂ ತರಿಸಿ ಪಂಚಾಳದವರಿಗೆ ಒಪ್ಪಸಿದರೆ ಅವರು ಆ ಕೊರಡನ್ನೇ ಆ ಕಲ್ಲನ್ನೊ ತಮ್ಮ ಕಾಲುಗಳ ಕೆಳಗೆ ಹಾಕಿಕೊಂಡು ಸಾವಿರ ಪೆಟ್ಟುಗಳು ಹಾಕಿ ಕೆತ್ತಿ ಬೀಗೂ ಹಾಗೂ ಅವಯವಗಳನ್ನು ಯೇರ್ಪಡಿಸಿ ಮಾಡಿದರೆ ಕಡೆಯಲ್ಲಿ ಅವರಿಗೆ ಬಂದು ದೇವರಾಗುತ್ತಾಯಿದ್ದೀತು- ಈ ಪ್ರತಿಮೆಗೆ ಏನನ್ನಬಹುದು- ಎಲ್ಲಿ ನೋಡಿದರು ತಾಶಿರಾ ಮೇಕ್ಷೇತ್ರದಲ್ಲು ಇದೇ ಪ್ರವರ್ತಿಸಿ ಪ್ರಳಯವಾಗಿ ನಡೆಯುತ್ತಾ ಇದ್ದೀತು- ಇಂಥಾ ಗೊಂಬೆಗಳ ಪ್ರತಿಷ್ಠೆ ಮಾಡಿದ ಸ್ಥಳಗಳು ಎಷ್ಟೋ ಗೃಹಗಳು ಯೆಷ್ಟೋ ಅವುಗಳಿಗೆ ಸತ್ತರು ಬದುಕಿದರು ಅವುಗಳ ಹೆಸರಿಟ್ಟು ಗುಡಿಗೋಪುರ ಕಟ್ಟಿಸಿ ಎಷ್ಟೋ ಆರಂಭಗಳು ಮಾಡುತ್ತಿದ್ದಾರೆ- ವಡವೆ ವಸ್ತ್ರಗಳು ಅಲಂಕಾರಗಳು ಜಾತ್ರೆಗಳು ಮೇಳಧ್ವನಿಗಳು ವೇಶ್ಯಾಸ್ತ್ರೀಯರ ಆಟಪಾಟಗಳು ಪುಷ್ಪ ಧೂಪ ದೀಪಾರಾಧನೆಗಳು ಪೂಜಾಜಪನೈವೇದ್ಯಗಳು ಅಭಿಷೇಕಗಳು ಪ್ರದಕ್ಷಿಣೆಗಳು ರಥೋತ್ಸವಗಳು ಇವು ಮೊದಲಾದವು ಮಿತಿಯಿಲ್ಲದಲೆ ಮನಸ್ಸು ಪ್ರಕಾರವಾಗಿ ಕೆತ್ತಿದ ಕೊರಡಿಗೂ ಕಲ್ಲಿಗೂ ನಡಸುವಾಗ ಯೇನನ್ನಬಹುದು- ಪಾಪದ ಗೊಂಬೆಯೂಟಗಳೇ ಸರಿ- ಪೂರ್ವದಲ್ಲಿ ವೇಮನ್ನು ಹೇಳಿದ ಹಾಗೆ॥ ಪದ್ಯ- ಕಷ್ಟ ರಾಳ್ಳದಿಚ್ಚಿ ಕಾಳ್ಳ ಕ್ರಿಷ್ಣ ಸೊಪಟ್ಟ ಕಾನಿವುಳ್ಳುಲಬಾತ ಘೂಸಿ ವಿಟ್ಟ ಕಾಳ್ಳು ಬೇತುಲು ಜಾಯ

ಶಾಬಲಕೊಡುಕುಲಾ ವಿಶ್ವದಾಭಿರಾಮ ವಿನುರ ವೇಮ- ಅಂದ ಹಾಗೆ ಗುಡ್ಡದ ಕಲ್ಲುಗಳನ್ನು ತಂದು ಕಾಲು

ಗಳ ಸಂಗಡ ತುಳಿದು ಬಿಡಿದು ಕಿವಿ ಪುಳಗಳಿಂದ ಘಾಸಿಮಾಡಿ ಕಾಲುಕೈಗಳ ಮಾಡಿದ ಕಾಬಿಯ ವರಮುಕ್ಕಳನೆ

ಈದೇಶವೆಲ್ಲಾ ಬಂಧಿಸುವದು ಯಾತಕ್ಕೆ- ಪದ್ಯ- ಪಡಿವಡಿ ಮ್ರೊಕ್ಕುಚುನ್ನಾರಲು ಗುಡಿಲೋಪಲ ಜಡುಗು ಶಿಲ

ಲಗು ಸಾಮುಲು ಜಡುನೆ ಗುಡಿದೇವುಡು ಶಿಲದೇವುಡು ಜಡುರಾಳ್ಳಕು ಪೂಜಶಾಯ ಜಲ್ಲುನೆ ವೇಮ —

ಅಂದ ಹಾಗೆ ಬಿದ್ದು ಬಿದ್ದು ವಂದಿಸಲ್ಯಾತಕ್ಕೆ ಗುಡಿ ಒಳಗೆ ಇರುವ ಕೆಟ್ಟ ಕಲ್ಲುಗಳಿಗೆ ಸಾಗಳು ಕೇಡುವ

ದಿ ಗುಡಿಯು ದೇವರು ಶಿಲೆಯು ದೇವರು ಎಂದು ಶಿಲೆಗಳಿಗೆ ಪೂಜೆ ಮಾಡುವದು ಸಲ್ಲುವದೆ- ಪದ್ಯ- ರಾತಿ

ಪ್ರತಿಮೇನು ಚೆಲಿ ರಾಜವಿಧಿಲೊ ಪೆಟ್ಟಿ ಪೂಜಸೇತುರು ನರುಲು ಬುದ್ಧಿಮಾಲಿ- ಆತ್ಮಯಂದು ಜ್ಞಾನಮುದಿಯು

ನು ತೆಲಿಯದು ವಿಶ್ವದಾಭಿರಾಮ ವಿನುರ ವೇಮ- ಕಲ್ಲು ಪ್ರತಿಮೆಯನ್ನು ತಂದು ರಾಜಬೀದಿಯೊಳಿಟ್ಟು ಪೂ

ಜೆಯನ್ನು ಮಾಡುತ್ತಾಯಿರುವರು ಬುದ್ಧಿಯಿಲ್ಲದೆ ಆತ್ಮನಲ್ಲಿ ಜ್ಞಾನವೆಂಬುವದು ತಿಳಿಯದೆ ಈಗಲು ಕೆಲಬ

ರು ಅದೆಲ್ಲ ವ್ಯರ್ಥವೆಂದು ಬುದ್ಧಿಹೀನವೆಂದು ಗ್ರಹಿಸುತ್ತಿದ್ದಾರೆ- ಕೆಲಬರು ತಮ್ಮ ವಿಗ್ರಹಗಳಿಗೆ ಗೊಂಬೆಗಳೆ

ಂದು ಕಲ್ಲುಗಳೆಂದು ಸರಿಯುಟ್ಟು ಕೇಳುವವೇಳೆಯಲ್ಲಿ ಕೋಪವ ಮಾಡಿಕೋಪವ ತಂದುಕೊಂಡು ದೇವರನ್ನ

ಗೊಂಬೆ ಪಾಷಾಣವೆಂದೆನ್ನಬಹುದೆ- ವಿಗ್ರಹಪ್ರತಿಷ್ಠೆ ಮಾಡುವ ಮುಹೂರ್ತದಲ್ಲಿ ಒಳ್ಳೆ ಬ್ರಾಹ್ಮಣರನು ಬ

ಂದು ಮಂತ್ರಸಾಮರ್ಥ್ಯದಿಂದ ಅದರಲ್ಲಿ ಜೀವಕಳೆ ತುಂಬಿರ್ಮಂತವು ತುಂಬಿಲ್ಲವೆ ಯಂದೆನ್ನುತ್ತಿದ್ದಾ

ರೆ- ಬ್ರಾಹ್ಮಣಗೆ ಅಂಥಾ ಸಾಮರ್ಥ್ಯವೆಲ್ಲಿಯದು- ತಾನು ತನ್ನ ಹೆಂಡತಿ ಜೀವಸಂಕಟದಿಂದ ಯಿರುವಾ

ಗಲು ತನ್ನ ಜೀವಕಳೆಯನ್ನು ಕೊಟ್ಟು ಆಕೆಯ ಜೀವವು ಒಂದು ಘಳಿಗೆಯು ನಿಲ್ಲಿಸುವದಕ್ಕೆ ತ್ರಾಣ

ವಿಲ್ಲದವನು ದೇವರ ಕಳೆಯ ದೇವರ ಮೂರ್ತಿಗಂತ ಕಲ್ಲಿಗೆ ಕೊಡುವನೆ- ದೇವರ ಕಳೆಯಂಥಾದ್ದು

ಎಲ್ಲಿ ಇತ್ತು- ಎಲ್ಲಿಂದ ತಂದಿಟ್ಟುಯಿದ್ದಾನೆ ಹೇಳಿದರೆ ಕೈಕುರು ಹೀನು- ಪನಾದರೂ ಒಂದು ಹಿಡಿ ಅ

ನ್ನವ ದೇವರ ಮುಂದೆ ತಂದಿಟ್ಟರೆ ಒಂದು ಮಂತ್ರವಾದರು ತಿನ್ನಲಿಕ್ಕೆ ಅವಕಾಶವುಂಟೋ ವಾದ್ಯಗಳು

ನಿತ್ಯಾ ಹೇಳ್ಳಾ ಪಂಚಾಂಗಶ್ರವಣಗಳು ಅದು ಕೇಳುವದಕ್ಕೆ ಕಿವಿಗಳುಂಟೋ ತನಗೆ ಮಾಡಿದ ಬಹು

ಮಾನ ಅವಮಾನವನೇನಾದರು ಬಲ್ಲದೋ ಒಂದು ವೇಳೆಯಲ್ಲಿ ಸ್ಥಳೀಕರು ಯಜ್ಞರತಪ್ಪಿದರೆ ನಾಯಿ ಬಂದು ಹೊಂದಲಕಾಲಯೆತ್ತಿ ದೇವರಗರ್ಭಗುಡಿಯಲ್ಲಿ ಮೂತ್ರವನು ವಿಸರ್ಜಿಸಿದರೆ ಛೀ ಹೋಗು ನಾಯಿಯೆಂ ಬುವದಕ್ಕೆ ಅದಕ್ಕೇನಾದರು ಬಾಯಿವುಂಟೋ - ಕಾಜೀಕದಿಂದ ದೇವರಿಗೆ ವಿಮಾಗು ಕೊಯಿದು ಶರೀರವನ್ನೆಲ್ಲ ಸಾವಿರ ಹೋಳು ಮಾಡಿದರೆ ಪರಿಹರಿಸಿಕೊಳ್ಳಲಿಕ್ಕೆ ತ್ರಾಣವುಂಟೋ - ಆಸಮಯದಲ್ಲಿ ಬ್ರಾಹ್ಮಣನು ತುಂಬ ಲ್ಪಷ್ಟ ಕಳೆಯುವಮಾರ್ಗವುಂತವ್ಯಯಲ್ಲಿ ಹೋಯಿತು—

ಕುರುಬನು ಬ್ರಾಹ್ಮಣನು

ಕುರುಬನೊಬ್ಬನು ರಾಜಮಾರ್ಗದಲ್ಲಿ ಕುರಿಗಳಕಾಯುತ್ತಿರುವಾಗಲು ಆ ಮಾರ್ಗದಲ್ಲಿ ತುಂಬ ನೆರಳುಳ್ಳಂಥಾ ಒಂದು ವೃಕ್ಷವುಂಟಾಗಿರಲಿಕ್ಕಾಗಿ ಬಿಸಿಲಿಂದ ಅದರ ಕೆಳಗೆ ನಿಂತುಕೊಂಡಿದ್ದನು - ಅಷ್ಟರಲ್ಲಿ ಪುರೋಹಿತನಾದ ಒಬ್ಬ ಬ್ರಾಹ್ಮಣನು ಅದೇ ಮಾರ್ಗವಾಗಿ ಬಂದು ಬಿಸಿಲಿಗೆ ಬಳಲಿ ಆ ಮರದ ಕೆಳಗೆ ನಿಂತನು - ಆಗಲು ಕುರುಬರವನು ಕೈಗಳನ್ನು ಮುಗಿದು ಶರಣೆಂದು ಐಯ್ಯಾ ಸ್ವಾಮಿಗಳೆ ಈ ಬಿಸಿಲಿನಲ್ಲಿ ಪ್ರಯಾಣವೇನು ಎಲ್ಲಿಗೆ ಹೋಗುತ್ತಿದ್ದಿರೆಂದು ಕೇಳಿದರೆ ಆ ಪುರೋಹಿತನಾದ ಬ್ರಾಹ್ಮಣನು ಅಂದದ್ದು ದೊಡ್ಡ ಪ್ರಯೋಜನವುಂಟಾಗಲಿಕ್ಕೆ ಬಂದೆವು ಒಂದು ಗ್ರಾಮದಲ್ಲಿ ಹೊಸದಾಗಿ ಶಿಲಾವಿಗ್ರಹವನ್ನು ತೀರಿಸುತ್ತಾಯಿದ್ದಾರೆ ಈ ದಿನವು ಯಿಪ್ಪತ್ತೇಳು ಘಳಿಗ್ಯೆ ಒಳ್ಳೆಯಮುಹೂರ್ತವುಂಟಿರಲಾಗಿ ಅದಕ್ಕೆ ಮಂತ್ರಸಾಮರ್ಥ್ಯದಿಂದ ದೇವರಕಳೆಯನ್ನು ಹುಟ್ಟಿಸುವದಕ್ಕೆ ಹೋಗುತ್ತಿದ್ದೇನೆ - ನೀನು ಈ ಧರ್ಮಕಾರ್ಯಕ್ಕೆ ಏನಾದರು ನಮಗೆ ದಾನ ಕೊಟ್ಟೆಯಾ - ಕೊಟ್ಟೆಯಾದರೆ ಹೊಸದೇವರು ವರವ ಕೊಡುವನಲ್ಲವೆಯೆಂದನು - ಆ ಕುರುಬನು ಈ ಪೂರ್ವೋತ್ತರವನ್ನು ಕೇಳಿ ಐಯ್ಯ ಶಿಲಾಪ್ರತಿಮೆಗಳಿಗೆ ದೇವರಕಳೆ ಹುಟ್ಟಿಸುವದಕ್ಕೆ ನಿಮ್ಮಲ್ಲಿ ಅಷ್ಟು ಸಾಮರ್ಥ್ಯವುಂಟೋ ಇರುವದು ವಿಹಿತವಾದೀತು— ಅದು ಕಾರಣ ನಿಮ್ಮನ್ನು ದೇವಬ್ರಾಹ್ಮರೆಂದು ಭೂದೇವರೆಂದು ಅನ್ನುವರು ಹಾಗಾದರೆ ಒಂದು ವಿಜ್ಞಾಪನೆವುಂಟು ಈ ಮರ್ತ್ಯಲೋಕದಿಂದ ನನ್ನ ಕುರಿಗಳು ಅನೇಕವು ನಾಶವಾಗಿ ಹೋದವು - ನೀವು ಅ

ಪ್ರತಿ ಕೊಟ್ಟರಾದರೆ ಕುರಿಗಳಾಕಾರವಾಗಿ ಬೇಕಾದಷ್ಟು ಮರಳು ಕುರಿಗಳ ಮಾಡಿಕೊಂಡೇನು- ಅವುಗಳಿಗೆ ಕುರಿಯ ಕಳೆ ಹುಟ್ಟಿಸಲಾರೆ ಕಲ್ಲಿಗೆ ಜೀವಕಳೆ ಹುಟ್ಟಿಸುವದಕ್ಕಿಂತ ಹುಲ್ಲಿಗೆ ಅಲ್ಪಜೀವವಾದ ಕುರಿಯ ಕಳೆ ಹುಟ್ಟಿಸುವದು ಸುಕರವಲ್ಲವೆ ನಿಮ್ಮ ಮಂತ್ರಬಲದಿಂದ ಕುರಿಗಳು ಕುರಿಯ ಕಳೆ ಸಂಪಾದಿ ನಾಲ್ಕು ಹಾರಿಕೆ ಹಾರಿ ಹುಲ್ಲು ಮೇದರೆ ಆಶ್ಚರ್ಯವಾಗಿರುವದು ನಿಮ್ಮ ಸುಕೃತವೂ ನಿಮ್ಮ ಹೆಸರೂ ನಾನು ನೆನಸಿಕೊಳ್ಳುತ್ತಾ ಬದುಕುವೆನು ಈ ಹೊಸ ಕುರಿಗಳಿಂದ ಬಂದ ಹಾಲು ನಿಮಗೆ ಮುಟ್ಟುವದಲ್ಲದೆ ದಾರಿಗು ಇಲ್ಲವೆಂದನು ಕುರುಬರವನ ಯುಕ್ತಿಗೆ ಬ್ರಾಹ್ಮಣನು ಬದಲುತ್ತರ ಕೊಡದೆ ಸಿಟ್ಟಾಗೆದ್ದು ಅವನ್ನ ಎರಡು ಬೈದು ಸಿಟ್ಟಿನಿಂದಾಚೆ ಹೋದನು—

ಒಬ್ಬ ಬ್ರಾಹ್ಮಣನು—

ದೊಡ್ಡಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ಕೆಲವು ದಿನ ಬಡವನಾಗಿ ನಾಲ್ಕು ಮಾತುಗಳನ್ನು ಕಲಿತು ಕೋಮಟಿಗರ ಅಂಗಡಿಗಳಲ್ಲಿಯೂ ವಾಗಲು ಅವರನ್ನ ಆಶ್ರೈಸಿಕೊಂಡು ಪ್ರಿಯವಾದ ಮಾತುಗಳ ಸಂಗಡಲೂ ಮಿತಿಯಿಲ್ಲದ ಸ್ತುತಿಗಳ ಸಂಗಡಲೂ ಅವರನ್ನ ಮೆಚ್ಚಿಸಿ ಈ ಉಪಾಯದಿಂದ ವಸ್ತ್ರಹೀನತವನ್ನು ಕಳಕೊಂಡು ವಸ್ತ್ರಾಲಂಕೃತನಾಗಿ ತನ್ನ ಗೃಹಕೃತ್ಯವ ತೀರಿಸಿಕೊಳ್ಳುತ್ತಾ ಹತ್ತು ಹದಿನಾರು ವರಹಗಳ ಮುಷ್ಟಿಗೆ ಸಂಪಾದಿಸಿಕೊಂಡಿದ್ದನು- ಹೀಗಿರಲಿಕ್ಕೆ ತನ್ನ ಯಿಷ್ಟರಾದ ಕುಲದವರ ಸಂಗಡ ಸಂಭಾಷಿಸುವಾಗಲು ಅವರು ಯಿವನಿಗೆ ಬುದ್ಧಿ ಹೇಳುವರು- ನೀನು ದೊಡ್ಡವಿದ್ವಾಂಸನು ಬ್ರಹ್ಮಕುಲಜಾತನಾದೆ ನಾಲ್ಕು ದುಡ್ಡು ನಿನ್ನ ಕೈಯಲ್ಲಿ ಸಿಕ್ಕಿತು ನಿನ್ನ ಗೃಹದೊಳು ದೇವರುಗಳುಯಿಲ್ಲ ಶೂದ್ರರೀತಿಯೂ ನಿದ್ದೀಯೂ- ನಿನ್ನ ವೃತ್ತಿಯನ್ನ ತಪ್ಪಬಾರದು ಮನೆಯಲ್ಲಿ ದೇವತಾರ್ಚನೆ ನಡದರೆ ಜಯವಾಗುವದು ಭಾಗ್ಯವೂ ಬರುವದು ಪುತ್ರಪೌತ್ರಲಾಭವುಂಟಾಗುವದು ಯಿದು ತಪ್ಪಿತಾದರೆ ದೇವರ ಪೂಜೆ ಹೆಸರು ಹೇಳಿ ಶೂದ್ರಮುಂಡೆ ಮಕ್ಕಳಿಂದ ಯೇನಾದರು ಕಸುಕೊಳ್ಳಬಹುದು ಬ್ರಾಹ್ಮಣನು ಈ ಬೋಧೆಯನ್ನ ಕೇಳಿ ಬಹುಮಾನದಲ್ಲಿಯೂ ಅಧಿಕ ಭಾಗ್ಯದಲ್ಲಿಯೂ

ಈಯರಡರಲ್ಲಿಯೂ ಆಕಾಂಕ್ಷೆಯುಳ್ಳವನಾಗಿ ದೇವತಾವಿಗ್ರಹಗಳನ್ನು ಸಂಪಾದಿಸಲಿಕ್ಕೆ ಪ್ರಯತ್ನವನ್ನು ಮಾಡಿದನು- ಅವು ಅಗ್ಗವಾಗಿ ಸಿಕ್ಕಬೇಕೆಂದು ಯೋಚಿಸಿ ಬ್ರಾಹ್ಮಣರಿಗೆ ಗ್ರಾಸಕ್ಕೆ ಗೊತ್ತಾದರೆ ಅವರು ವಡವೆಗಳನ್ನು ವತ್ತೆಯಿಡದಕಿಂತ ಮುಂಚೆ ಮನೆಯ ದೇವರುಗಳಾದ ವಿಗ್ರಹಗಳನ್ನು ಮಾರಿಕೊಳ್ಳುವರೆಂದು ತಿಳಿದು ಆ ಸಮಯವನ್ನು ನೋಡಿಕೊಂಡು ಯಿರುತ್ತಿರಲಿಕ್ಕಾಗಿ ಒಂದು ಸ್ಥಳದಲ್ಲಿ ಬೇಕಾದದ್ದೆಲ್ಲಾ ದೊರೆಯಿತು- ಸಣ್ಣವು ದೊಡ್ಡವು ಹಿತ್ತಾಳೆಯವು ತಾಮ್ರದವು ನಾನಾ ಜಿನಸುಗಳು ಒಂದು ಪೆಟ್ಟಿಗೆಯಷ್ಟು ದೊರೆತವು- ಅವನ್ನು ಕ್ರಯವ ಮಾಡಿ ಕೆಲಸವೆಲ್ಲಾ ಬಿಟ್ಟು ಆ ದೈವಗಳನ್ನು ತಕ್ಕಡಿಯಲ್ಲಿ ಹಾಕಿ ತೂಗಿ ಜಿನಸು ಜಿನಸಿಗೆ ಲೋಹದ ಬೆಲೆಗಳ ಪ್ರಕಾರ ತೂಕಕ್ಕೆ ಸರಿಯಾಗಿ ಕೊಟ್ಟು ಅವುಗಳಂ ಮೂಟೆಯನ್ನು ಕಟ್ಟಿಕೊಂಡು ತನ್ನ ಮನೆಗೆ ಸಂತೋಷದಿಂದ ಹೊತ್ತುಕೊಂಡು ಬಂದವನಾದನು- ದೈವಗಳು ತನ್ನ ಮನೆಗೆ ಪ್ರವೇಶವಾದದ್ದಕ್ಕೆ ಮೊದಲು ಪೂಜಾರಾಧನೆ ಮಾಡುವದಕ್ಕೆ ಬಹಳ ಸಂಭ್ರಮವನ್ನು ಮಾಡಬೇಕೆಂದು ಯೋಚಿಸಿ ಅದಕ್ಕೆ ಯಮ್ಮೆಕಟ್ಟುವ ಮನೆಯನ್ನು ಬರಿದು ಮಾಡಿ ಸಾರಿಸಿ ಬಳಿದು ಅಲಂಕರಣಾರ್ಥವಾಗಿ ತನ್ನ ಮಿತ್ರಬಂಧುಗಳ ಮನೆಯಲ್ಲಿರುವ ಒಂದು ಚೀಟಿ ಬಣ್ಣದ ಬಟ್ಟೆಯನ್ನಾದರೂ ಒಂದು ಸೂರ್ತಿ ಬಟ್ಟೆಯನ್ನಾದರೂ ಕೇಳಿ ತರುವೆನೆಂದು ಯೋಚಿಸಿ ಅವುಗಳನ್ನು ತಂದು ಒಂದು ದೊಡ್ಡ ಜಗಲಿಯ ಮೇಲೆ ಹಾಸಿ ಕ್ರಯಕ್ಕೆ ತಂದ ದೈವಗಳನ್ನು ಸಾಲುಸಾಲಾಗಿ ತೀರಿಸಿ ಸ್ಥಾಪನೆ ಮಾಡಿದನು- ಮತ್ತು ಯಿಂಥಾ ದೊಡ್ಡ ಪ್ರಯೋಜನಕ್ಕೆ ಬ್ರಾಹ್ಮಣರಿಗೆ ಪುಣಿಸದೆಯಿದ್ದರೆ ಒಳ್ಳೆದಲ್ಲವೆಂದು ಎಲ್ಲರನ್ನು ಕರಸಿ ಸಮಾರಾಧನೆಯನ್ನು ಮಾಡಿಸಿದನು- ಅಪ್ಪರು ಕೂಡಿದ ವೇಳೆಯಲ್ಲಿ ಮೇಳಗಾರರನ್ನು ಕರಸಿ ದೀವಿಗೆಗಳನ್ನು ಹೇರಳವಾಗಿ ಮುಟ್ಟಿಸಿದನು- ಆ ಮೇಲೆ ವೈದಿಕ ಬ್ರಾಹ್ಮರನ್ನ ದೇವರ ಮನೆಯಲ್ಲಿ ಪ್ರತಿಮೆಗಳ ಸನ್ನಿಧಿಯಲ್ಲಿ ಕುಂಡ್ರಮಾಡಿದನು- ಅವರು ಕೆಲವು ಹೊತ್ತು ಮಂತ್ರಕಲಾಪವಾಗಿ ಘಟ್ಟಿಯಾಗಿ ಏಕಧ್ವನಿಯಿಂದ ಕೂಗಿದ ಕಾರಣ ಅಧಿಕವಾಗಿತ್ತು- ಪದ್ಯ- ಬಡಗು ಬ್ರಾಹ್ಮಲುಗೂಡಿ ಲಾಡನು ಮಂತ್ರಮು ಚದುವಿ ವಡುಗು ಸೇತಾಮನು ಚುವದುರು ಕೊನು ಚು- ಕಡುಗು ಡಾಗಿನ ಕಾಗ ಕಾವು ಕಾವನ್ನಷ್ಟು ವಿಶ್ರುತಾ ನಿರಾಮವಿನರವೇಮ-॥ ಅಂದ ಹಾಗೆ ಅನೇಕ ಶಾಸ್ತ್ರೋಕ್ತಗಳು ಸಾಂಗವಾಗಿ ತೀರಿಸಿ ಗೊಂಬೆಗಳ

ನ್ನು ಹಿಡಿದು ಧೂಪವ ತೋರಿಸಿ ಪುಷ್ಪಗಳು ಅವರುಗಳ ಮೇಲೆ ಹಾಕಿ ಆತುರವಾಯ ಮಾಡಿದಂಥಾ ಪದಾ
ರ್ಥವು ಅನ್ನ ಕಾಯಿಪಲ್ಯ ಕೊಟ್ಟಿಗಳು ನಾನಾರಸರಸಾಯನಗಳು ಪಕ್ವಾನ್ನಗಳನ್ನು ಅವಕ್ಕೆ ತೋರಿಸಿ
ಂತಾ ವಸ್ತು ಪತ್ರಿಯ ಬಡಿಸುತ್ತ ಕೊಂಡು ಭೋಜನವ ಮಾಡಿ ಕೈಬಾಯಿಗಳನ್ನು ತೊಳೆದು ದಕ್ಷಿ
ಣೆ ತಾಂಬೂಲಗಳನ್ನು ತೆಗೆದುಕೊಂಡು ಬ್ರಾಹ್ಮಣರ ಸಂಗಡದ ಮಹಾ ಸಂಭ್ರಮವಾಯಿತೆಂ
ದು ಹೇಳಿ ಹರಕೆಯನ್ನು ಕೊಟ್ಟು ತಮ್ಮ ತಮ್ಮ ಮನೆಗಳಿಗೆ ಹೋದರು - ಭೋಜನಕ್ಕೆ ಬಂದವರೊಳ
ಗೆ ಒಬ್ಬ ಕಳ್ಳ ಬ್ರಾಹ್ಮಣನಿದ್ದನು ಎಲ್ಲರು ಉತ್ಸಾಹ ನೋಡುತ್ತಿರುವಾಗ ತಾನು ದೇವರ ಮನೆಯಲ್ಲಿ
ರುವ ವಸ್ತು ಗುರುತು ಗುರುತಾಗಿ ನೋಡಿಕೊಂಡು ಕದವ ತೆಗೆಯುವ ಬಗೆಯನ್ನು ನೋಡಿಕೊಂಡಿದ್ದು
ಷ್ಟು ಆ ರಾತ್ರಿ ತನಗೆ ಒಳ್ಳೇ ಸಮಯವೆಂದು ತಿಳಿದು ಶುಕ್ಲಪಾದ್ಯದಲ್ಲಿ ಬಂದು ಯಿದಲ್ಲದೆ ಮ
ನೆಯವರೆಲ್ಲ ಹೊಟ್ಟೆ ತುಂಬ ಉಂಡು ನಿದ್ರಾಭರದಿಂದ ಮರೆತು ಇರುವದು ಕಂಡು ಈಯ
ರಡನ್ನು ಯೋಚಿಸಿ ಕತ್ತಲು ವೇಳೆಯಲ್ಲಿ ಬಿಸುಕದ ಹಾಗೆ ಆ ಮನೆಯ ಬಾಗಲು ಸಪ್ಪಳಾ
ಗದ ಹಾಗೆ ತೆರೆದು ಅದರಲ್ಲಿರುವ ಶೇಕೆಗಳು ವಿಗ್ರಹಗಳು ಬಂದು ಪೆಳ್ಳಿಯದ ಹಾಗೆ ತೆಗೆ
ದುಕೊಂಡು ಮೊಟ್ಟೆ ಕಟ್ಟಿ ಪಕಗಂಪು ಮಾಡಿ ಗುಜದ ಮೇಲೆ ಇಟ್ಟುಕೊಂಡು ಹೊರಗೆ ಬರುವ ಸ
ಮಯದಲ್ಲಿ ಅಂಗಳದೊಳಗೆ ಒಂದು ನಾಯಿ ಇತ್ತು - ಆ ಶುನಕನ ಮಹಾ ಪೌರ್ತ್ರವೇನೆಂದರೆ -
ಒಂದು ಕಾಲು ಮುರಿದು ಮೂರು ಪಾದಗಳಿಂದ ನಡೆಯುವದು - ಇಂಥಾ ಕುಂಟ ಪಾದದವರನ್ನು ಸಾಕುವವ
ರಿಲ್ಲದೆ ಬ್ರಾಹ್ಮಣರ ಮನೆಯ ಎಂಜಲ ಪತ್ರಾವಳಿಗಳನ್ನು ತಿಂದು ಆ ವಿಪ್ರರ ಸಂಗಡ ಬಾಗಲು ಕಾ
ದುಕೊಂಡಿರುವದು ಆ ನಾಯಿ ಎಚ್ಚತ್ತು ಹೊರಗೆ ಬರೋ ಕಳ್ಳನ್ನ ನೋಡಿ ಪರಾಯಿಯವನೆಂದು ಕೂ
ಗಿ ಜನಗಳಿಕ್ಕೆ ಹೋಗಿ ಅವನ ಕಾಲು ಹಿಮ್ಮಡಿಯನ್ನು ಹಿಡಿದು ಕಚ್ಚಿ ಬಿಡದೆ ಇತ್ತು - ಕಳ್ಳಗೆ ಬಹು ಸಂಕ
ಟವಾಗಿ ದೊಡ್ಡ ಮೊಟ್ಟೆ ಒಂದು - ನಾಯಿಯ ಬಾಧೆ ಒಂದು ಅಲ್ಲಿಯವರು ನೋಡ್ಯಾರು ಅದ್ದರಿಂದ ಬಾ
ರದೆಂಬ ಭಯ ಒಂದು - ಕಡೆಗೆ ಹಾಗೂ ಹೀಗೂ ನಾಯಿಯ ಸಂಗಡ ಬಡಿದಾಡುತ್ತ ತನಗೆ ಹೊಂ
ದಗದೆ ಬಾಗಿಲಿಂದ ತಾನಾದಕಾಲು ಜಾರಿ ಅದರಲ್ಲಿ ಬಿದ್ದನು ಬೀಳೋದು ತುತ್ತಿಗೆ ಮುರಿದು ಜೀವ

ಹೋಯಿತು- ಆನಾಯಿ ಕೆಲವು ಹೊತ್ತು ತಾನಿ ನೋಡಿಸುವ್ವನೆ ಆಯಿತು- ಪ್ರಹಾದಯವಾದಬಳಿಕ ಆಯ
ಜಮಾನನು ಎದ್ದು ತನ್ನ ಮನೆಪ್ಪನಲ್ಲಿ ದೇವರಮನೆಯೊಳಗೆ ಪರರವದವೆಗಳು ಕೀರೆಗಳು ಕಟ್ಟಿಯಿಟ್ಟಿಯಿದ್ದೆ
ನಲ್ಲ ಅವುಯಾಕೆಂಯರ ಬೇಸು ಯಿದ್ದರೆ ಹೋಗುವದೊ ಬರುವದೊ ಯಿರಬಾರದು ಆಲಸ್ಯವಾದದೆ ಕೊಟ್ಟು
ತೀರಿಬಿಡುವದುತ್ತಮವೆಂದು ದೇವರಮನೆಗೆ ಹೋಗುವಾಶ್ರಮವೇ ಬಾಗಲು ತೆರದಿರುವದು ನೋಡಿ
ಬಾಯಲ್ಲಿ ತ್ರಾವವಿಲ್ಲದೆ ಒಳಕ್ಕೆ ಪ್ರವೇಶಿಸಿ ನೋಡಿದರೆ ದೇವರುಗಳುಯಿಲ್ಲ ಕೀರೆಗಳೂಯಿಲ್ಲ ವದವೆ
ಗಳೂಯಿಲ್ಲ ಏನೂ ಇಲ್ಲದೆಯಿಲ್ಲಾ ಹಾಳಾಗಿರಲು ದೇಹವಮರತು ಕೊಡ್ಡ ಶಿಡಿಲು ಕಿರಪ್ಪನವೋಲಿ ಬಿದ್ದ
ಹಾಗೆ ಮೂರ್ಛಿತನಾಗಿ ಬಿದ್ದನು- ಕೆಲವು ಹೊತ್ತು ವೃಥೆಪಟ್ಟು ಅಯ್ಯೊ ದ್ರೈವವೆಯೂ ವಗ್ರಹಜಾರವು ನನ್ನನ್ನು
ಸುತ್ತಿಕೊಂಡಿತು ಈ ಹೊತ್ತಿಗೆ ನನ್ನ ಮಾತು ಸರಿ- ಯುವ್ವ ಒಟ್ಟು ಹೋದಿದ್ರೈವಗಳು ನನ್ನ ಮನೆಗೆ ಹೊತ್ತುಕೊಂ
ಡು ಬಂದಾಗಲೆನಾನು ನನಗೆ ಹಾನಿತಂದುಕೊಂಡೆನು- ಕನೀತಂದುಕೊಂಡೆನು- ಅವುತಾಂಪ್ರದತುಂ
ಡುಗಲ್ಲದೆ ದ್ರೈವಗಳಿನ್ನ ಬಹುದೆ- ದ್ರೈವಗಳಾದರೆ ತಮ್ಮನ್ನ ಕಳ್ಳತನದಿಂದ ಎತ್ತಿಕೊಂಡು ಹೋಗುವವನ ದೃಷ್ಟಿ
ಕೆಡಿಸಬಾರದೆ ತಾವು ಹೋದರೆ ಬೇಡೆ ಹೋಯಿತು ಪೂರವರವದವೆಗಳನ್ನು ಎಲ್ಲಿಂದ ತರಲಿ- ಕವುಳತನೆ
ಕ್ಕೆ ಹುಟ್ಟಿದ ಗಾರಡಿಗ ಬ್ರಾಹ್ಮರಮಾ ತನ್ನ ಕೆಲ್ಸ ಕೆಟ್ಟೆನು- ಬಾಕ್ರುವು ಬರುವದಂತೆ ಯಿರಲಿ ಯಿದ್ದದ್ದು ಹಾಳಿ
ಹೋಯಿತು ನನ್ನ ಮನೆ ಮುಳುಗಿತು ಮಾಜಿ ಹೋಗಲಿಕ್ಕೆ ಪಕ್ಷವಾಯಿತು- ಪೂರ್ವಕ್ಕೆ ಕೆಟ್ಟ ಕೋಮಟಿಗ
ನಿಗೆ ಮೆಟ್ಟಿಹಳ್ಳಿಗಡಿಯಂಬ ಶಾಸ್ತ್ರವಾಯಿತು- ಅಂಗಡಂಗಡಿಗೆ ಬಿಕ್ಷಾ ಎತ್ತಿದ್ದೆಲ್ಲಾ ಯಂದಿಗೆ ಬರು
ವದು- ಈ ಪಟ್ಟಣದೊಳಗೆ ದಿಕ್ಕುಯಿಲ್ಲ ಯಿದು ಪಟ್ಟಣವೋ ಅಢ್ಯಾನವೋ ಯಿದಕ್ಕಿಂತ ಅಡವಿಯೆ ಮೇ
ಲು ಎಂದು ಕ್ಷೋಭೆಯಲ್ಲಿ ದುಃಖಿತನಾಗಿ ಪ್ರಲಾಪಿಸುತ್ತಿರುವ ಸಮಯದಲ್ಲಿ ಶ್ರಿಪಾದಿಂಯೂದನಾಯಿಯು ಬಾಲವನ್ನಲ್ಲಾ
ಡಿಸಿಕೊಳ್ಳುತ್ತಾ ಮನೆ ಬಾಗಲಪಕ್ಕಿಂಯಂತರಕ್ಕೆ ಬಂದು ತಿರುಗಿ ಬಾವಿಹತ್ತರಕ್ಕೆ ಹೋಗುವದು ತಿರು
ಗಿ ಬರುವದು ತಿರುಗಿ ಹೋಗುವದು- ಹೀಗೆ ತಿರುಗುವನಾಯನ್ನ ನೋಡಿ ದುಃಖಿಸುವವನಿಗೆ ಸಂದೇಹ
ಹುಟ್ಟಿತು- ಬಳಿಕ ಯಿದು ಯೇನು ಯಂದಿಗು ಹೀಗೆ ನನ್ನ ಮುಂದೆ ಬಾಲವನಲುಗಿಸುತ್ತಾ ಕಿವಿಯಂ
ಜೊಗ್ಗಿಸಿ ಅಂತರದಲ್ಲಿ ಕೀರ್ತಿವಾದ ಸ್ವಾಸಧ್ವನಿಯಿಂದ ಈ ಶುನಕವು ಯಿಂದಿನಲ್ಲಿ ಯಿಲ್ಲಿಗೆ ಬರುವದೇನು ಬಾ

ವಿಯುಸವಿೂಪಕ್ಕೆ ಹೋಗುವದೇನು ಯಿದನ್ನು ಪರೀಕ್ಷಿಸಲೆಂದು ತಾನೆದ್ದು ಬಂದು ಆ ವಿಯೊ[illegible]ನ್ನು ಬೊಗ್ಗಿ ನೋಡುವಾಗ್ಗೆ ಅದರಲ್ಲಿ ಬಿಳಿಯ ವಸ್ತ್ರದ ಮೊಟ್ಟೆ ಒಂದು ಮತ್ತು ಆ ವಿಯೊಳಗೆ ಬಿದ್ದ ಮನುಷ್ಯನ ಹೆಣವು ಕಾಣಿಸಿತು - ಅದರಿಂದ ಸಂತೋಷದಿಂದ ಮನೆಯ ಹೆಂಗಸರೊಡನೆ ತಿಳಿಸಿ ತಾನೇ ಆ ವಿಯೊಳಕ್ಕೆ ಇಳಿದು ನೋಡಲಾಗಿ ಮೊಟ್ಟೆಯು ತನ್ನದು ಮನುಷ್ಯನ ಗುರುತು ನಿಧಾನವಾಗಿ ಶೋಧಿಸಿ ನೋಡಲು ನಿನ್ನೆ ತನ್ನ ಮನೆಯಲ್ಲಿ ಭೋಜನಮಾಡಿದ ಬ್ರಾಹ್ಮಣನಾಗಿ ಗುರುತು ಸಿಕ್ಕಿತು - ಆಗಲಾ ಬ್ರಾಹ್ಮಣನು ಅಯಲಾ ಪಂಚಮಹಾಪಾಪಿಯೆ ನಿನ್ನೆ ನನ್ನ ಮನೆಯಲ್ಲಿ ಉಂಡು ನನಗೆ ಅಲ್ಪವಿಲ್ಲ ಸಿದ್ಧೊ - ನನಗೆ ಅನುಕೂಲವಾಯಿತೆ ನಿನ್ನ ದೋಷವು ನಿನ್ನ ಸುತ್ತಿಕೊಂಡಿತೆಂದು ಹೇಳಿ ಪಾದುಧೊತ್ರವನ್ನು ತೆಗದು ಮೊಟ್ಟೆಯ ಸಂಗಡ ಕಟ್ಟಿ ಹಗ್ಗವೆಸ ಹಾಯುವಾಗಿ ಮೇಲಕ್ಕೆ ಬಂದನು - ಆ ವೇಳೆಯಲ್ಲಿ ನೋಡಲಿಕ್ಕೆ ಬಂದ ನೆರೆಹೊರೆಯವರನ್ನು ನೋಡಿ ಅಣ್ಣಾಗಳಿರಾ ಅಕ್ಕಗಳಿರಾ ಕೇಳಿ ಈ ನಾಯಿಯು ನನಗೆ ಬಂಧುವು ಈತನಂತೆ ನಾಯಿ ಯಾರ ಯಿದೇ ನನ್ನ ಮನೆಯ ದೇವರಿಗಿಂತ ಹೆಚ್ಚೆಂದು ಹೇಳಿದನು ಈ ಮಾತು ಕೇಳಿದವರು ಅದಕ್ಕೆ ವಿಪ್ರದ ಹಾಗೆ ನಗುವಿನ ಸಂಗಡ ಹೋದರು - ಆ ಮೇಲೆ ಆ ಬ್ರಾಹ್ಮಣನು ಅವರವರ ವಸ್ತ್ರಗಳನ್ನು ಅವರವರಿಗೆ ಕೊಟ್ಟು ಸುಖದಿಂದಯಿದ್ದನು - ಅದರಿಂದ ಮನೆದೇವರುಗಳಾದ ತಾಂಬ್ರವಾದಿ ಪ್ರತಿಮೆಗಳು ಯಿಪ್ಪೇನರಿ -

ರಾಯರ ಕಾಲದಲ್ಲಿ ಆದದ್ದು -

ರಾಯರು ಒಂದು ರಾಜ್ಯವನ್ನು ಆಳುತ್ತಿರುವಾಗಲು ಅಪ್ಪಾಜಿಯೆಂಬವ ಪ್ರಧಾನಿಯಿದ್ದನು ಆತನು ಯುಕ್ತಿಯಿಂದ ಚಾತುರ್ಯ ವಿವೇಕ ಸಂಪನ್ನನಾದ ಕಾರಣ ಕೃಷ್ಣರಾಯರು ಆತನ ಮೇಲೆ ಕರುಣಾ ವಿಶ್ವಾಸವಿಟ್ಟು ಆಲೋಚನೆಗಾದರೂ ದಾವ ಸಂಶಯಕ್ಕಾದರೂ ಅಪ್ಪಾಜಿಯ ಮಾತು ಮುಖ್ಯವಾಗಿರುವದು - ಹೀಗಿರಲಾಗಿ ಒಂದಾನೊಂದು ದಿನ ಪ್ರಸ್ತಾಪವಾಗಿ ರಾಯರು ಅಪ್ಪಾಜಿಯನ್ನು ಬಂದು ಮಾತು ಕೇಳಿದರು - ಯೇನೈಯ್ಯ ಜನರು ಲೋಕಾತೀತರು ಎಂಬ ವಾಕ್ಯವು ನಡೆಯುತ್ತಾಯಿದ್ದೀತಲ್ಲ ಅದಕ್ಕೆ ನಿದರ್ಶನವನ್ನು ಮಾಡಿ ತಿಳಿಸಲಾರೆಯಾ ಎಂದು ಕೇಳಲು

ಅದಕ್ಕೆ ಅಪ್ಪಾಜಿ ಅಂದದ್ದು ಸ್ವಾಮಿ ನಿಮ್ಮ ಕೃಪೆಯಿಂದ ಆಗೋಣ ಮಾಡಬಹುದು ಎಂದ ಮೇಲೆ ಒಡ್ಡೋ
ಲಗ ತೀರಿದ ತರುವಾಯ ಅಪ್ಪಾಜಿ ತನ್ನ ಮನೆಗೆ ಹೋಗಿ ಅರ್ಥವನ್ನು ತಿಳಿಸುವ ಬಗ್ಗೆ ಒಂದು ವಿನೋದ
ವ ಮಾಡಿದನು ಅದೇನೆಂದರೆ ತನ್ನ ಸಂಬಳದವರಲ್ಲಿ ಒಬ್ಬ ಕುರುಬರವನು ಇದ್ದನು ಅವನ ಬುದ್ಧಿಯು
ಅವನ ಶರೀರವು ಮಹಾ ಮಂದವಾಗಿಯೂ ದೇಹವಾದ್ಯಂತವು ಬಾಜ್ಜಾಗಿಯೂ ರೋಮಗಳು
ಬೆಳೆದು ಇದ್ದವು - ಅಂಥಾವನನ್ನು ಅಪ್ಪಾಜಿಯವರು ತಾನು ಮಾಡಹೋಗುವ ಕಾರ್ಯಕ್ಕೆ ಆವನ್ನೆ ಆ
ಶೆಯಿಂದಲೂ ಹಣದಿಂದಲೂ ಒಡಂಬಡಿಸಿ ಅವನ ತಲೆಯ ಕೂದಲು ಜಡೆಯನ್ನು ಹಣಿಸಿ ನಖ
ಶಿಖ ಪರಿಯಂತರ ಭಸ್ಮವನ್ನು ಮೈಗೆ ಲೇಪವ ಮಾಡಿಸಿ ಕೃಷ್ಣಾಂಜನವ ಕಣ್ಣಿಗೆ ಹಚ್ಚಿ ಒಂದು ಕಟ್ಟಳೆಯ
ಮಾಡಿ ಎಚ್ಚರಿಸಿದನು - ಎಲೋ ಕುರುಬರವನೆ ನೀನು ಬೆಳಗಾಗದಕಿಂತ ಮುಂಚೆಯೇ ಗೋಪ್ಯವಾಗಿ
ಹೋಗಿ ಪಟ್ಟಣಕ್ಕೆ ಪಡುವಣ ದಿಕ್ಕಿನಲ್ಲಿರುವ ಗುಡ್ಡವನ್ನು ಏರಿ ಅಲ್ಲಿರುವ ಗವಿಯಲ್ಲಿ ಜಿಂಕೆಯ ಚರ್ಮ
ವನ್ನು ಹಾಸಿ ಕುಳಿತುಕೊಂಡಿರು ಆದರೆ ಎಚ್ಚರಿಕೆಯಾಗಿ ಧ್ಯಾನದಲ್ಲಿರು ಕಂಡ್ಯಾ ಯಾರಾದರು ಬಂದು
ಮಾತನಾಡಿಸಿದರೂ ಉಪದ್ರವ ಮಾಡಿದರೂ ರೋಮಗಳನ್ನು ಕಿತ್ತರೂ ಬಾಯಿ ಬಿಡದ ಹಾಗೆ ಒಂದು
ಮಾತನು ಆಡದೆ ಸುಮ್ಮನಿರು - ಯಾಕೆಂದರೆ - ನುಡಿದೆಯಾದರೆ ನಿನಗೆ ಪ್ರಾಣಕ್ಕೆ ಹಾನಿ ಬರುವದು ಸು
ಮ್ಮನೆ ಮೌನವಾಗಿದ್ದರೆ ಬಹುಮಾನವುಂಟಾಗುವದು - ಮತ್ತು ಯಾರಾದರು ನಿನ್ನ ನೋಡಬಂದರೂ ನಮ
ಸ್ಕಾರ ಮಾಡಿದರೂ ನೀನು ತಪಸ್ಸು ಮಾಡುವವನ ಹಾಗೆ ಮೂಗು ಹಿಡಿದು ಕೊಂಡು ನೆಲವನ್ನೋಡುತ್ತ ಸು
ಮ್ಮನಿರಬೇಕು ಎಂದು ಅವನಿಗೆ ಅಪ್ಪಾಜಿ ಕಟ್ಟಳೆ ಮಾಡಿದವನಾದನು - ಕುರುಬರವನು ತನ್ನ ಮನಸ್ಸಿ
ನಲ್ಲಿ ಇಟ್ಟುಕೊಂಡು ನನ್ನನ್ನು ನೋಡು ನನ್ನ ತಪಸ್ಸು ನೋಡು ಈ ಜಂಜಾಟವೇತಕ್ಕೆ ನನಗೆ ಬಂತು
ಆದರು ನನ್ನ ಧೊರೆ ಹೇಳಿದ ಹಾಗೆ ಕೇಳದಿರುವದು ತರವಲ್ಲವೆಂದು ತನಗೆ ಕಟ್ಟಳೆ ಮಾಡಿದ ಪ್ರಕಾ
ರವೆ ಗುಡ್ಡದ ಗುಹೆಯಲ್ಲಿ ಸೇರಿದನು ಆ ದಿವಸವೆ ಝಾವ ಹೊತ್ತಿನ ಮೇಲೆ ಅಪ್ಪಾಜಿ ರಾಯರ ಸ
ಮುಖಕ್ಕೆ ಹೋಗಿ ನಿತ್ಯವರ್ದಿ ಹೇಳುವದೆಲ್ಲ ಹೇಳಿ ಆಸಮಯದಲ್ಲಿ ರಾಯರ ಸಂಗಡ ಬಿನ್ನಹ
ಮಾಡಿದನು - ಸ್ವಾಮಿ ಆಳಿದವರು ಮಾಡಿದ ಸುಕೃತದಿಂದ ಮಹಾ ಆಶ್ಚರ್ಯವುಂಟಾಗಿದೆ -
ಏನೆಂದರೆ ನಗರ ಸಮೀಪದ ಪಡುವಣ ದಿಕ್ಕಿನಲ್ಲಿರುವ ಗುಡ್ಡದಲ್ಲಿ ಒಬ್ಬ ದಿವ್ಯ ಪುರುಷನು ಬಂದಿದ್ದಾ

ಗೆ ನೆ ಆತನು ಆಕಾಶದಿಂದಬಂದನೋ ದೇವಲೋಕದಿಂದಬಂದನೋ ಮರ್ತ್ಯಯನ್ನಿಂದಬಂದನೊ ತಿ
ಳಿಯ ಬಾರದು ಅವರಿಗೆ ವಾಯುವೇ ಆಹಾರವಂತೆ ಈ ಲೋಕದ ನಡತೆಗಳು ಅವರಿಗೆಷ್ಟಿಲ್ಲವಾದರು
ಪುತ್ರದಂತೆ ಮನುಷ್ಯರ ಸಂಗದ ನುಡಿಯುವದುಯಿಲ್ಲ ವಾಯುವುಗಳು ಬಿಗಿಹಿಡಿದು ತದೇಕಧ್ಯಾನದಿಂ
ದ ತಪಸ್ಸುಮಾಡಿಕೊಂಡು ಗವಿಯಲ್ಲಿ ಕುಳಿತುಯಿದ್ದಾರೆ ಅಂಥಾ ಮಹಾಪುರುಷರ ದರ್ಶನವು ದೊ
ರೆಯುವದು ಮಹಾದುಸ್ತರವು- ಪೂರ್ವದಲ್ಲಿಯಿದ್ದ ಅರಸುಗಳು ಚಕ್ರವರ್ತಿಗಳು ಅಂಥಾ ಮ
ಹಾತ್ಮರ ಆಶೀರ್ವಾದದಿಂದ ರಾಜ್ಯಾಭಿವೃದ್ಧಿಯಾಗಿ ಸ್ತುತಿಸಲ್ಪಟ್ಟರು - ನಾವುಯಿಂಥಾ ಮುಮು
ಕ್ಷರಿಗೆ ಪಾದಸೇವೆಮಾಡಿದೆ ವಾದರೆ ಆಯುರಾರೋಗ್ಯ ಸಕಲಭಾಗ್ಯ ಕಾರಣವಾ
ಗುವದು- ಹೀಗೆಂದು ಅಪ್ಪಾಜಿಯು ಬಿನ್ನಹವನ್ನು ಮಾಡಲು ರಾಯರು ಭಾಗ್ಯಬರುವಾಗ್ಗೆ ಒಲ್ಲೆ
ನೆಂಬುವರುಂಟೆ ದೊಡ್ಡಭೇರಿ ಹೊಯಿಸಿ ಸ್ವಾರಿಸಾರ ಹೇಳಿದನು- ಆಗಲು ಭೂಪತಿಯ ಸ್ವಾರಿ
ಮಿತ್ರವಾಗಿ ಸುದ್ದಿ ಹುಟ್ಟಿತೋಯಿಲ್ಲವೋ ಅಷ್ಟರಲ್ಲೇ ಪಟ್ಟಣಾವೆಲ್ಲವು ತೊಯಂಬುವ ಹಾಗೆ
ಪ್ರಜೆಗಳೆಲ್ಲಾ ಬಾಲಕಾಮೊರೆಯುಷ್ಟವ ವೃದ್ಧಜನರು ಅರಸಿನಸಂಗಡಲೆ ದರ್ಶನಕ್ಕೆ ಹೊರಟವರಾ
ದರು- ರಾಜಾಧಿರಾಜನು ಸಮಸ್ತಪರಿವಾರವ್ನು ಜೊಲಗಿಸುತ್ತ ರಲಾಗಿ ಮಹಾವೈಭವದಿಂದ ಆಗವಿಯ
ಬಾಗಲಲ್ಲಿ ಬಂದು ಇಳಿದವರಾದರು ಗವಿವಳಗೆ ನೋಡಿದರೆ ದೊಡ್ಡಮರದ ಮೋಟನ ಹಾಗೆ
ಕದಲಮೆದಲದೆ ನೆಲವನ್ನು ನೋಡಿಕೊಳುತ್ತ ಮೂಗುಹಿಡಕೊಂಡು ಕುರುಬರವನಿದ್ದನು ಆಗಲು
ರಾಯನು ಭಯಭಕ್ತಿವಿನಯದಿಂದ ಮೆಲ್ಲನೆ ಸಮೀಪಕ್ಕೆ ಸೇರಿಬಂದು ಮಹಾಸ್ವಾಮಿ ಮಹಾ
ಸ್ವಾಮಿಯೆಂದು ಹೇಳಿಮೂರು ನಮಸ್ಕಾರಗಳು ಸಾಷ್ಟಾಂಗಪೂರ್ವಕವಾಗಿ ನಮಸ್ಕರಿಸಿದ
ನು- ಆಮೇಲೆ ಕೈಗಳ ಮುಗಿದು ನಿಂತುಕೊಂಡು ಸ್ವಾಮಿ ನಾನು ಬದುಕಿದ ದಿನಗಳೊಳಗೆ ಈ ಹೊತ್ತು
ಸುದಿನವು ನಿಮ್ಮ ಪಾದಾರವಿಂದಗಳ ಸೇವಿಸಿ ಕೃತಾರ್ಥನಾದೆನು ಈ ರಾಜ್ಯವನ್ನು ದಯಮಾಡಿದವರು ನೀ
ವೆ ಅಲ್ಲವೆ ನಿಮ್ಮ ಶಿಷ್ಯನನ್ನು ನಿಮ್ಮ ಸಂಸ್ಥಾನವನ್ನು ಕರುಣಿಸಿ ಕಾಪಾಡುರಕ್ಷಿಸುವದು ನಿಮ್ಮ ಭಾರವು –
ಹೀಗೆಂದು ರಾಯರು ಬಿನ್ನಹವಂ ಮಾಡಿಕೊಂಡ ವಾಕ್ಯಕ್ಕೆ ಕಿವಡನ ಹಾಗೆ ಕುರುಬರವನಿದ್ದನು-

ಅದಕ್ಕೆ ರಾಜಾಧಿರಾಜನ ಕಣ್ಣು ತೆರದು ನೋಡದೆಯಿದ್ದಾನೆ. ಎಷ್ಟು ದೊಡ್ಡ ಮಹಾಪುರುಷನೆಂದು ಕೆಲಬರು ಅಂದುಕೊಂಡರು ಯಿಂಥಾ ಮಹಾತ್ಮರು ಶರೀರಮಾತ್ರ ಭೂಮಿಯಲ್ಲಿಯಿರುವದೇ ಹೊರ್ತು ಆತ್ಮವಾದರೆ ಪರಲೋಕಸಂಚಾರವೆಸಗಿ-ಯಿರುವದೆಂದುಕೊಂಡರು-ಕೆಲವರು-ನಿಷ್ಪೃಹಸ್ಯ ತೃಣಂ ಜಗತ್-ಯೆಂಬ ವಾಕ್ಯ ಯಿವರಿಗೆ ಸಲ್ಲುವದೆಂದರು-ಅಷ್ಟರೊಳಗೆ ಅಪ್ಪಾಜಿಯೆಂಬಾತನು ಇಂಥಾ ಮಹಾತ್ಮರ ಪ್ರಸಾದವು ಏನಾದರು ಸಿಕ್ಕಿದರೆ ವಜ್ರಾಂಗಿಯೂ ಆಗಿರುವದೆಂದು ನಂಬಿದು ತಾನೆ ಮಹಾಭಕ್ತಿವಂತನಾದವನ ಹಾಗೆ ಕುರುಬನ ಹತ್ತಿರ ಕೇಳಿ ಸ್ವಾಮಿಪ್ರಸಾದವನ್ನು ದಯಪಾಲಿಸಬೇಕೆಂದು ಅವನ ಕಾಲಲ್ಲಿರುವ ಒಂದು ರೋಮವನ್ನು ಸೂಕ್ಷ್ಮವಾಗಿ ಕಿತ್ತುಕೊಂಡು ಬಂಗಾರದ ತಾಯಿತದಲ್ಲಿ ಪೂಜ್ಯವಾಗಿ ಇಟ್ಟುಕೊಂಡನು-ಅಪ್ಪಾಜಿಯ ಇದ ಚೇಷ್ಟೆಗೆ ಮುನೀಶ್ವರನು ಮೌನವಾಗಿರುವದನ್ನು ನೋಡಿ ರಾಯರು ತಮಗೆ ಒಂದು ಬೇಕೆಂದು ಅದೇ ಪ್ರಕಾರವೆ ಒಂದು ಕೂದಲನ್ನು ಕಿತ್ತು ಮಹಾಪ್ರಸಾದವೆಂದು ವಜ್ರಂಗಳು ಕೆತ್ತಿದ ಆಭರಣದಲ್ಲಿಯಿಟ್ಟುಕೊಂಡರು-ಯಾವಾಗ ಯಿಬ್ಬರು ಈ ಪ್ರಕಾರ ಮಾಡಿದರೋ ಅದೇ ಎಲ್ಲರಿಗೂ ಮಾರ್ಗವಾಯಿತು-ದಳವಾಯಿ ಪ್ರಧಾನಿಗಳು ಮಂತ್ರಿಗಳು ಗುರಿಕಾರರು ಬ್ರಾಹ್ಮರು ಶಾಸ್ತ್ರಿಗಳು ವಿದ್ವಾಂಸರು ಯಿವರು ಅವರು ಅನ್ನದೆ ಮೇಲೆ ಮೇಲೆಯಲ್ಲರು ಒಂದೊಂದು ರೋಮವ ಕಿತ್ತುಕೊಂಡರು ಆ ಮೇಲೆ ರಾವುತರು ಶಾನುಬೋಯವರು ನೋಡಬಂದ ಪಟ್ಟಣದ ಜನರು ಗುಂಪುಗುಂಪಾಗಿ ಅವನ್ನ ಸುತ್ತಿಕೊಂಡು ಮನುಷ್ಯಗೆ ಒಂದೊಂದು ರೋಮವ ಕಿತ್ತುಕೊಂಡವರಾದರು-ಕುರುಬರವನು ಭಯಭ್ರಾಂತಿಯಿಂದ ಅಷ್ಟನ್ನು ನಿರ್ವಾಹಿಸದಕೊಂಡು ಯಿದ್ದನು-ಪ್ರಜೆಗಳು ಅಪರಿಮಿತವಾದ ಕಾರಣದಿಂದ ದೇಹವು ಶಿರಪಾದಾಂತವು ನುಣ್ಣಗಾಗಿ ಸರ್ವಾಂಗಕ್ಷೌರವು ಮಾಡಿದ ಹಾಗಾಯಿತು- ತಮಗೆಯಿಂಥಾ ತಪೋನಿಷ್ಠರು ಅರಮನೆಯಲ್ಲಿ ಪಾದವಿಟ್ಟರೆ ಮಹಾದೊಡ್ಡದಾಗುವದೆಂದು ಕೆಲಬರು ಹೇಳಲು ರಾಯರು ತಾವೇ ಪ್ರಧಾನಿಗಳು ಸಹಿತವಾಗಿ ಅವನ್ನ ಎತ್ತಿ ಪಲ್ಲಕ್ಕಿಯೊಳಗೆ ಕುಂಡ್ರಿಸಿ ಅವನ ಬೆಂಬಳಿಯ ನಡೆಯುತ್ತಾ ಬರಲು ಸಮಸ್ತ ಪರಿವಾರವು ಜಲಗಿಸುತ್ತಿರಲು-ನಗಾರಿ-ಕಾಂಕಿ-ಭೇರಿ-ತಮ್ಮಟೆ-ಬಜಂತ್ರಿಮೇಳ ಸಮಸ್ತವಾದ್ಯಗಳು ಭೋರಿಡುತ್ತಿರಲಾಗಿ ಅರಮನೆಯ ಬಳಿಕ್ಕೆ ಕರಕೊಂಡು ಹೋದರು-ಕುರುಬರವನು ಪಲ್ಲಕ್ಕಿಯೊಳಗೆ ಪಹಾಮೂಗು ಮಾಡಿಕೊಂಡು ನೆಲನೋಡುತ್ತಾಯಿದ್ದನು- ಅವನ ಮನಸ್ಸಿನಲ್ಲಿ ಈ ಪರಿವಾರ ಈ ಪ

ಂತ ಮಹಾ ವಾದ್ಯಗಳು ನಿಂತ ಅದರಿಯೊಳಗೆ ತನ್ನ ಶಿಷ್ಯರುಗಳ ನಡುವೆ ನರಗಳ ಕೂಗು ಕೇಳುತ್ತಾಯಿರುವ
ದು ಮೇಲೆಂದು ತೋಚಿತು- ಮುಖವು ವಿವರ್ಣವಾಗಿ ಮಹಾ ಚಿಂತಾಕ್ರಾಂತನಾಗಿದ್ದನು- ಯಾತ
ಕ್ಕೆಂದರೆ ಆ ವೇಳೆಗೆ ನಿತ್ಯ ಮೂರು ಬಾರಿ ಊಟ ಮಾಡುವವನಾಗಿರುವಂಥಾವನು ಆ ದಿವಸ ಉಪವಾಸ
ವಾಗಿದ್ದ ಕಾರಣ ಹೊಟ್ಟೆಯಲ್ಲಿ ಹಸಿವುರಿಯು ಬಂದು- ಕರುಳುಗಳು ಕಿತ್ತು ಪಕ್ಕೆಪ್ರಿಯಲ್ಲ ಸಂಕಟಬ
ಂದು ಯುಗಗಳಿಂದ ತಡೆಗೆಯೇನಾಗುವದೋ ಎಂಬ ಭಯವು ಒಂದು ಘಡಿ ಹೋದೇನಂದರೆ ಸಂ
ದುಯಿಲ್ಲ ಅವನ್ನ ನೋಡುವವರ ಮನಸ್ಸುಗಳಲ್ಲಿ ನೋಡಿದರೆ- ರಾಜಾಧಿರಾಜರಿಗೆ ಅವನ ಸರಿಸ್ಸ
ಮಾನ ಮಾಡುವದರಲ್ಲಿ ರಾಯರು ಅವನಿಗೆ ಶುಶ್ರೂಷೆ ಮಾಡುವದರಲ್ಲಿ ಮುಖದ ಮೇಲೆ ಸ್ವಲ್ಪವಾದ
ರು ಉತ್ಸಾಹವಿಲ್ಲದೆಯಿತ್ತು- ತನ್ನ ಮೂಗು ಹಿಡಿದಷ್ಟು ಹಿಡಿದದ್ದೇ ತಪಸ್ಸು ಬಿಡಲಿಲ್ಲ- ಎಷ್ಟು ದೊಡ್ಡವನಾ
ಗಿರಬೇಕು ಯಿವರೇ ದೇವರು ಸರಿ- ಈ ಪ್ರಕಾರ ಕ್ಕೆಯು ಲ್ಲರು ಕರುಬ ಮುನಿಯ ಮೇಲೆ ದೃಷ್ಟಿಯಿಟ್ಟು
ನಡದು ಪಟ್ಟಣ ಪ್ರವೇಶವಾದರು- ಮಹಾ ಒಡ್ಡೋಲಗವಾಗಿ ಮೆರವಣಿಗೆ ಮಾಡಿಸ ತರಸಂತರ ಅ
ವನ್ನ ಅರಮನೆಯಲ್ಲಿ ಯಿಳಿಸಿದರು ಅಲ್ಲಿ ರಾಜಾಧಿರಾಜನ ಹೆಂಡರು ಏಕಾಂತವಾಗಿ ಪಾದಸೇ
ವೆ ಮಾಡಿದರು ತಮಗೆ ಪ್ರಸಾದಯಿಲ್ಲದೆ ಹೋಯಿತೆಂದು ಚಿಂತಿಸಿ ಒಂದು ವರಕೋಮವ್ವ ಹೊ
ಂಕುಳೊಳಗೆ ಮಿಕ್ಕಿರಲಾಗಿ ಅವರಿಗೆ ಆಯಿತು- ಮುನೀಶ್ವರನ ಪಾದಸೇವೆಯ ವಿಧಾನವು ಹೊತ್ತು
ಮುಣುಗಿದ ಎರಡು ಘಳಿಗ್ಗೆ ಆಯಿತು- ಅರಮನೆ ಬಿಡದಿ ಮಾಡಿ ಅದರಲ್ಲಿ ಯಿವನ್ನ ಯಿಟ್ಟರು ಆರುವಾ
ಯ ಸಮುಸ್ತ ಸಂಪತ್ತಿನ ಮೇಲೆ ಅಪ್ಪಾಜಿ ತನ್ನ ಆಳನ್ನ ಬಳಗೆ ರಹಸ್ಯದಿಂದ ಬಂದು ಶ್ವಾಸ ಬಾಸು ಕುರು
ಬ ನಿನ್ನ ತಪಸ್ಸು ಸಾರ್ಥಕವಾಯಿತು ಕಂಬಳಿ ಮುಸುಕು ಹಾಕಿಕೊಂಡು ಶೀಘ್ರವಾಗಿ ಮನೆಗೆ ಹೋ
ಗಿ ಅಂಬಿ ಕುಡಿದು ನಿನ್ನ ಕುರಿಗಳ ಹತ್ತಿರ ಯಿರು ಹೋಗು ಯೆಂದು ಕಳುಹಿಸಿದವನಾದನು ಮ
ರುದಿವಸ ಸೂರ್ಯೋದಯವಾದ ಬಳಿಕ ಬಿಡದಿಯಲ್ಲಿ ನೋಡಲು ಮುನಿಯಿಲ್ಲದಿರಲು ಜನರು ಅಂ
ದುಕೊಂಡದ್ದೇನಂದರೆ- ಮನೋವೇಗದ ಸಂಗಡ ದಾವಲೋಕಕ್ಕೆ ಹೋಗಿದ್ದಾರೋ ಅವರ ಮಹ
ತ್ತು ಕಂಡವರ್ಯಾರು ಯೆಂದು ಅವನ ಮಾತು ನಿಂತು ಹೋಯಿತು- ಎರಡು ದಿನ ಹೋದ ತರು
ವಾಯ ಮೊದಲು ಅರಸು ಕೇಳಿದ ಸಮಾಚಾರವ ಜ್ಞಾಪಕ ಮಾಡಿಕೊಂಡು ಅಪ್ಪಾಜಿ ಸಂಗಡ

ಯಜ್ಞಂ ಜಪರು - ಯೇನ್ನೈಯ್ಯ ಜನಮರುಳ್ಗಾ ಜಾತರೆಮರುಳ್ಗಾ ಯಂಬ ಮಾತಿಗೆ ಅರ್ಥವ ತಿಳಿಸ
ದೆ ಹೋದೆಯಲ್ಲಾ ಅಂದನು - ಅದಕ್ಕೆ ಅಪ್ಪಾಜಿ ಮೊನ್ನೆ ದಿನವೆ ಅರ್ಥವು ಪ್ರತ್ಯಕ್ಷವಾಯಿತು
ಅಂದನು - ಅದು ಹ್ಯಾಗೆಂದು ರಾಯರು ಕೇಳಿದರು ಅದಕ್ಕೆ ಅಪ್ಪಾಜಿ ಹೇಳಿದ್ದು - ಸ್ವಾಮಿ ಬಯಲಿಂದ ಬಿ
ನ್ನಹ ಮಾಡಲು ನಿರ್ಣಯದಿಂದ ಬಿನ್ನಹ ಮಾಡಲು ಯಂದು ಹೇಳಿ ಆಳಿದವನ ಸಂಗಡ ಅಲ್ಲಿಂದ
ಹಸ್ತವನ್ನು ತೆಗೆದುಕೊಂಡು ತನ್ನ ಮನೆ ಪ್ರಸಾದಕರು ಬನಿಂದ ಮಾಡಿಸಿದ ವೇಷವನ್ನು ತಿಳಿಸಿದವ
ನಾದನು ಆಮೇಲೆ ಯಿಂಥಾ ಘೋರೆಗಳು ವೇದಶಾಸ್ತ್ರಗಳು ಮಹಾತ್ಮರು ಒಬ್ಬರ ದೇಶಿಂದ ಮಹಾತ್ಮ-
ವೇನು ಸ್ಥಿತಿಯೇನು ಮುಕ್ತಿವೇನು ಬೋಧೆಯೇನು ಯಂದು ಪರಿಶೋಧಿಸಿದವನೊಬ್ಬನಾದರು ವುಂಟೆ -
ಜ್ವಲರೂಪವನ್ನು ಸಂಬವನ್ನು ಜನಮ ತನ್ನ ಕೇಳಿ ಎಲ್ಲರು ಕುರುಬರವನ ಪಾದನೀವಕರಾದರು - ಇದೇ
ಜನಮರುಳ್ಗೆ ಜಾತರೆಮರುಳ್ಗೆ ಎಂಬುವದಕ್ಕೆ ಅರ್ಥವು ಯಂದು ಬಿನ್ನಹ ಮಾಡಿದವನಾದನು -
ಈ ಜಾಜು ಪೂರ್ವದಲ್ಲಿ ಮಾಡಿದ ಕೆಲಸವು ಮಹಾ ಮೇಲಾಗಿ ಈ ದೇಶದ ದೇವರುಗಳ ಮೇಲೆ ತಿರಿಗಿಸಬಹು
ದು ಪ್ರಾಮುಖ್ಯವಾಗಿ ಬ್ರಹ್ಮ - ವಿಷ್ಣು - ರುದ್ರಾದಿಗಳನ್ನು ಶ್ರೇಷ್ಠ ಮಾಡಿಕೊಂಡು ಅವರಿಗೆ ಸೃಷ್ಟಿ ಸ್ಥಿತಿ ಲ
ಯಂಗಳನ್ನು ಕಲ್ಪಿಸಿಕೊಂಡು ತಿರುಗುತ್ತಿದ್ದಾರಲ್ಲವೆ ಅಂಥಾ ತ್ರಿಮೂರ್ತಿಗಳಲ್ಲಿ ದೈವತ್ವವುಂಟೋ ಇಲ್ಲವೋ
ಎಂದು ವಿಚಾರಿಸದೆ ಕಣ್ಣುಗೊಂಡು ನೀವಿಸುತ್ತಾರೆ - ಶೋಧಿಸಬೇಕಾದ ಕಾರ್ಯವು ಸಕಲವಸ್ತುಗಳ
ಲ್ಲಿ ಒಂದೊಂದು ವಸ್ತು ಒಂದೊಂದು ಸ್ವರೂಪದ ಬೇರು ತಿಳಿದು ಯೇದಿಸನೋಡಬೇಕಾದರೆ ಆ ವಸ್ತುವಿನ ಸ್ವ-
ಭಾವಗುಣಲಕ್ಷಣಗಳು ಪರೀಕ್ಷಿಸಿ ಇಂಥಾ ವಸ್ತುವು ಎಂದು ಗ್ರಹಿಸಬೇಕಲ್ಲದೆ ಇತರವಾದ ಪ್ರಕಾರವ
ಲ್ಲ ಅದು ಕಾರಣ ಒಂದು ಹೋಮಯನ್ನು ಆನೆಯಂದು ಹೇಳಿದರೆ ಒಂದು ಕಾಗೆಯನ್ನು ಕತ್ತೆಯಂದ
ರೆ ಬಹುಶಃ ಅಬದ್ಧವು ಮಹಾ ಅಬದ್ಧವು ಸರಿ ಯಾತಕ್ಕಂದರೆ ಹೋಮ ಕಾಗೆಯ ಲಕ್ಷಣವು ಬೇರೆ
ಆನೆ ಕತ್ತೆಯ ಲಕ್ಷಣವು ಬೇರೆ ಈ ಪದ್ಧತಿಯಾಗಿ ಗುಲಾಮನ್ನ ಅರಸೆಂದರೆ ಅದು ಅಬದ್ಧವಲ್ಲವೆ ರಾ
ಜದ್ರೋಹವಾಗಿರುವದು ಸಂದೇಹವಿಲ್ಲವು ಈಗಲು ದೈವಲಕ್ಷಣಗಳು ಯಂಥಾವೆಂದು ಕೇಳಿದರೆ
ಈ ದೇಶದಲ್ಲಿರುವ ಗ್ರಂಥಗಳಲ್ಲಿ ಇಂಥಾ ಉತ್ತಮೋತ್ತಮ ವಿಷಯವಾಗಿ ಪರೀಕ್ಷೆಸಾಲದು ಒಂದು ವೇಳೆ
ಯವೇರ ಪ್ರಬಂಧಗಳಲ್ಲಿ ದೈವವು ಪರಬ್ರಹ್ಮವು ಪರಮಾತ್ಮನೆಂದು ಹೇಳಿ ಅವರಿಗೆ ಆದಂಥ ಶೀಲ
ವು ಲಕ್ಷಣಗಳನ್ನು ಒಂದಿಸಿ ಏಕವುಯಂದು - ನಿರ್ಗುಣವೂ ನಿರಂಜನವೂ ಸರ್ವಾಂತರ್ಯಾಮಿಯೂ 9.

ಸದಾನಂದವೂ ವಿಮಲವೂ ಅಚಲವೂ ಮತ್ತು ಅಖಂಡವೂ ಅವ್ಯಕ್ತವೂ ಅನಂತವೂ ಅವ್ಯಯವೂ
ವಿಭವೂ ಪ್ರಿಯವೂ ಸಾಕ್ಷಿರೂಪ ಚೇತನವೂ ವಿಸ್ತಾರವಿಚಾರಣಾಕಾರಣವೂ ದೈವವು ಮಹಾತ್ಮರಿಗೆ ಗತಿ
ಯಾದಂಥಾದ್ದು ಇಂಥಾ ದೈವವು ಪ್ರಸನ್ನೋನ್ಮುಖನನಗೆ ಪ್ರತ್ಯಕ್ಷವಾಗಲಿ - ಮತ್ತು - ನಿರಾಮಯ ನಿರ್ಜಲಶ್ರೀ
ವನಶ್ರೀಃ ಜೋನಚವಾಂಯವಃ । ನಚ ಬ್ರಹ್ಮಾನವಿಷ್ಣುಶ್ಚನಚರುದ್ರೋ ನತಾರಕಃ ॥ ಸರ್ವಸೂನ್ಯ
ನಿರಾಲಂಬಸ್ವರೂಪಂ ಪರಬ್ರಹ್ಮಣಃ ॥ ಇಂಥಾವು ಮೊದಲಾದ ಕಾರ್ಯಗಳನ್ನು ಜ್ಞಾನೋಕ್ತವಾಗಿ
ನುಡಿದು ಕೆಲವು ಬೆಳಕು ತೋರಿಸದ ಬಳಿಕ ಹಿಂದೆ ಯೇತಿನಿ ಅಂಧಕಾರದಲ್ಲಿ ಮುಣಿಗಿ ಪರಸ್ಪರ
ವಾಗಿ ದೈವಕ್ಕೆ ಯೋಗ್ಯವಾದ ಗುಣಗಳನ್ನು ಹೊಂದಿಸಲಿಕ್ಕೆ ಇಲ್ಲದ ಅಬದ್ಧ ಅಶುದ್ಧ ಕಥೆಗಳನ್ನು
ಕಲ್ಪಿಸಿಕೊಂಡು ಬರಿಯುತ್ತಾರೆ ಮಾಣಿಕ್ಯವನ್ನು ಬಹಳ ಬುರುಡೆಯಲ್ಲಿ ತುಳಿದ ಹಾಗೆ ಅಮೃತಬಿಂ
ದುವನ್ನು ವಿಷದ ಕೊಡದಲ್ಲಿ ಕಲಸಿದ ಹಾಗೆ ಆಗುತ್ತಾಯಿದ್ದೀತು - ದೇವರ ಪ್ರಧಾನವಾದ ಲಕ್ಷ
ಣಗಳಿಗೆ ನಿರ್ಮಲವಾದ ಅರ್ಥವು ಈ ಸತ್ಯಶ್ಲೋಕಗಳೊಳು ಅಂತರ್ಭಾವವಾಗಿ ಅಧೆ - ಶ್ಲೋಕ -
ಸ್ವಯಂಭುನಾದ್ಯಶರೀರೇಣ ಸಮಸ್ತ ಭುವರೂಪಿಣಾ । ಸರ್ವವ್ಯಾಪೀತು ಸರ್ವೇಷಾಂ ನಿದಾನಂ ತನ್ನ
ಮಾಮ್ಯಹಂ ॥ ಟೀಕು ॥ ಸ್ವಯಂಭು ಯೆಂದರೆ ದೈವವು ಮಾತಾಪಿತೃಗಳುಯಿಲ್ಲದೆ ಉತ್ಪತ್ತಿಜ
ನನವುಯಿಲ್ಲದೆ ಪ್ರತಿಕಾರಣವುಯಿಲ್ಲದೆ ನಿಷ್ಕಾರಣವಾಗಿ ತನ್ನಷ್ಟಕ್ಕೆ ತಾನೆಯಿರಬೇಕಲ್ಲದೆ ಕಾರ
ಣೋತ್ಪತ್ತಿಗಳು ಪ್ರಾಪ್ತವಾದರೆ ಹೀನತ್ವವೆಸರಿ - ದೈವವೆಂದು ಎನಿಸಕೂಡದು ಅನಾದಿಯೆಂದರೆ
ದೇವರಿಗೆ ಆದಿಯು ಆರಂಭವುಯಿಲ್ಲವು ಕಾಲಕ್ಕೆ ಮಧ್ಯದಲ್ಲಿಯಿದ್ದಾನೆಂದು ಎನಿಸಕೂಡದು ಭೂತಭ
ವಿಷ್ಯದ್ವರ್ತಮಾನ ಕಾಲಗಳು ಆತಗೆ ಏಕವಾಗಿ ಮೊದಲಿಗೆ ತೀರದ ಹೊತ್ತು ಕಾಲಪರಿಯಂತರವು
ಯಿದ್ದವನಾಗಿ ಮುಂಚೆ ಗಮನಿಯದಂಥಾ ಕಾಲದ ಪರ್ಯಂತರವು ಆದಿಯು ಅಂತ್ಯವು ಯಿಲ್ಲದವ
ನಾಗಿ ಯಿರಬೇಕು ನಡುಮಧ್ಯ ಬಂದಿದ್ದರೆ ಕಾರಣವೂ ಹುಟ್ಟು ಹೀನತ್ವವೂ ಪ್ರಾಪ್ತಿಸ್ವಯಂಭು
ವಾಗದ ದೈವತ್ವವಿರುವದು - ಅಶರೀರ ಯೆಂದರೆ ದೇವರಿಗೆ ಶರೀರವಿಲ್ಲವು ಯಾತಕ್ಕೆಂದರೆ ಶರೀರವು
ಕನಿಷ್ಠಸ್ವರೂಪವು ಪಂಚಭೂತಮಯವು - ನಿರಾಖಂಡವಾಗಿ ಹಂಸಿಗಳ ಸಂಗಡ ಕೂಡಿದ ವಸ್ತುವು
ಅದಕ್ಕೆ ಹುಟ್ಟುವದೆ ಪ್ರಮಾಣವು ಕಷ್ಟವೂ ನಾಶನವೂ ಪ್ರಾಪ್ತವದ್ದು ಇಂಥಾ ಅಧಮಲಕ್ಷಣಗಳು

ದೇವರಿಗೆ ಸಲ್ಲದಾಗಿ ನಿರಾಕಾರವಾಗಿಯೂ ಪರಮಜ್ಞಾನಸ್ವರೂಪವಾಗಿಯೂ ಇರಬೇಕು ಸಮಸ್ತ ಪ್ರಾಣಿಗಳೂ ಬ
ಸೌ- ಸಕಲವಾದ ಮೇಲು ಸಕಲ ಮಹಿಮೆಗಳು ಕಡೆಯಾಗದೆ ದೇವರಲ್ಲಿ ಪೂರ್ಣವಾಗಿರಬೇಕು- ಮಿತಿಯಿಲ್ಲದ ಜ್ಞಾನವೂ ಮಿತಿ
ಯಿಲ್ಲದ ತ್ರಾಣವೂ ಮಿತಿಯಿಲ್ಲದ ನೀತಿಯೂ ಮಿತಿಯಿಲ್ಲದ ದಯಾರಸವೂ ಮಿತಿಯಿಲ್ಲದ ಸ್ವತಂತ್ರವೂ ಮಿತಿಯಿಲ್ಲ
ದ ಸಾಮರ್ಥ್ಯವೂ ಇವು ಮೊದಲಾದ ಸದ್ಗುಣಗಳು ಅವರಲ್ಲಿ ಇರಬೇಕು- ಲವಲೇಶವಾದರೂ ಅಜ್ಞಾನವೂ ನಿ
ತ್ರಾಣವೂ ಅನೀತಿಯೂ ದುಃಖವೂ ಅಸತ್ಯವೂ ಇದ್ದರೆ ಪೋಲಿಕೆಯಾದ ಸ್ವರೂಪವೆ ಹೊರತು ಸಮಾನ ದೈವವಲ್ಲ—
ಸರ್ವವ್ಯಾಪಿ ಅಂದರೆ- ದೇವರು ಇಲ್ಲಿದ್ದಾನೆ ಅಲ್ಲಿಲ್ಲವೆಂದು ಅನ್ನದ ಹಾಗೆಯೂ ಎಲ್ಲೆಲ್ಲಿಯೂ ಅಷ್ಟರಲ್ಲಿಯೂ ಪರಿ
ಪೂರ್ಣನಾಗಿದ್ದಾನೆ ಆದರೂ ಒಂದೊಂದು ವಸ್ತುವಿನಲ್ಲಿ ಸಾಕಾರವಾದ ಪದಾರ್ಥವು ಅನಾಗಿಯಿದ್ದೀತೆಂದು ಹೇಳಕೂ
ಡದು ಆ ದೈವವೆ ಸಮಸ್ತವನ್ನು ತನ್ನ ಮಿತಿಯಿಲ್ಲದ್ದರಲ್ಲಿ ಅನಾದಿಸಿ ತನ್ನ ಮಿತಿಯಿಲ್ಲದ ಜ್ಞಾನಬಲಗಳಿಂದ ರಕ್ಷಿಸಿ
ಕೊಂಡು ಬರುತ್ತಾನೆ- ಸರ್ವೇಷಾಂ ನಿಧಾನಂ ಎಂದರೆ- ದೈವವು ನಿರ್ಮಿಸಿದ ಸಕಲವಸ್ತುಗಳ ಸೃಷ್ಟಿಗೂ ಆದಿಕಾರಣ
ವು ಆದಿಮೂಲವಾಗಿದ್ದಾನೆ- ತನ್ನನ್ನೂ ಎಂದರೆ ಅಂಥಾ ಲಕ್ಷಣಗಳುಳ್ಳ ಏಕೋ ದೈವವನ್ನು ನಮಸ್ಕರಿಸಿ
ನಂಬಿಯಿದ್ದೇನೆ- ಇತರವಾದ ಕಲ್ಲ ದೇವರುಗಳನ್ನು ನಂಬಿಕೊಂಡು ಯಜ್ಞ ತಪಸ್ಸು ದಾನಧರ್ಮಗಳು ಮಾಡಿ
ದರು ವ್ಯರ್ಥವು- ನಿಷ್ಫಲವು- ಮತ್ತು ಕಡೆಗೆ ನರಕವೇ ಗತಿ— ಈ ಶ್ಲೋಕಾರ್ಥವು ತಿಳಿಸುವದಕ್ಕೆ ದೈವ ಒಂದೇನ ನಂಬಿಕೊ
ಂಬುವದರಲ್ಲಿ ಈ ಆರು ಲಕ್ಷಣಗಳು ಪೂರ್ಣವಾಗಿರಬೇಕೆಂದು ಎಷ್ಟು ಮೂರ್ಖನಾದರೂ ಸಮ್ಮತವಲ್ಲದೆ ಅಂಗೀಕರಿ
ಸದವನು ಒಬ್ಬನೂ ಯಿಲ್ಲವು- ಕಾಣಬಾರದ ಅಂಧಕಾರದಲ್ಲಿ ದೊಡ್ಡ ದೀವಿಗೆಯನ್ನು ಹಚ್ಚಿದರೆ ಅದರೊಳು
ಅಡೇನೋ ಏನಿದ್ದರೂ ಪಾಷಾಣವೋ ವೃಕ್ಷವೋ ಮೃಗವೋ ದಾವರೀತಿಯಾಗಿ ಭೇದಿಸಿ ಕಾಣಬಹುದೊ
ಅದರೀತ್ಯಾ ಈ ಆರು ಲಕ್ಷಣಗಳ ಬೆಳಕಿನೊಳು ನಿಜವಾದ ದೇವರು ದಾರೋ ಕಲ್ಲ ದೈವಂಗಳು ದಾವವೋ
ಪ್ರತ್ಯಕ್ಷವಾಗಿ ಕಾಣಬಹುದು ಇಂಥಾ ದೈವಲಕ್ಷಣಗಳು ತ್ರಿಮೂರ್ತಿಗಳಿಗೆ ಸಲ್ಲುವವೋ ಸಲ್ಲವೋ ಎಂದು ಪ
ರೀಕ್ಷಿಸುವದಕ್ಕೆ ಅವರ ಚರಿತ್ರೆಗಳು ಗುಣಸ್ವಭಾವಗಳು ಕೆಲವು ಸ್ಪಷ್ಟವಾಗಿ ತೋರಿಸಬೇಕಾಗಿರುವದು-
ಆಗಲು ಅವರನ್ನ ದೂಷಿಸುತ್ತೇವೆಂದು ಕೋಪತಾಪಗಳು ಮನಸ್ಸಿನಲ್ಲಿ ತಂದುಕೊಂಬುವದಕ್ಕೆ ದಾರಿಗೂ
ನ್ಯಾಯವಿಲ್ಲವು- ಯಾತಕ್ಕೆಂದರೆ ಅವರ ವೇದಶಾಸ್ತ್ರ ಪುರಾಣಗ ವೃತ್ತಾಂತಗಳು ಸ್ಪಷ್ಟವಾಗಿ ತೋರಿಸೇವಲ್ಲ
ದೆ ನಾವು ಯೋಚಿಸಿ ಕಲ್ಪಿಸುವದಿಲ್ಲವು ಇದಲ್ಲದೆ ನಿಜವಾದ ದೈವವು ಯಂಥಾದ್ದೆಂದು ಯಲ್ಲರಿಗೂ ತಿಳಿಸುವ

దక్కినమగె తాత్పర్యవుం పల్లదె ఒబ్బర మనస్సనోయిసబేకెంబువ అభిప్రాయనమగెయిల్లవు—

॥ త్రిమూర్తి ॥

త్రిమూర్తిగళు స్వయంభువగళల్ల- హ్యాగందరె- అవరిగె హుట్టు కష్టగళువుంటు ఒబ్బరిం దలుం పాదవరాగిద్దారె- శాస్త్రపురాణగళు నోడిదరె అవర జన్మగళు నానావిధవాగి హేళుత్తిద్దారె- కెలవు పురాణగళల్లి ఒబ్బ స్త్రీయళు ఆకెగె పరశక్తి ఆదిశక్తియెంబ హెసరు- ఆశక్తియు మహిమెయేను ఉత్పత్తియేను స్వరూపవాగిరలి కార్యకారణవేను ఈ మొదలాద శోధనెగళు ఒందు ఇల్లవు- అంథా స్త్రీగె బ్రహ్మ- విష్ణు- రుద్రరుగళు హుట్టి- హుట్టిదంతరువాయ ఆస్త్రీ తన్న మోహదకుమారరుగళ మేలె మోహ బ్రాంతియాగి అవరన్న వివాహ మాడికొండు అనుభోగ్యళాదళెందు మత్తొందు బేరె శాస్త్రదల్లి ఈప్రకారవె హేళియిద్దీతు—

శ్లోక॥ ఆదిశక్తి మయంబజం బీజశక్తిమయం శివః। శివశక్తిమయం విష్ణు సర్వం విష్ణుమయం జగత్॥ టీకు॥ ఆదిశక్తియింద బీజవు హుట్టితు- బీజశక్తియింద శివను హుట్టిదను- ఆమేలె శివమయత్వదింద విష్ణు హుట్టిదను ఈ లెక్కదల్లి శివను విష్ణువిగె తందెయాదను- మత్తె బేరె పురాణదల్లి విశేషవాగి భాగవత నవమ స్కంధదల్లి ఈప్రకార బరదుయిద్దీతు- విష్ణువిన నాభియల్లి బంగారద తావరెకుసుమ హుట్టితు ఆకుసుమదొళు నాల్కుముఖవుళ్ళ బ్రహ్మను హుట్టిదను- మొదలనె లెక్కదల్లి శివను విష్ణువిగె తందెయాదరె ఈలెక్కదల్లి శివను బ్రహ్మగె తాతనాదను- మత్తు బేరె గ్రంథదల్లి బ్రహ్మగె పార్వతి సోసెయు శివను మగనెందు హేళిద్దే- ఈ లెక్కాచారవ నోడిదరె విష్ణువిన నాభికమలదల్లి హుట్టిద బ్రహ్మ ఈగ విష్ణువిగె తాతనాదను- ఇంథా వివరతెగళు ఇల్లదవిపరీతవాద హుట్టువళి నోడువాగ్యె బుద్ధివంతనాదవనిగె తోరువదేనందరె- ఇంథా పరస్పరవిరోధవాద పురాణగళు బరదు ఇష్టవర నిజవూ ఈదేవతెగళ నిజవూ ఈయరడు సరిస్సమానవెందు యోచిసబహుదు ఈప్రకారవాగి వేమన్నా నుత్రిమూర్తిగళన్ను

ನಿಸಿಕೊಂಡು ಬಂದುಯಿದ್ದಾನೆ- ಸಾಕ್ಷಿಪತ್ರ- ಬ್ರಹ್ಮಯವ್ವನಿ ಕೊಡುಕು ಪುಟ್ಟಿತಾಮನುಜುಂಡು ವಿಷ್ಣುಯವ
ವ್ವನಿ ಕೊಡುಕು ವಿಧವು ಗಾನು- ಶಿವುಡುಯವ್ವನಿ ಕೊಡುಕು ಶಿಗ್ಗೆರಗದೇ ಪ್ರಾಣಾಂಬ ತೃತಾ ಖರಾಮವಿ
ನರವೇಮ- ಇನ್ನು ಬೇರೆ ಬಂದು ಪ್ರಕಾರವಾಗಿ ತ್ರಿಮೂರ್ತಿಗಳು ಒಬ್ಬ ವೇಶ್ಯಾಸ್ತ್ರೀಗೆ ಹುಟ್ಟಿದರೆಂದು ಹೇಳುತ್ತಾ
ಯಿದ್ದಾರೆ ಅದು ಹ್ಯಾಗಂದರೆ- ಗಂಡಕಿಯೆಂಬ ಹೆಸರುಳ್ಳ ವೇಶ್ಯಾಸ್ತ್ರೀಯು ದಿನದಿನವು ದಾವಪುರುಷ ತನ್ನಲ್ಲಿ
ಬರುತ್ತಾನೋ ಅವನೇ ಗಂಡನೆಂದು ಮಹಾ ಪತಿವ್ರತೆಯಾಗಿ ಯಲ್ಲಾ ವೇಶ್ಯರಿಗಿಂತ ಹೆಚ್ಚಾಗಿದ್ದಳು- ಅಂಥಾ
ಕೇನ ಶೋಧಿಸಿ ಪರೀಕ್ಷಿಸಬೇಕೆಂದು ತ್ರಿಮೂರ್ತಿಗಳು ಬೇರೆಬೇರೆ ವೇಷಗಳು ಧರಿಸಿಕೊಂಡು ಬಂದು ರಾತ್ರಿಯ
ಲ್ಲಿ ಅವಳ ಕಡೆ ತೇರ ಬಂದು ಅನೇಕ ಚೇಷ್ಟೆಗಳ ಮಾಡಿದರು ವಿಶೇಷವಾಗಿ ವಿಷ್ಣುವು ಮೂರು ಬಾರಿ ಹೊಟ್ಟೆಯು
ಶೂಡಿಸಿ ಅವಳ ಹಾಸಿಗೆಯೂ ಅವಳ ಮೇಲೆಯೂ ಅಷ್ಟುಮಾಡಿಬಿಟ್ಟನು- ಆ ವೇಶ್ಯಳು ಅಷ್ಟಕ್ಕೂ ಸೈರಿ
ಸಿದ ಬಗೆ ಸಮ್ಮತವಾಗಿ ಗಂಡಕಾನದಿಯೆಂಬ ಹೆಸರುಳ್ಳವಳಾಗಿ ಹುಟ್ಟಿದಳು ಆ ಗಂಡಕಾನದಿಗೆ ತ್ರಿಮೂರ್ತಿ
ಗಳು ಹುಟ್ಟಿದರು- ಈರೀತಿಯಾಗಿ ಹುಟ್ಟಿದ ಬ್ರಹ್ಮನಿಗೆ ಹಿರಣ್ಯಗರ್ಭನೆಂದು ವಿಷ್ಣುವಿಗೆ ಸಾಲಗ್ರಾಮವಿಗ್ರ
ಹನೆಂದು ಈಶ್ವರನಿಗೆ ಶಿವನಾಮವೆಂದು ಈ ನಾಮದಿಂದ ಅಲ್ಲಿ ಹುಟ್ಟಿದ ಶಿಲೆಗಳಿಗೆ ಹೆಸರುಗಳಾದವು-
ಅಂಥಾ ಪಾಷಾಣಗಳು ಪ್ರಿಯವಾಗಿ ಸಂಪಾದಿಸಿಕೊಂಡು ಅವುಗಳಿಗೆ ಅನೇಕ ಜನರು ಪೂಜೆಮಾಡುತ್ತಾ
ಯಿದ್ದಾರೆ- ಇದಕ್ಕೆ ವಿಜ್ಞಾನೇಶ್ವರ ವೆಂಬ ಗ್ರಂಥದಲ್ಲಿ ಆ ಗಂಡಕಾನದಿಯನ್ನು ಕುರಿತು ಹೇಳಿದ ಶ್ಲೋಕ- ವೆ
ಶ್ಯಾಸ್ತ್ರೀ ದರ್ಶನಂ ಪುಣ್ಯಂ ಸ್ಪರ್ಶನಂ ಪಾಪನಾಶನಂ। ಚುಂಬನಂ ಸರ್ವತೀರ್ಥಾನಾಂ ಮೈಥುನಂ ಮೋಕ್ಷ
ಸಾಧನಂ॥ ಇಂಥಾ ಮಲಿನವಾದ ಕಥೆಯನ್ನು ಮನಸ್ಸಿನಲ್ಲಿ ಭಾವಿಸಿ ಕೆಲವು ಬ್ರಾಹ್ಮಣರು ನಿತ್ಯ ಈ ಶ್ಲೋಕವನ್ನು
ತಮ್ಮ ಜಪದಲ್ಲಿ ಹಾಕಿಕೊಳ್ಳುತ್ತಾಯಿದ್ದಾರೆ- ಇದಲ್ಲದೆ ದತ್ತಾತ್ರೇಯ ಜನನದೊಳು ಇದಕ್ಕೆ ಹೆಚ್ಚುಕಡಿ
ಮೆಯಾಗಿ ಸರಿಯಾದ ಕಥೆ ಪ್ರಸಿದ್ಧಿಯಾಗಿದ್ದೀತು- ಹ್ಯಾಗಂದರೆ- ಅತ್ರಿಮುನಿಯ ಹೆಂಡತಿಯಾದ ಅನಸೂ
ಯಾದೇವಿ ಪತಿವ್ರತಾ ಧರ್ಮಗುಣದಿಂದ ಮಹಾಪ್ರಕಾಶಳಾಗಿ ದಾನವದೇವತೆಗಳಿಗಾದರೂ ಅಸಾಧ್ಯಳೆಂ
ದು ಯೆನಿಸಿಕೊಂಡಿರಲಾಗಿ ಈ ವರ್ತಮಾನ ಮುನೀಶ್ವರರ ಸಂಗಡ ಕೇಳಿದವರಾಗಿ ಆಕೆಯ ಪತಿವ್ರತಾ ಧರ್ಮವ
ನ್ನು ಭಂಗಮಾಡಲಿಕ್ಕೆ ತಮ್ಮೊಳು ತಾವು ಆಲೋಚಿಸಿಕೊಂಡು ತ್ರಿಮೂರ್ತಿಗಳು ಅತಿಥಿರೂಪದಿಂದ ಬ್ರಾಹ್ಮಣರಾ
ಗಿ ಬಂದು ಆಕೆಯ ದಾನವನ್ನು ಕೇಳಿದರು ಆಗಲು ಅನಸೂಯಾದೇವಿ ಅವರಿಗೆ ಭಯ ಭಕ್ತಿಯಿಂದ ಬಿಕ್ಷವ 11.

ನಿಡುವಿಕ್ಕೆ ಬಂದರೆ ಅವರು ಕೇದಾನವವಲ್ಲವೆಂದು ಹೇಳಿ ತಮ್ಮ ಯದುರಿನಲ್ಲಿ ಹುಟ್ಟು ಮಾರ್ಗವಾಗಿ ನಿರ್ವಾಣದ
ಲ್ಲಿ ನಿಂತರೆ ಅದೇ ತಾವು ಕೋರಿದುದಕ್ಕೆ ಬಲವೆಂದರು - ಆದು ಪ್ರಮಾತುಗಳಿಗೆ ಆಪತ್ತಿ ಪ್ರಕೆಯು ನಾನಾ ಕೋಪಹು
ಟ್ಟದವಲ್ಲಾಗಿ ನಿರ್ಗುಣ ಬ್ರಹ್ಮವನ್ನು ನೆನದು ಅವರುಗಳ ಮೇಲೆ ತೀರ್ಥವ ಚಲ್ಲಿದರೆ ಕೇವಲ ಯಲ್ಲದಾದ ಶಿಶು
ವುಗಳಾದರು - ಆ ಕೂಸುಗಳಿಗೆ ಸ್ತನ್ಯಪಾನವನ್ನು ಕೊಡುತ್ತಾಯಿದ್ದಳು ತ್ರಿಮೂರ್ತಿಗಳು ಆಸ್ತ್ರೀಗೆ ಆ
ಧೀನವಾಗಿ ಶಿಕ್ಷಿದರೆಂದು ದೇವತೆಗಳೆಲ್ಲರು ಕೇಳಿ ಜಯಪಟ್ಟು ಸರ್ವರು ಗುಂಪುಕೂಡಿಕೊಂಡು ಅನಸೂ
ಯಾದೇವಿಯ ಸಮೀಪಕ್ಕೆ ತ್ರಿಮೂರ್ತಿಗಳ ಬಿಡಿಸಿಕೊಳ್ಳುವನಿಮಿತ್ತವಾಗಿ ಸಂಗಬಿದ್ದು ಬಂದರು - ಬಂದು
ಮಹಾಪ್ರಯಾಸದಿಂದ ಬಡಂಬಡಿಕೆಯ ಮೇಲೆ ತ್ರಿಮೂರ್ತಿಗಳನ್ನು ತಿರೆ ಬಿಡಿಸಿಕೊಂಡು ತಮ್ಮ ತಮ್ಮ ನಿ
ವಾಸಗಳಿಗೆ ಹೋದರು - ತ್ರಿಮೂರ್ತಿಗಳು ಶಾಸ್ತ್ರದಲ್ಲಿ ಇಂಥಾ ವಿಕಾರವಾಗಿ ಹುಟ್ಟಿಹುಟ್ಟಿದರೆಂದು
ಹೇಳುವಾಗ್ಯೆ ನೋಡುವದರಲ್ಲಿ ಅವರು ಸ್ವಯಂಭುಗಳಾಗಿದ್ದಾರೆಂದು ಹೇಳುವದಕ್ಕೆ ಕಾರಣ ಅವಕಾಶವಿಲ್ಲ -
ಅವರಿಗೆಯೂ ವಾಗಜನ್ಮವಾಯಿತೆಂ ಸಂಗಡಲೆ ಅವಸ್ಥಕವಾಗಿ ಆದಿ ಆಯಿತು - ಆದಕಾರಣ ಅವರು
ಅನಾದಿಕಾಲಗಳು ಮತ್ತು ಅವರ ಶಾಸ್ತ್ರಗಳ ನೋಡುವಾಗ್ಯೆ ಅವರಿಗೆ ಅಂತ್ಯವುಂಟು ಅದು ಪುರಾಗಂಡ
ರೆ - ಶಾಸ್ತ್ರದಲ್ಲಿ ಬಂದು ವಿಧವಾಗಿ ವಿಸ್ತಾರವಾದ ಸಂವತ್ಸರಗಳು - ಅಂಥಾವರುಷಗಳು ಬ್ರಹ್ಮಂಗೆ ನೂರೆಂದು
ಆಯುಃಪ್ರಮಾಣವನ್ನು ಸರಿಕಟ್ಟುತ್ತಿದ್ದಾರೆ - ವಿಷ್ಣುವಿಗೆ ಇನ್ನೂರು ಈಶ್ವರಗೆ ಮುನ್ನೂರು ವರುಷಗಳುಂಟು.
ಗಾಂತ್ರವು ಬ್ರಹ್ಮಗೆ ತೀರಿದತರುವಾಯ ಅವನ ಪಟ್ಟಕ್ಕೆ ಬದಲಾಗಿ ಹನುಮಂತ ಬರುತ್ತಾನೆಂದು ಹೇಳುವರು -
ಹೀಗೆ ಆದಿ ಅಂತ್ಯವುಳ್ಳವರನ್ನು ದೈವವೆಂದು ಭಾವಿಸಿ ನಿತ್ಯವಿಲ್ಲದ ಆತ್ಮವುಳ್ಳ ಮನುಷ್ಯರನ್ನ ನಂಬಿದರಾಯಿತೆ
ಎಷ್ಟು ಅವಿವೇಕವೆಂದು ಹೇಳಬೇಕು ಅಶರೀರ ನಿರಾಕಾರವಾದ ದೈವಕ್ಕೆ ಬೇಕಾದ ಲಕ್ಷಣಗಳು ವುಂಟಲ್ಲದೆ
ಮಿಕ್ಕಿನ ತ್ರಿಮೂರ್ತಿಗಳಲ್ಲಿ ಇಲ್ಲವು ಅವರ ಪುರಾಣ ಚರಿತ್ರೆಗಳಲ್ಲಿ ದೇಹಸಂಬಂಧವಾದ ಕರ್ಮಗಳು ಹೊ
ತ್ತು ನಿರಾಕಾರವಾದ ಲಕ್ಷಣಗಳು ಒಂದೂ ಯಿಲ್ಲ - ದೇಹವು ದೇಹಕ್ಕೆ ಅವಯವಗಳೂ ಆಹಾರಪಾ
ನಾದಿಗಳೂ ಸಂಸಾರವೂ ಸ್ವಸ್ತ್ರೀಯರೂ ಪರಸ್ತ್ರೀಯರೂ ಪುತ್ರರೂ ಇವು ಬಹಳವುಂಟು ಅದುಕಾರಣ ಅ
ವರನ್ನು ನಿರಾಕರಿಸಿ ಈ ಪದ್ಯವೇಮನ್ನು ಹೇಳಿಯಿದ್ದಾನೆ - ಪದ್ಯ - ಪಿಂತಮೊನುವಾಡು ಪಿಂತಮೊನುವಾ
ಡು ಪಿಂತಖೂಡುವಾಡು ಪರಮಯೋಗಿ - ಪಿಂತನಮ್ಮಿನವಾಡು ಪರಮಾರ್ಥವೇದ್ಯ ಲಾವಿಶ್ವತಾಭಿರಾ
ಮವಿನರವೇಮ ॥ ಇದರರ್ಥವೇನೆಂದರೆ ಸತಿಯಳನ್ನು ನಂಬದೆ ಅವಳನ್ನು ತಲೆಯ ಮೇಲೆ ಹೊತ್ತುಕೊ
ಂಡವನು ಈಶ್ವರನು - ಎದೆಯ ಮೇಲೆ ಅವಳನ್ನು ನೋಡುತ್ತಾ ಇರಿಸಿಕೊಂಡವನು ವಿಷ್ಣುವು - ಬಾ

ಯುಳ್ಳಗೆನಾಳಿಗೆಂತು ಮೋಲಿ ಅವಳನ್ನುಯಿಟ್ಟುಕೊಂಡಿರುವನು ಬ್ರಹ್ಮನು - ಇಂಥಾವರು ದೇವರುಗಳು ಸ್ವಾ
ಗಾರುಷರು ಯೋಗಿಗಳೆಂದು ಸಹಾ ಅನ್ನಿಸಿಕೊಂಬುವದಕ್ಕೆ ಪಾತ್ರರಲ್ಲವೆಂದು ಹೇಳಿದ್ದಾನೆ - ತ್ರಿಮೂರ್ತಿಗಳು
ದೇಹಧಾರಿಗಳಾಗಿರಲಿಕ್ಕಾಗಿ ಅವರಿಗೆ ಸರ್ವವ್ಯಾಪಕತ್ವವುಯಿಲ್ಲವು ಶರೀರವುದಾವಾಗವುಂ ಹೋಅವಸ್ಥಳ
ವಾಗಿ ಬಂದುವೂಲೆಂತುಲ್ಲಾದರು ಬದ್ಧರ ಹೇಕೆ ಹೊತು ಅಧಿಕಾರಕೊದರು ಹೀಗೆ ತ್ರಿಮೂರ್ತಿಗಳವಿಷ
ಯವಾಗಿ ಹೇಳಿದದರಲ್ಲಿ ದೈವತ್ವಕ್ಕೆ ಮಾಯಿಯಿಲ್ಲದದೂರವಾಗಿದ್ದಾರೆಂದು ಬುದ್ಧಿಯಿಲ್ಲದವರಿಗೂ ಸಹಾ
ಪ್ರತ್ಯಕ್ಷವಾಗಿದೆ - ಆದರೆ ಕೋರಾಜ್ಯದವನು ಪ್ರಾರಿಗೆ ಬಂದು ದೊಡ್ಡ ಸಂಶಯವುಂ ಪು - ಥೊರೆಗಳು ಶಾಸ್ತ್ರ
ಗಳು ಸಮಸ್ತಪ್ರಜೆಗಳು ಅವರನ್ನ ನಂಬಿಕೊಂಡಿರಲಾಗಿ ಅವರಿಗೆ ಇಷ್ಟು ಸ್ತುತಿಯೂ ಬಹುಮಾನವೂ
ಪೂಜಾರಾಧನೆಗಳೂ ನಡೆಸುತ್ತಾಯಿರುವಾಗ ಇದಷ್ಟು ವ್ಯರ್ಥ ಹೋನಿಷ್ಫಲವಾ ಅದರಲ್ಲಿ ವಂಬಿಮೆ
ಗಳಿಲ್ಲದೆ ನಡೆಯುತ್ತಿದ್ದೀತೆ. ಅವರು ಆದಿದೈವವಲ್ಲದಿದ್ದರು ಅವರಿಗೆ ತ್ರಾಣವು ಬುದ್ಧಿಯೂ ಜ್ಞಾನವೂ
ದಯವೂ ಸತ್ಯವೂ ಸಕಲಸದ್ಗುಣಾತಿಶಯವೂ ಯಿಲ್ಲದೆ ಹೋದಾವೆ ಎಂದು ಕೆಲಬರು ವಿಚಾರಿಸುತ್ತಾ
ಯಿದ್ದಾರೆ - ಮತ್ತು ಬೇರೆ ಕೆಲಬರು ವೇದ ಶಾಸ್ತ್ರಗಳಲ್ಲಿ ತ್ರಿಮೂರ್ತಿಗಳು ವಿನಹ ಇನ್ನು ಪರಬ್ರಹ್ಮವು ಒಂದು
ಂಟೆಂದು ಹೇಳುವದು ನಿಶ್ಚಯವೆ ಸರಿ - ಆದರು ತ್ರಿಮೂರ್ತಿಗಳು ಪರಬ್ರಹ್ಮದ ಕೆಳಗೆ ಇರುವಂಥಾ
ವರು ದಾವ ಪ್ರಕಾರಕ್ಕೆ ದೊಡ್ಡ ಅರಸನ ಕೈಕೆಳಗೆ ದಳವಾಯಿ ಪಾರುಪತ್ಯಗಾರರು ಸಂಪ್ರತಿ ಕರುಕರ
ಣೀಕರು ಸಹಾ ಸ್ವಾಗೆ ಉದ್ಯೋಗಸ್ಥರಾಗಿದ್ದಾರೊ ಹಾಗೆಯೇ ತ್ರಿಮೂರ್ತಿಗಳು ಲೋಕವನ್ನು ನಡೆಸುವ
ನಿಮಿತ್ತ ಲೋಕ ಸೃಷ್ಟಿ ಸ್ಥಿತಿ ಲಯಗಳಿಗೆ ಉದ್ಯೋಗಸ್ಥರಾಗಿದ್ದಾರೆಂದು ಹೇಳುತ್ತಾಯಿದ್ದಾರೆ - ಈ ಪ್ರಾ
ಂತವು ಅವರ ಮನಸ್ಸಿಗೆ ಮಹಾ ಹೊಂದಿಕೆಯಾಗಿದ್ದೀತು - ಆದರೆ ಇಂಥಾದ್ದನ್ನು ಅಪೇಕ್ಷಿಸಿದರೆ ನ್ಯಾ
ಯರೀತಿಗೆ ಸರಿಯಾಗುವದಿಲ್ಲವೆಂದು ತೋರುತ್ತಾಯಿದ್ದೀತು - ದೈವಕಾರ್ಯಕ್ಕೂ ಮನುಷ್ಯಕಾರ್ಯಕ್ಕೂ
ಅಂತರಾಂತರಗಳುಂಟು ದೊಡ್ಡ ಅರಸಿಗೆ ದಳವಾಯಿಗಳೂ ಪಾರುಪತ್ಯಗಾರರೂ ಉದ್ಯೋಗಸ್ಥರೂ
ಕರಣೀಕರೂ ಯಾಕೆ ಬೇಕೆಂದು ಕೇಳಿದರೆ ಆಯಿತೆ ಅವನಿಗೆ ತ್ರಾಣಸಾಲದದೆ ಶಯಿಂದ ತನ್ನ ಜೀವವನ್ನು ತನ್ನ ರಾಜ್ಯ
ವನ್ನು ಕಾಂಯ್ದು ರಕ್ಷಿಸುವದಕ್ಕೋಸ್ಕರ ದಳವಾಯಿ ಗುರಿಕಾರರು ಕುದುರೆಗಳು ಬೇಕಾಗಿರುವದು ಇಲ್ಲದಿದ್ದರೆ ಶ
ತ್ರುಗಳು ಬಂದು ಆತನ ಶಿರಛೇದನಮಾಡಿ ರಾಜ್ಯವನ್ನು ತಮ್ಮ ಆಧೀನಮಾಡಿಕೊಳ್ಳುವರು ಅರಸಿಗೆ ಜ್ಞಾನ

ಪ್ರಕೃತಿಯೆಂಬುದಕಾರಣ ತಾನುಯಿರುವ ಸ್ಥಳದಲ್ಲಿ ತನ್ನ ದೃಷ್ಟಿಗೆ ಬೀಳುವುದು ಹೊರತು ಮತ್ತೊಂದು ಕಡೆ
ಹರಿಯುವದಿಲ್ಲವು- ತನ್ನ ರಾಜ್ಯದ ಆಡಳಿತ ಲೆಖ್ಖಗಳು ತಿಳಿಯುವದಕ್ಕೆ ಸಾವಕಾಶವಿಲ್ಲದ್ದರಿಂದ ಉದ್ಯೋ
ಗಸ್ಥರು ಅವನಿಗೆ ಬೇಕಾಗಿರುವದು- ದೈವವೆಂದರೆ ಅನಂತ ತ್ರಾಣವು ಆತಗೆ ವುಂಟಾಗಿರುವದು ಅ
ದರದೆಶೆಯಿಂದ ತನ್ನ ದೃಷ್ಟಿ ತನಗೆಯು ಮರೆ ತನ್ನ ಗೆಂಟೋನಾದರು ಕೂಡುವದೆ ಕೋ. ಪ್ರಾಣುಕೊ
ಟರಾಷ್ಟ್ರರು ಕೂಡಿದಕಾಲಕ್ಕೂ ಸಣ್ಣ ಹುಳು ವುಸಕಲರಾಯರ ಮೇಲೆಯದ್ದ ಮಾತ್ರವಿಲ್ಲವು ಲೆಖ್ಖವಿಲ್ಲದ
ಭೂಮಂಡಲ ಪರಮಂಡಲಗಳು ಸೃಷ್ಟಿಸಬೇಕಾದರೆ ಕ್ಷಣದೊಳಗೆಲವಲೇಶವು ಅದ್ದಿಯಿಲ್ಲದೆ ಸೃಷ್ಟಿ
ಸುವರು ಸೃಷ್ಟಿಸಿದ ಮೇಲೆ ಅಬಾವಮಾಡಬೇಕಾದರೆ ನಿಮಿಷದೊಳಗೆ ನಿರ್ಮೂಲವ ಮಾಡುವರು —
ಸಕಲ ಬಲಾಢ್ಯರು ರಾಜರು ವಿದ್ಯಾಶಾಸ್ತ್ರಸಂಪನ್ನರು ಏಕವಾಗಿ ಕೂಡಿದರು ಒಂದು ರೋಮವ ಸಹ
ವಾಗಿ ಹುಟ್ಟಿಸುವದಕ್ಕೆ ತ್ರಾಣವು ಸಾಲದು- ಸೃಷ್ಟಿಕಾರ್ಯವು ದೇವರಿಂದ ಆಗುವದೆ ಹೊರತು ನೂ
ರು ಬ್ರಹ್ಮರಿದ್ದ ಕಾಲಕ್ಕೂ ಯಾರ ಶಕ್ತಿಯಿಂದಲಾಗದು- ದೇವರು ಕಡೆಯಿಲ್ಲದ ಜ್ಞಾನಸ್ವರೂಪವು ಆಗಿರಕ್ಕೆ ಒಂ
ದು ಮರವುಯಿಲ್ಲದೆ ಭೂತ ಭವಿಷ್ಯದ್ವರ್ತಮಾನ ವೃತ್ತಾಂತಗಳೆಲ್ಲ ಅವರ ಮಿತಿಯಿಲ್ಲದ ಬುದ್ಧಿಸನ್ನಿಧಾನ
ದಲ್ಲಿದ್ದಾವು- ಒಬ್ಬೊಬ್ಬನ ಹೃದಯದೊಳು ಯಷ್ಟು ಅಂತರಂಗವಾದ ವಿಚಾರದ ಬಗೆಯಿದ್ದರು ಸಮಸ್ತವು ಅ
ವರಿಗೆ ಪ್ರತ್ಯಕ್ಷವು- ಸಮಸ್ತವು ಅವರ ನೀತಿಸ್ವರೂಪವಾದ ಚಿತ್ತಕ್ಕೆ ಸರಿಬಂದ ಹಾಗೆ ನಡಸಿಕೊಳ್ಳುತ್ತಾ
ಬರುತ್ತಾರೆ ಅದಕ್ಕೂ ಇದಕ್ಕೂ ಬೇರೆ ಒಬ್ಬಗೆ ಸ್ವತಂತ್ರವೂ ಪಾರುಪತ್ಯವೂ ಕೊಡಕಾರಣವಿಲ್ಲ ಆತನು
ಚಿತ್ತವಿದ್ದರಿಂ ಯಾರಿಗೆಯೇನು ಬೇಕೊ ಅದನ್ನು ದಯಮಾಡುವನು ಸಕಲ ಮನುಷ್ಯಾತಿಶಯದ ಸಂ
ಗಡಲು ತಮಗೆಯಿಷ್ಟವಾಗಿರುವವರಿಗೆ ಇಂಥಾ ಕರುಣವನ್ನು ಮಾಡುವದು ದುಷ್ಟಮಿರ್ಗಳಿಗೂ ತಮ್ಮ ಮೇ
ಲಿನ ಬಕ್ತಿ ವಿಶ್ವಾಸವು ತಪ್ಪುಸುವವರಿಗೂ ಕೊಡುವದಿಲ್ಲ- ಈ ಲೋಕದಲ್ಲಿ ಸ್ವಲ್ಪ ವಿವೇಕವುಂಟಾದವನು ಶ್ರೀ
ಮಂತ ಮೇಲೆ ಒಬ್ಬರಿಗೆ ವುದ್ಯೋಗ ಕೊಡಬೇಕಾದರೆ ಒಳ್ಳೆಯವನಿಗೆ ಹೊರತು ತನ್ನ ಕಾರ್ಯವ ಕೆಡಿ
ಸುವವನಿಗೂ ತನಗೆ ಬರುವ ಕಾಣಿಕೆಯನ್ನು ಅಪಹರಿಸುವವನಿಗೂ ಇಂಥಾ ವುದ್ಯೋಗ ಕೊಡು
ವದಿಲ್ಲವು ಈಗಲುತ್ತಮರ್ತಿಗಳು ಸಕಲ ಮನುಷ್ಯರಿಂದಲೂ ಪ್ರಕಾಶಿಸಲ್ಪಟ್ಟವರೋ ದೇವರಿಗೆ
ಯಿಷ್ಟರಾದವರೋ ಒಬ್ಬೊಬ್ಬನ ಚರಿತ್ರೆಗಳು ಕಥೆಗಳು ಸಂಕ್ಷೇಪವಾಗಿ ಶೋಧಿಸಿನೋಡವೇ

ಶು ಈ ಪರೀಕ್ಷೆಯಿಂದ ಅವರ ಮೇಲೆ ಹುಟ್ಟಿದ ಪ್ರೇಮ ಹೋಗುವದಕ್ಕೆ ಮಾರ್ಗವಾಗುವದು-

-ಬ್ರಹ್ಮನು-

ಬ್ರಹ್ಮದೇವರ ಹುಟ್ಟುವಳಿ ಮುಂಚೆ ಹೇಳಿದ ಹಾಗಾಯಿತು- ಈಗಲೂ ಅವನ ರೂಪು ಅಂದವ ನೋಡಬೇಕಾದರೆ ಒಂದು ಶರೀರಕ್ಕೆ ಒಂದು ಶಿರಸ್ಸು ಸಾಕಲ್ಲದೆ ಇವನಿಗೆ ಹಾಗಲ್ಲ- ಐದು ತಲೆಗಳ ಸಂಗಡ ಹುಟ್ಟಿದ್ದಾನೆ ಅದು ಕಾರಣ ಪಂಚಮುಖ ಬ್ರಹ್ಮನೆಂದು ಅನ್ನಿಸಿಕೊಂಡನು ಕೆಲವು ಕಾಲ ಪಂಚ ಶಿರಸ್ಸುಗಳಿಂದೆಯಿದ್ದನು ಆಮೇಲೆ ಒಂದು ಕಳಕೊಂಡನು ಅದು ಹ್ಯಾಗಂದರೆ- ಒಂದು ದಿನ ತನ್ನ ಸೊಸೆಯಾದ ಪಾರ್ವತಿಯನ್ನು ಮೋಹಿಸಿದರೆ ಆ ದ್ರೋಹವನ್ನು ಈಶ್ವರನು ಕಣ್ಣುಗಂಡು ರಾಗದ್ವೇಷವು ಹುಟ್ಟಿ ಅವನ ಒಂದು ಶಿರಸ್ಸನ್ನು ಖಂಡಿಸಿದನು ತದಾರಭ್ಯವಾಗಿ ಚತುರ್ಮುಖ ಬ್ರಹ್ಮನಾದನು- ಈ ಕಥೆಯನ್ನು ಗಿರಿಜಾಕಲ್ಯಾಣದಲ್ಲಿ ವಿಸ್ತಾರವಾಗಿ ಹೇಳಿಯಿದ್ದೀತು- ಅವನ ಕುಮಾರಿಯಾದ ಸರಸ್ವತಿಯೆ ಅವನಿಗೆ ಸತಿಯಾಗಿ ಗಂಡನ ಬಾಯಲ್ಲಿ ವಾಸವಾಗಿದ್ದಾಳೆ- ತನ್ನ ಕುಮಾರಿಯ ಸಂಗಡ ತಾನು ದುಷ್ಟರೂಪಾಗಿ ಸಂಗಮವ ಮಾಡಿದನು ಎಂದು ಪುರಾಣದೊಳು ಹೇಳುತ್ತದೆ- ಈ ದೋಷದ ನಿಮಿತ್ತವಾಗಿ ಬ್ರಹ್ಮನಿಗೆ ಗುಡಿಯೂ ಜಾತ್ರೆಯೂ ಇಲ್ಲವೆಂಬದಾಗಿ ಒಂದರಲ್ಲಿ ಹೇಳಿಯಿದ್ದೀತು- ಇದಲ್ಲದೆ ಇನ್ನೊಂದರಲ್ಲಿ ಭೃಗು ಮಹಾಮುನಿ ಸತ್ಯಲೋಕಕ್ಕೆ ಹೋದಾಗಲು ಬ್ರಹ್ಮನು ತನಗೆ ಉಪಚಾರವ ಕಡಮೆ ಮಾಡಿದದಕ್ಕೆಯಿಂದ ಈ ಶಾಪವಿಟ್ಟನೆಂದು ಹೇಳಿಯಿದ್ದೀತು- ಇಂಥಾವನಿಗೆ ಸತ್ಯಲೋಕವೂ ಮತ್ತು ಮೂರು ಘನವಾದ ಪುಸ್ತಕಗಳೂ ವುಂಟೆಂದು ಕಲ್ಪಿಸುತ್ತಾಯಿದ್ದಾರೆ- ಸೃಷ್ಟಿ ಮಾಡುವದು ವರಗಳ ಕೊಡುವದೂ ಸಕಲ ಪ್ರಾಣಿಗಳ ಸಂಖ್ಯನ ಮಾಡುವದೂ ಎಲ್ಲರ ಹಣೆಯಲ್ಲಿ ಬರೆಯುವದೂ ಈ ಮೂರಕ್ಕೆ ಸಾಮರ್ಥ್ಯವುಳ್ಳವನೆಂದು ಹೇಳುವರು- ಆದರೆ ತನ್ನ ಶಿರಸ್ಸು ಮನಃಯಿಟ್ಟು ಕೊಳ್ಳಲಿಕ್ಕೆ ತ್ರಾಣವಿಲ್ಲದವನು ಪ್ರಪಂಚವ ಹ್ಯಾಗೆ ಹುಟ್ಟಿಸಿದನು- ಹಿರಣ್ಯಕಶ್ಯಪನಿಗೆ ಬಲಿಚಕ್ರವರ್ತಿಗೆ ರಾವಣನಿಗೆ ಯಿನ್ನು ಕೆಲವರಿಗೆ ಆದಿದೇವತೆಗಳ ಸಂಗಡ ಸದಾ ಸಾವು ಯಿಲ್ಲದ ಹಾಗೆ ವರವ ಕೊಟ್ಟಿದ್ದವನಾದರೆ ತನಗೆ ಶಾಪವೂ ಶಿರಸ್ಸಿನ ಕಷ್ಟವೂ ಬಾರದ ಹಾಗೆ ಉಪಾಯದಲ್ಲಿ ವುಳಿಸಿಕೊಳ್ಳಲಾರದೆ ಹೋದನೇ- ಎಲ್ಲರ ಹಣೆಯಲ್ಲಿ ಬರೆಯುವವನು ತನ್ನ ಕೈಗಳು ತನ್ನ ಅವಸ್ಥೆಯನ್ನು ಹ್ಯಾಗೆ ತಿಳಿಯದೆ ಹೋದವು- ನಾಲ್ಕು ವರ್ಣಾಶ್ರಮಗಳಾದ ಬ್ರಹ್ಮ ಕ್ಷತ್ರಿ ವೈಶ್ಯ ಶೂದ್ರ ನಾಲ್ಕು ಜಾತಿಗಳು ಅವನ ಮುಖದಲ್ಲಿ ಭುಜದಲ್ಲಿ ವೂರುಗಳಲ್ಲಿ ಪಾದದಲ್ಲಿ ಹುಟ್ಟಿದವು ಯೆಂದನ್ನುತ್ತಾರೆ- ಅವುಗಳಿಗೆ ಆ ಕ್ಷಣವಾದ ಗರ್ವಗಳುಂಟಾದ ಪ್ರಕಾರ

ವಾದವು ಇನ್ನು ಬೇರೆ ಪುರಾಣಗಳಲ್ಲಿ ಮನುಷ್ಯನ ಸೃಷ್ಟಿಗೆ ಬಗೆಬಗೆಯಾಗಿ ಸರಿ ಬಂದ ಹಾಗೆ ಹೇಳಿ ಯಿದ್ದೀತು ಬ್ರಹ್ಮದೇವರು ಮುಂಚೆ ಗೆ ಕುಂಬಾರನ ಹಾಗೆ ಮನುಷ್ಯರ ದೇಹಗಳನ್ನು ಮಾಡುವಾಗಲು ಮೊದಲಲ್ಲಿ ಮನುಷ್ಯನ್ನ ಒಂಟಿಕಾಲಲ್ಲಿ ಹುಟ್ಟಿಸಿದನು - ಆದರೆ ಕುಂಟಕುಂಟ ಬೀಳುತ್ತಾ ನಡಿಯುವದು ನೋಡಿ ಚನ್ನಾಗಿಲ್ಲವೆಂದು ತಿಳಿದು ಕಡೆಗೆ ಎರಡು ಪಾದಗಳ ಮೇಲೆ ನಿಲ್ಲಿಸಿದನು - ಎಂದು ಹೇಳುವರು - ಬ್ರಹ್ಮನ ಕಾರ್ಯಗಳಲ್ಲಿ ಅಲ್ಪಕಥೆಗಳು ಎತ್ತಿ ತೋರಿಸಿದ್ದು ಯಿಷ್ಟೇ ಸಾಕು —

ಈಶ್ವರನ ಕಥೆ -

ಈಗಲು ಈಶ್ವರನ ಕಾರ್ಯವು - ಈಶ್ವರನೆಂದು ರುದ್ರನೆಂದು ಸದಾಶಿವನೆಂದು ಪರಮೇಶ್ವರನೆಂದುವು ಹಾಘನವಾದ ಹೆಸರುಗಳುಳ್ಳವನಲ್ಲವೆ - ಆತಗೆ ಇರುವ ವೇಷವನ್ನೋಡಿದರೆ ಜೋಗಿಯಂದು ಅನ್ನಿಸಿಕೊಳ್ಳುವನ್ಯಾಯವಾಗಿಥೆ - ಅದು ಹ್ಯಾಗಂದರೆ ದೇಹವಾದ್ಯಂತವು ಬಸ್ಮವ ಬಳಿದುಕೊಂಡು ಜಡೆಗಳಧರಿಸಿ ಡಮುರುಗ ತ್ರಿಶೂಲ ಮೊದಲಾದ ಆಯುಧ ಸ್ಥಾನಾಗಿ ಸರ್ಪಕೆಗಳನ್ನು ಆಭರಣವಾಗಿ ಶೃಂಗರಿಸಿಕೊಂಡು ಬ್ರಹ್ಮಹತ್ಯ ನಿಮಿತ್ತವಾಗಿ ಬ್ರಹ್ಮಕಪಾಲ ಕೈಯಲ್ಲಿ ಹಿಡಿದು ಕುಂಯ್ಯೋ ಮುರ್ರೋ ಎಂದು ಕೂಗಿ ಬಿಕ್ಷವ ಎತ್ತಿಂದು ರುದ್ರಭೂಮಿಯಂಬ ಸ್ಮಶಾನದಲ್ಲಿ ವಿಶೇಷವಾಗಿ ನಿವಾಸಿಸಿಕೊಂಡಿದ್ದಾನೆ - ಏಕಾಕ್ಷಿಲೋಕಸಂಹಾರಿಯೆಂಬುವ ಹಾಗೆ ಹಣೆಯಲ್ಲಿ ಒಂದು ವುಗ್ರಕಣ್ಣುಳ್ಳವನಾಗಿ ಸಕಲವನ್ನೋಡುವದಕ್ಕೂ ಕೆಡಿಸುವದಕ್ಕೂ ಸ್ವತಂತ್ರವುಂಟೆಂದು ಹೇಳುವರು ಇಂಥಾ ತ್ರಾಣವುಳ್ಳದಕ್ಕೆ ಕುರುಹು ಏನು ಯೆಂದರೆ ಪುಣ್ಯಾತ್ಮರ ಮಹಿಮೆಗೋಸ್ಕರ ಇಂಥಾ ವುದ್ಯೋಗಗಳಿಗೆ ಯೋಗ್ಯನಾದನೋ ಶೋಧಿಸಬೇಕು - ಸಂಹರಿಸುವದಕ್ಕೆ ತಾನೆ ಆದಿ ಸಂಹಾರವಾಗುವದಕ್ಕೆ ಸಮೀಪವುಳ್ಳವ ತಾನೆ ಆದನು - ಇದಲ್ಲದೆ ಬಸ್ಮಾಸುರನೆಂಬುವನು ಈಶ್ವರನ ಕುರಿತು ದೀರ್ಘತಪಸ್ಸು ಮಾಡಲು ಅವನಿಗೆ ಪ್ರತ್ಯಕ್ಷವಾಗಿ ಬೇಕಾದ ವರವನ್ನು ಬೇಡು ಯೆಂದೆನ್ನಲಾಗಿ ಬಸ್ಮಾಸುರನು - ನಾನು ದಾವನ ತಲೆಯ ಮೇಲೆ ಕೈಯನ್ನಿಟ್ಟರೆ ಅವನು ಬಸ್ಮವಾಗಿ ಹೋಗುವ ಹಾಗೆ ವರವ ಪ್ರಸಾದಿಸು ಯೆಂದನು ಅದೇ ಪ್ರಕಾರ ಕೊಟ್ಟನು - ಅಂಥಾ ವರವನ್ನು ಕೈಕೊಂಡು ಅದನ್ನು ಪರೀಕ್ಷಿಸಬೇಕೆಂದು ಈಶ್ವರನನ್ನು ಗದಿಮಿಕೊಂಡು ಹೋದನು - ಅದಕ್ಕೆ ಈಶ್ವರನು ತಾ ಕೊಟ್ಟಂಥಾ ವರವು ತನಗೆ ಮೃ

ತ್ರುವಾಗಿ ಬಂತೆಂದು ವ್ಯಥೆಪಟ್ಟು ಅವಸ್ಥೆಪಟ್ಟು ನಾನಾ ದಿಕ್ಕುಗಳು ತಿರುಗಿ ಬಂದು ಭ್ರಾಂತನಾಗಿ ಒಂ
ಗ ತೊಂಡೆಕಾಯಲ್ಲಿ ಅಡಗಿಕೊಂಡನು- ಕಡೆಗೆ ವಿಷ್ಣುವಿನ ಮೋಹತಂತ್ರದಿಂದ ಆ ರಾಕ್ಷಸನು ತನ್ನ ಕೈ
ಯ್ಯ ತನ್ನ ತಲೆಯ ಮೇಲೆ ಇಟ್ಟುಕೊಂಡು ಉರಿದು ಭಸ್ಮವಾಗಿ ಹೋದನು- ಈಶ್ವರನು ಪ್ರಾಣವನ್ನು ಉ
ಳಿಸಿಕೊಂಡು ಹೊರಟು ಬಂದನು- ಇನ್ನೊಂದು ವೇಳೆಯಲ್ಲಿ ಪಾರ್ವತಿಪರಮೇಶ್ವರನು ಸಹಾ ಬಾಣಾಸು
ರನ ಬಾಗಿಲಲ್ಲಿ ಗೊಲ್ಲರಾಗಿ ಕಾವಲಿದ್ದರು- ಈಶ್ವರನು ರಾಕ್ಷಸರ ಸಂಗಡ ಮಾಡಿದ ಹೋರಾಟಗಳು ಬ
ಡಿದಾಟಗಳು ಜಯಾಪಜಯಗಳು ಎಣಿಸಬೇಕಾದರೆ ಬಹಳವುಂಟು ತನ್ನ ಬಿಂದಣಾ ಪರ್ವತ
ವಾದ ಕೈಲಾಸವನ್ನು ರಾಕ್ಷಸ ಬಂದು ಎತ್ತಿ ಕದಲಿಸಿದನು- ಒಂದು ಜಗಳದ ನಿಮಿತ್ತವಾಗಿ ತ್ರಿಪುರಹರನೆಂ
ದು ಅನ್ನಿಸಿಕೊಂಡನು- ಇಂಥಾ ಯುದ್ಧಮಾರ್ಗವು- ಅದಕ್ಕೆ ಮುಖ್ಯವಿವನಂದರೆ ಭೂಮಿಯನ್ನು ರಥವ ಮಾಡಿ- ರ
ಥಸಾರಥ್ಯಕ್ಕೆ ಬ್ರಹ್ಮಗೆ ಕಟ್ಟಳೆಯ ಮಾಡಿ ವೇದಗಳನ್ನು ಕುದುರೆಗಳ ಮಾಡಿ- ವಿಷ್ಣುವನ್ನ ಅಂಬು ಮಾಡಿ ಮಹಾ
ಮೇರುವನ್ನು ಬಿಲ್ಲು ಮಾಡಿ ಆದಿಶೇಷನನ್ನು ಬಿಲ್ಲಿನ ಹಗ್ಗವ ಮಾಡಿ ಶಿವನು ತಾನು ರಥಿಕನಾಗಿ ನಿಂತು ಬಾಣವನ್ನು
ತ್ರಿಪುರದ ಮೇಲೆ ಪ್ರಯೋಗಿಸಿ ಮೂರು ಕೋಟೆಗಳನ್ನು ಅವರೊಳಗಿರುವ ರಾಕ್ಷಸರನ್ನು ಭಸ್ಮವ ಮಾಡಿದನೆಂ
ದು ಹೇಳುವರು- ಇಂಥಾ ಬುದ್ಧಿಯುಕ್ತಿಗಳಿಂದ ತಪ್ಪಿದ ಕಥೆಯು ಭಾಗವತ ಸಪ್ತಮಸ್ಕಂಧದಲ್ಲಿ ಹೇಳಿಯಿ
ದೆ- ಮತ್ತು ಭಾರತದಲ್ಲಿ ಬೇರೆ ಒಂದು ಕಥೆಯುಂಟು ಹ್ಯಾಗಂದರೆ- ಈಶ್ವರನು ಮಕ್ಕ್ಯಾಗಬೇಕೆಂದು ಪರ್ವ
ತದ ಮೇಲೆ ತಪಸ್ಸು ಮಾಡುತ್ತಾಯಿರಲಾಗಿ ಆ ಪರ್ವತವು ಆತನ ತಪಸ್ಸಿಗೆ ಮೆಚ್ಚಿ ತನ್ನ ಮಗಳಾದ ಪಾರ್ವತಿಯನ್ನು
ಆತಗೆ ಕೊಟ್ಟನು- ಈ ಪ್ರಕಾರದಲ್ಲಿ ಗುಡ್ಡಕ್ಕೆ ಅಳಿಯನಾಗಿದ್ದಾನೆ- ಇದಲ್ಲದೆ ಪಾರ್ವತಿ ತನಗೆ ಸಾಲದೆ ಮತ್ತು ಗಂ
ಗೆ ಎಂತೆಂಬುವರನ್ನು ಹೆಂಡತಿಯ ಮಾಡಿಕೊಂಡನು- ಆತನ ಪುರಾಣಗಳಲ್ಲಿ ಹೇಳಿರುವ ಮೋಹದ ಅಕ್ರ
ತ್ಯಗಳು ಎಣಿಸಲಿಕ್ಕೆ ತೀರಲ್ಲವು ಶಕ್ಯದು- ಒಂದು ದಿನ ಬಳೆಗಾರ ಕಟ್ಟೆವೇಷವ ಧರಿಸಿಕೊಂಡು ಮಲ್ಲಾರವ ಹೆಗಲ
ಮೇಲೆ ಹಾಕಿಕೊಂಡು ಹೋಗಿ ಒಬ್ಬ ಗ್ರಹಸ್ಥನ ಮನೆಯಲ್ಲಿ ಏಳು ಮಂದಿ ಅಕ್ಕತಂಗಿಯರನ್ನು ಕೆಡಿಸಿಯಿ
ದ್ದಾನೆ- ಅವರ ತಂದೆ ತಾಯಿಗಳು ಆ ದೋಷಕ್ಕೆ ಚಿಂತಿಸಿ ಮೊರೆಯಿಟ್ಟುಕೊಂಡರೆ ಆ ಏಳು ಮಂದಿ ಸ್ತ್ರೀಯ
ರನ್ನು ಮದುವೆಯಾಗಿದ್ದಾನೆ- ಇನ್ನೊಂದು ಸಮಯದಲ್ಲಿ ಒಬ್ಬ ಸ್ತ್ರೀಯಳು ಶಿವನ ಸಂಗಾತ ಕೂಡಿ ಮಾಡಿ ಬ
ಮಣ್ಣು ಹಾಕಿಸಿ ಅವನಿಗೆ ಅಂಬಲಿಯನ್ನು ಹೊಯಿದು ಇದ್ದಾಳೆ ಹೀಗೆ ನಾಚಿಗೆ ದೂಷ್ಟಕ್ಕೆ ಕೇದಾ

ದಂಥಾ ಅರವತ್ತು ಕಥೆಗಳು ಈಶ್ವರನ ಅರವತ್ತು ಲೀಲೆಗಳೆಂದು ಚೊಕ್ಕನಾಥನ ಹಸ್ತದಲ್ಲಿ ಬರದುಯಿದ್ದಾ
ವು- ಈಶ್ವರನ ಚರಿತ್ರೆಗಳೆಲ್ಲಾ ಲಿಂಗಪುರಾಣದಲ್ಲಿ ಬರದುಯಿದ್ದೀತು ಅದನ್ನು ಸೂಕ್ಷ್ಮವಾಗಿಯೆಲ್ಲಿ ಎಚ್ಚರಿ
ಸುವಾಗ ಸಂದೇಹವುಪಟ್ಟರಾಯಿತೆ ತಾನೇ ಪುರಾಣವ ಓದಿದರೆ ಸಂದೇಹವು ತೀರುವದು - ಈಶ್ವರನು
ಮೋಹಾಂಧಕಾರದಿಂದ ತಾನು ತಪಸ್ಸುಮಾಡುವವರ ಸ್ತ್ರೀಯರ ಮುಂದೆ ಹೇಳಬಾರದ ಮೋಹಚೇ
ಷ್ಟೆಗಳು ಮಾಡುವಾಗ್ಗೆ ಆ ಸ್ತ್ರೀಯರ ಗಂಡರು ಅಂಥಾ ಅಪಲಕ್ಷಣಗಳು ನೋಡಿ ಮಹಾಜಾಗ್ರತೆಯಿಂ
ಷಿಗಳಾಗಿ ಈಶ್ವರನನ್ನು ಶಪಿಸಿದರು - ನಿನಗೆ ಗಂಡಸು ಲಕ್ಷಣವಿಲ್ಲದ ಹಾಗೆ ಹೋಗಲಿಯೆಂದರು -
ಅದೇರೀತಿಯಾಗಿ ಅದು ಹರಿದು ಬಿತ್ತು ಆ ಸಮಯದಲ್ಲಿ ಈಶ್ವರನ ಹೆಂಡತಿಯಾದ ಪಾರ್ವತಿಯು ಬಂ
ದು ಯಾವರೂಪದಲ್ಲಿಯೂ ಯಾವವಿಧದಲ್ಲಿಯೂ ಇದ್ದರೂ ತನ್ನ ಗಂಡನಿಗೆ ಸಹಾಯವಾಗಿದ್ದಳು ಇಲ್ಲಿಹೇ
ಳಿದರೆ ನಾಚಿಕೆಯಾಗಿರುವದು ಯೋಗ್ಯವಲ್ಲವು - ಈ ಶಾಪವೃಷಿಸಿದ ಮೇಲೆ ಮತ್ತು ತಪಸ್ವಿಗಳು
ಹೇಳಿದ್ದೇನಂದರೆ - ನಿನಗೆಯಿನ್ನು ಮೇಲೆ ಪೂಜನದೆಯ ಬೇಕಾದರೆ ಪುರುಷ ಚಿಹ್ನೆಯರೂಪದಗೆ
ನಡೆಯುವದಾಗಲಿಯೆಂದರು - ತದಾರಭ್ಯವಾಗಿ ಇದೇ ಪ್ರಕಾರವೆ ಈಶ್ವರಗೆ ಪೂಜೆಯಾಗುತ್ತಾಯಿ
ದ್ದೀತು - ಅದುಕಾರಣ ಶಿವಭಕ್ತರು ಪೂಜೆಮಾಡುವರು ಅದೇಗುರುತು ಕೈಗೂ ಕೊರಳಿಗೂ ಕಟ್ಟುವರು -
ಇಂಥಾ ಅಶುಭವಾದ ಕಾರ್ಯವನ್ನು ಮನುಷ್ಯನಾದವನು ಯುಕ್ತಾಯುಕ್ತ ಸ್ವಲ್ಪವಾದರು ಎಣಿಸದೆ
ನಡದರೆ ಎಷ್ಟು ನಾಚಿಕೆ ಎಷ್ಟು ಅಸಹ್ಯಪಟ್ಟಬಹುದು ಆದರೆ ಇಂಥಾ ದುರ್ಗಂಧವನ್ನು ಮುಟ್ಟಿಕ್ಕೆ
ಜಂಗಮರು ಇನ್ನು ಅವರು ಇವರು ಭ್ರಮೆಗಳನ್ನು ಹುಟ್ಟಿಸುತ್ತಾಯಿದ್ದಾರೆ - ಮತ್ತು ಯಾವನಾದರು
ತನ್ನ ಕಟ್ಟು ಲಿಂಗವನ್ನು ಕಳಕೊಂಡರೆ ಅವನು ಅದರ ಹಿಂದೆ ಸಾಯಬೇಕು ಬದುಕಬಾರದೆಂದು ಭೋ
ಧಿಮಾಡಿದ ಪ್ರಕಾರವೆ ಕೆಲವರು ದುರ್ಮರಣವನ್ನು ಹೊಂದುತ್ತಾರೆ - ಕಂಚಿ ಬಳಿಗೆ ಒಬ್ಬ ಶಿವಭಕ್ತನು
ಬಂದು ಶಿವಪೂಜೆಮಾಡುವಾಗಲು ಕೋಡಗನು ಬಹು ಚೇಷ್ಟೆಯುಳ್ಳದಲ್ಲವೆ ಅದುಕಾರಣ ಬಂ
ದು ಕೋಡಗ ಬಂದು ಲಿಂಗವನ್ನು ಕಸುಕೊಂಡು ಮರದ ಮೇಲಕ್ಕೆ ಏರಿ ಹೋಯಿತು - ಅವನು ಎಷ್ಟು ಬೆದ
ರಿಸಿ ನೋಡಿದಾಗ್ಯು ಶಿಕ್ಕದೆ ಹೋಯಿತು - ಆಗಲು ದಿಗಿಲುಪಟ್ಟು ಮಹಾಖಿನ್ನ ಅಯ್ಯೋ ಎಂದು ಪಾಪಿಷ್ಟ ಕೋ
ತಿ ನನ್ನ ದೇವರನ್ನು ಎತ್ತಿಕೊಂಡು ಹೋಯಿತು ಇನ್ನು ಮೇಲೆ ತನಗೆ ಗತಿ ಏನು ಎಂದು ಕೇಳುವದಕ್ಕೆ
ಜಂಗಮರ ಸಮುಖಕ್ಕೆ ಬಂದು ಸ್ವಾಮಿ ನನ್ನ ದುಃಖವನ್ನು ಏನು ಹೇಳಲಿ ನೀವು ನನಗೆ ಕಟ್ಟಿದ ದೇವರನ್ನು

ಕಳಕೊಂಡೆನು ಹ್ಯಾಗಂದರೆ ಕೊಟ್ಟ ಎತ್ತುಕೊಂಡು ಹೋಯಿತು ಎಂದು ಬಿನ್ನಹವ ಮಾಡಿಕೊಳ್ಳಲಾಗಿ ಅದಕ್ಕೆ
ಆ ಜಂಗಮರು ಮಹಾದೋಷವೆಂದು ದೇವರು ಹೋದರೆ ಅದರ ಸಂಗಡ ಜೀವವು ಹೋಗಬೇಕೆಂದು ಹೇ
ಳಿ ಮತ್ತು ನೀನು ಈಗ ಸಾಯಬೇಕಾದದ್ದೇ ಸಿದ್ಧವು ಎಂದು ಹೇಳಿದರೆ- ಶಿಷ್ಯನು ಇನ್ನು ಬಹುಕಾಲಬ
ದುಕಬೇಕೆಂಬ ಆಶೆಯುಳ್ಳವನಾಗಿ ಸ್ವಾಮಿ ಮತ್ತೊಂದು ಉಪಾಯವೇನು ಇಲ್ಲವೆ- ನೋವು ಕೊಡದಿಲ್ಲದ
ತೆ ಸುಮ್ಮನೆ ಹ್ಯಾಗೆ ಸಾಯಲಿ ಎಂದು ಕೇಳಿದರೆ- ಗುರುವು ನಾಲಿಗೆಯನಾದರು ಕಿತ್ತುಕೊಂಡು ಸಾಯ
ಬೇಕು ಹೊತ್ತು ಬೇರೆ ಯಿನ್ನೊಂದು ಪ್ರಾಯಶ್ಚಿತ್ತವಿಲ್ಲವೆಂದು ಹೇಳಿದನು- ಆ ಮಾತಿಗೆ ಶಿಷ್ಯನು ಕೆಲ
ವು ಹೊತ್ತು ಆಲೋಚನೆ ಮಾಡಿ ಮನಸ್ಸಿನಲ್ಲಿ ಕಪಟವನ್ನಿಟ್ಟುಕೊಂಡು ಹೀಗೆಂದನು- ನಾಲಿಗೆ ಕಿತ್ತುಕೊಳ್ಳ
ಲಿಕ್ಕೆ ಧೈರ್ಯವು ಸಾಲದು ಕೆರೆಯ ಒಳಗಾದರು ಬಿದ್ದು ಜೀವವ ಬಿಡುವೆನು ಆದರೆ ಬಂದು ಮನವಿ ಮಾಡಿಕೊಳ್ಳು
ತ್ತೇನೆ- ದೇವರವರು ಅಲ್ಲಿ ಪರಿಯಂತರಕ್ಕು ಬಂದು ಧೈರ್ಯವನ್ನು ಕೊಟ್ಟು ನನ್ನನ್ನು ಆಶೀರ್ವದಿಸಿ ಕಳುಹಿಸಬೇ
ಕೆಂದನು- ಅದಕ್ಕೆ ಐಯ್ಯನವರು ಒಪ್ಪಿಕೊಂಡು ಶಿಷ್ಯನ ಸಂಗಡ ಹೋಗಿ ಕೆರೆಯ ಕಟ್ಟೆ ಒಳಗಡೆ ನೀರಿ
ನ ಅಂಚಿನ ಪರಿಯಂತರಕ್ಕೆ ಇಳಿದರು ಆಗಲು ಶಿಷ್ಯನು ಸ್ವಾಮಿ ಸಾಯುವದಕ್ಕಿಂತ ಮುಂಚೆ ಯಿನ್ನೊ
ಂದು ಸಾರಿ ದೇವರಿಗೆ ಪೂಜೆ ಮಾಡುವದಕ್ಕೆ ಅಪ್ಪಣೆಯನ್ನು ದಯಪಾಲಿಸಬೇಕೆಂದನು ಅದಕ್ಕೆ ಸಮ್ಮತಿ
ಯಾಗಿ ಐಯ್ಯನವರು ತಮ್ಮ ಲಿಂಗವನ್ನು ಅವನ ಕೈಯಲ್ಲಿ ಯಿಟ್ಟರು- ಶಿಷ್ಯನು ಯಜ್ಞಶಿ ತಪ್ಪಿ
ದವನ ಹಾಗೆ ಲಿಂಗವನ್ನು ಕೆರೆಯ ಒಳಕ್ಕೆ ಬಿಟ್ಟನು- ಆಗಲು ಗುರು ಇದನ್ನು ನೋಡಿ ಸ್ವಾಮಿ ಮೋಸವಾಯಿ
ತು ನಿಮ್ಮ ದೇವರು ಹೋಯಿತು ಆದರೆ ಈ ಮೋಸದಿಂದ ನಾನು ಮಾಡಿದ ಭಾಗ್ಯವು ನಿಮ್ಮ ಪಾದಗಳನ್ನು
ಹಿಡಕೊಂಡು ನಿಮ್ಮ ಸಂಗಡ ನೀರಿನೊಳಗೆ ಬಿದ್ದು ಕೈಲಾಸಕ್ಕೆ ಬರುವೆನೆಂದು ಪಾದಗಳನ್ನು ಹಿಡಕೊ
ಳ್ಳುವದು ನೋಡಿ ಐಯ್ಯನವರ ಮುಖವು ಸಪ್ಪಗಾಗಿ ಪಾಪಾತ್ಮ ಬಿಡು ಬಿಡು ಎಂದು ಬೇರೆ ವುಪದೇಶಿಸ
ಲಾರಂಭಿಸಿದರು- ಈ ದೇವರು ಹೋದರೆ ಇನ್ನೊಂದಾಗುವದು ಇಂಥಾ ವೃಬದ್ಧರುವ ವಿಷ್ಠೆ ದೊಡ್ಡತೂ
ಕದ ಬಲ್ಲಾವು ಅಪರೂಪವ್ವಾ ಎಂದು ಹೇಳಿ ಪಾದಗಳ ಬಿಡಿಸಿಕೊಂಡು ಶೀಘ್ರವಾಗಿ ಕಟ್ಟೆಯ ಮೇಲ
ಕ್ಕೆ ಹತ್ತಿ ಬರಲು ಸಂಗಡಲೆ ಶಿಷ್ಯನು ಬಂದನು- ಆ ಮೇಲೆ ಯಿರಡುದು ಜ್ಞಾನಿ ತಾಕದ ಬಂದು ಲಿಂಗ
ದ ದೇವರನ್ನು ಕಟ್ಟಿಕೊಂಡವರಾಗಿ ಯಥಾಪ್ರಕಾರ ಇದ್ದರು- ॥

ಈ ಕ್ಷೇತ್ರದಿಗಿಂತ ಬಳ್ಳಿಯ ಹಿಮೆ ಉಂಟಾದವನೊ ನೋಡಬೇಕು - ವಿಷ್ಣು ಭಕ್ತರು ಪರಿಪರಿಯ ವಿಧ
ಗಳಲ್ಲಿರುವರು - ನಾನಾ ಹೆಸರುಗಳನ್ನಿಟ್ಟುಕೊಂಡು ತತ್ತ್ವಾದಿ ಶ್ರೀವೈಷ್ಣವರು - ರಾಮಾನು
ಜರು - ಯಂಬೆರಡು ಮತದವರು - ಕೆಲ್ಲಿಮತದವರು - ಚಾತಾನರು - ದಾಸರು - ಇವರು ಬ
ಬ್ಬರಿಗೊಬ್ಬರು ಪರೀಕ್ಷೆಯಲ್ಲಿ ತಮ್ಮೊಳು ತಮಗೆ ನಾನಾ ಮಂತ್ರ ತಂತ್ರಾದಿಗಳಲ್ಲಿ ಮುದ್ರೆಗ
ಳು ರಹಸ್ಯಗೋಷ್ಠಿ ಗೋಷ್ಠಿಗಳು ವುಂಟು - ಆವೇಳೆಯಲ್ಲಿ ವೇಮನ್ನನು ಅವರಲ್ಲಿ ಯೇನು
ನೋಡಿದನೊ ಈ ಪದ್ಯವ ಹೇಳಿಯಿದ್ದಾನೆ - ಪದ್ಯ -

ಅವರೆಲ್ಲರು ತಮ್ಮ ದೇವರನ್ನ ಹೊಗಳಿ ಆದಿವಿಷ್ಣುವು ಸರ್ವಂ ವಿಷ್ಣುಮಯಂ ಜಗತ್ - ಶ್ರೀಮನ್ನಾ
ರಾಯಣೋ ಲೋಕರಕ್ಷಕಃ - ಯಂದು ಸ್ತುತಿಸುತ್ತಿದ್ದಾರೆ - ಶ್ಲೋಕ - ಮತ್ಸ್ಯಃ ಕೂರ್ಮವರಾಹ
ಶ್ಚ ನಾರಸಿಂಹಶ್ಚ ವಾಮನಃ ರಾಮೋ ರಾಮಶ್ಚ ರಾಮಶ್ಚ ಬುದ್ಧಃ ಕಲ್ಕಿಮೇವ ಚ ॥ ಈ ದಶಾ
ವತಾರಗಳ ಪ್ರಯೋಜನವೂ ಯೋಗ್ಯವೂ ಒಂದೊಂದಾಗಿ ಶೋಧಿಸಬೇಕು - ಮತ್ಸ್ಯಾವತಾರ-
ಪೂರ್ವಕ್ಕೆ ಬ್ರಹ್ಮನು ದಣಿವಿಕೆಯಿಂದ ಮಲಗಿರಲಿಕ್ಕೆ ವೇದಗಳು ನಿದ್ರೆ ಹೋಗುವವನಲ್ಲಿಯಿರಲಿಕ್ಕೆ
ಕಲಸವಿಲ್ಲವೆಂದು ಬಯಲಿಗೆ ಹೊರಹೊರಟವು - ವೇದಗಳ ಪುಸ್ತಕಗಳು ಹ್ಯಾಗೆ ನಡದು ಹೋ
ದವೊ ಆಶ್ಚರ್ಯವಲ್ಲವೊ - ಅವು ದಾರಿಯೊಳಗೆ ಹಯಗ್ರೀವನೆಂಬ ಅಸುರನ ಕೈಗೆ ಸಿಕ್ಕಿದವು -
ಆ ಕಳ್ಳರಾಕ್ಷಸನು ವೇದಗಳನ್ನು ಎತ್ತಿಕೊಂಡು ಹೋಗಿ ಸಮುದ್ರದೊಳು ಬಚ್ಚಿಟ್ಟುಕೊಂಡನು -
ಅದರ ನಿಮಿತ್ತವು ಈ ವಿಷ್ಣುವು ಮತ್ಸ್ಯಾವತಾರವನ್ನು ಧರಿಸಿಕೊಂಡನು - ಆ ಮತ್ಸ್ಯವು ಯಂಥಾದ್ದೆ
ಂದರೆ - ಸ್ವರ್ಣದ ಗರಿಗಳೂ ದೊಡ್ಡ ಮೀಸೆಯೂ ಸ್ವಲ್ಪವಾದ ಬಾಲವೂ ಬಂಗಾರ ವರ್ಣದ ದೇ
ಹವೂ ಸೌಂದರ್ಯವಾದ ರೂಪವೂ ವಿಸ್ತಾರವಾದ ಮೋರೆಯೂ ನೋಡತಕ್ಕ ಕಣ್ಣುಗಳೂ ವುಂಟಾಗಿ ಜಲ
ದಲ್ಲಿ ಚರಿಸುತ್ತಾ ಮುಖವನ್ನು ಚಾಚಿ ಮೀನುಗಳನ್ನು ಕದಡಿಸುತ್ತಾ ಮಿಟಿಮಿಟಿ ಬೀಳುತ್ತಾಯಿವೊದ

ಲಾದ ಮೀನಿನ ಚೇಷ್ಟೆಗಳು ಅನೇಕವಾಗಿ ಮಾಡಿ ಕಡೆಗೆ ಹಯಗ್ರೀವನನ್ನು ಬಿಡಿಸಿ ಹಿಡಿದು ಸಂಹರಿಸಿ ಆವೇದಗಳನ್ನು ಉದ್ಧಾರ ಮಾಡಿಯಿದ್ದಾನೆ- ಆ ಮೇಲೆ ವಿಷ್ಣುವು ವೇದಗಳು ಸಿಕ್ಕಿದ ತರುವಾಯ ತತ್ಕ್ಷಣದಲ್ಲಿ ತಂದು ವೇದತ್ರಯವನ್ನು ಯುಚ್ಚರಿಸಿ ಬ್ರಹ್ಮನಿಗೆ ಕೊಟ್ಟನು- ಈ ರೀತಿಯಾಗಿ ಭಾಗವತದಲ್ಲಿ ಬರೆದು ಯಿದ್ದೀತು- ಇಂಥಾ ಅಲ್ಪಪ್ರಯೋಜನಕ್ಕೆ ಆದಿದೇವರು ಸ್ವಲ್ಪ ಜೀವವಾದ ಮತ್ಸ್ಯವಾಗಿ ಹುಟ್ಟಬೇಕೆ- ಇದು ಅಯೋಗ್ಯವು-

ಕೂರ್ಮಾವತಾರ-

ಭಾಗವತ ಅಷ್ಟಮಸ್ಕಂಧದಲ್ಲಿ ಶುಕಯೋಗಿ ಹೇಳಿದ ಪ್ರಕಾರಕ್ಕೆ ದೇವತೆಗಳೆಲ್ಲರು ಬಲಿ ಚಕ್ರವರ್ತಿ ಮೊದಲಾದ ರಾಕ್ಷಸರಿಂದ ಕಷ್ಟಬಿದ್ದು ತಾಳಲಾರದೆ ಬಲಿಯನ್ನು ಶರಣು ಹೊಕ್ಕು ಕೆಲವು ಕಾಲವು ಕೂಡಾ ಶಾಕರ್ಯವಾಗಿದ್ದರು- ದೇವತೆಗಳು ಯಿನ್ನು ಮುಂದಕ್ಕೆ ತಮ್ಮನ್ನ ರಾಕ್ಷಸರು ಜಯಿಸದ ಹಾಗೆ ವಿಷ್ಣುವು ತಮಗೆ ಹೇಳಿದ ಪ್ರಕಾರವು ಮಂದರಪರ್ವತವನ್ನು ಸುತ್ತಮುತ್ತಲು ಅಗಿದು ಕದಲಿಸಿದರು- ಅದನ್ನು ಸಮುದ್ರಕ್ಕೆ ಹೋರುವ ವೇಳೆಯಲ್ಲಿ ದೇವತೆಗಳು ಕೆಲವರು ಸೋತರು ಕೆಲವರು ನೊಂದರು ಕೆಲವರು ಬರಗಿದರು- ಅಂಥಾ ಅವಸ್ಥೆ ವೇಳೆಯಲ್ಲಿ ವಿಷ್ಣುವು ಗರುಡಾರೂಢನಾಗಿ ಸಹಾಯವಾಗಿ ಬಂದು ಮಂದರಪರ್ವತವನ್ನು ದಧಿಯ ಸಮುದ್ರದೊಳಗೆ ಹಾಕಿದನು- ಆಗಲು ದೇವತೆಗಳು ಆ ಪರ್ವತವನ್ನು ಕಡಗೋಲು ಮಾಡಿ ಆದಿಶೇಷನನ್ನು ಕಡೆಯುವ ಹಗ್ಗವ ಮಾಡಿ ಪರ್ವತಕ್ಕೆ ಸುತ್ತಲು ರಾಕ್ಷಸರು- ತಲೆಯ ಕಡೆ ದೇವತೆಗಳು- ಬಾಲದ ಕಡೆ ಅವರು ಯಿವರನ್ನು ಯಿವರು ಅವರನ್ನ ಅನ್ಯೋನ್ಯವಾಗಿ ಯುಚ್ಚರಿಸಿ ಹಾಹಾಯೆಂದು ಆರ್ಭಟಿಸಿ ಕಡಿಯುವದಕ್ಕೆ ಆರಂಭಿಸಿದರು- ಕಡಿಯುವ ಸಮಯದೊಳು ಕಡಗೋಲೆಂಬ ಮಂದರಪರ್ವತವು ಜಲರಾಶಿಯಲ್ಲಿ ಮುಳುಗಿಹೋಯಿತು- ಆಗಲು ದೇವತೆಗಳು ನಾಚಿಕೆಪಟ್ಟು ವಿಲಾಪವನ್ನು ಹೊಂದಿ ವಿಷ್ಣುವಿನ ಪ್ರಾರ್ಥಿಸಿದರೆ ವಿಷ್ಣುವು ತ್ರಾವಲೆಯಾಗಿ ಜನ್ಮಿಸಿ ಪರ್ವತವನ್ನು ನಿಲ್ಲಿಸಿದನು- ಯಿದೇ ಕೂರ್ಮಾವತಾರಕ್ಕೆ ಕಾರಣವು- ಆ ಮೇಲೆ ತಿರುಗಿ ಕಡೆದರು ಕಾಲಕೂಟ ವಿಷ ಹುಟ್ಟಿತು ಅದನ್ನು ಈಶ್ವರನು ಕುಡಿದು ಕುತ್ತಿಗೆಯಲ್ಲಿ ನಿಲ್ಲಿಸಿದನು ಅದು ಕಾರಣಾ ಈಶ್ವರನಿಗೆ ನೀಲಕಂಠನೆಂಬ ಹೆಸರಾಯಿತು- ಆ ಮೇಲೆ ಅಮೃತವು ಹುಟ್ಟಿತು- ಅಪ್ಸರಸ್ತ್ರೀಯರೂ ಲಕ್ಷ್ಮಿಯೂ ಹುಟ್ಟಿದರು- ಯಿಂಥಾ ವಿಕಾರವಾದ ಕಥೆಗಳು ತಾಪಜ್ವರದ ಸಂಗಡ ಕೊಡ

ಯಾಗಿ ಭ್ರಾಂತರಾಗಿರುವವರಿಗೆ ಸಹಾಯ ಮಾಡುವದೂ ಸತ್ಯವಾದ ದೈವವನ್ನು ತಿಳಿಯದೆಯಿದ್ದ
ರೆ ದಾವ ಅಬ್ಬುದ್ಧಕ್ಕಾದರು ನಿಲಕಡೆಯಿಲ್ಲ– ಮತ್ತು ವಿಷ್ಣುವು ದೇವತೆಗಳಿಗೆ ಅಮೃತವ ಹಂಚಿ ಕೊಡು
ವಾಗಲು ರಾಕ್ಷಸರಿಗೆ ಅಮೃತ ಸಿಕ್ಕದ ಹಾಗೆ ಸ್ತ್ರೀಯಾಕಾರವ ಧರಿಸಿಕೊಂಡು ಅವರಿಗೆ ಮೋಹಚಿ
ತ್ತವ ತನ್ನ ಮೇಲೆ ಹುಟ್ಟಿಸಿದದರಿಂದ ಭ್ರಮೆಗೊಳಗಾಗಿ ಅಮೃತವ ಮರೆತರು– ಅದುಕಾರಣಾಯಿ
ವರಿಗೆ ಅಮೃತವುಯಿಲ್ಲದೆ ದೇವತೆಗಳಿಗೆ ಮಾತ್ರ ಸಿಕ್ಕಿತು– ಯಿದಲ್ಲದೆ ನಾರದಮುನಿಯು ಕೈ
ಲಾಸಕ್ಕೆ ಹೋಗಿ ಈ ವರ್ತಮಾನವನ್ನೆಲ್ಲ ಈಶ್ವರನ ಸಂಗಡ ಹೇಳಿದನು– ಆತನು ವಿಷ್ಣುವು ಧರಿ
ಸಿದ ಮೋಹಿನಿ ರೂಪವ ನೋಡಬೇಕೆಂದು ವೃಷಭಾರೂಢನಾಗಿ ಪಾರ್ವತಿಸಮೇತದಿಂದ ವೈ
ಕುಂಠಕ್ಕೆ ಬಂದು ವಿಷ್ಣುವಿನ ಕೇಳಿದರೆ ವಿಷ್ಣುವು ತಾಳಲಾರೆನೆಂದನು– ಈಶ್ವರನು ತಾಳುವೆ
ನೆಂದನು– ಆಮೇಲೆ ವಿಷ್ಣುವು ತಿರುಗಿ ಮೋಹಿನಿಯಾಕಾರದಿಂದ ವಸ್ತ್ರಾಸ್ತ್ರ ಶೃಂಗಾರಗಳಂಧ
ರಿಸಿ ಇಷ್ಟು ನಾಚಿಕೆಯಿಲ್ಲದೆ ವೇಶ್ಯಾಸ್ತ್ರೀಯರಿಗಿಂತ ನಿರ್ಲಜ್ಜೆಯಾಗಿ ಮಾಡಬಾರದ ಮೋ
ಹವಿಕಾರಗಳ ಮಾಡಿ ವಿಷ್ಣುವು ತೋರಿಸಿದನು– ಆಗಲು ಪರಮೇಶ್ವರನು ನಾಚಿಕೆ ಬಿಟ್ಟು ಪಾ
ರ್ವತಿದೇವಿ ನೋಡುತ್ತಿರಲಾಗಿ ಮೋಹಿನಿಯನ್ನು ಹಿಡಿಕೊಳ್ಳಹೋದನು ಅವಳು ಮುಂದೆ ಓ
ಡಿದರೆ ಈತನು ಸಂಗಡಲೆ ಓಡಿದನು– ಕಡೆಗೆ ಅವರಿಬ್ಬರು ಕೆಲವು ಹೊತ್ತು ಬೀದಿಗಳಲ್ಲಿ ಓಡಿದ
ರು ಆ ಸಮಯದೊಳು ಜಿನದೇವರು ಭೈರವದೇವರೆಂದು ಹುಟ್ಟಿದರು– ಈ ಕಥೆಯನ್ನ ನೆ
ನಸಿಬಂದು ವೇಳೆ ಶಿವಭಕ್ತರಿಗೂ ವಿಷ್ಣುಭಕ್ತರಿಗೂ ತಮ್ಮ ತಮ್ಮ ದೇವರು ಹೆಚ್ಚೆಂದು ವಿವಾದವಮಾ
ಡುವಾಗ್ಯೆ ಶಿವಭಕ್ತರು ಈ ಪ್ರಕಾರ ಹಂಗಿಸುತ್ತಾಯಿದ್ದಾರೆ– ನಿಮ್ಮ ವಿಷ್ಣುವು ನಮ್ಮ ದೇವರಿಗೆ
ಸೂಳೆ ಹಾರತು ಏನಾದರು ಹೆಚ್ಚು ವುಂಟೆ– ಅದಕ್ಕೆ ವಿಷ್ಣುಭಕ್ತರು ಎಷ್ಟು ಸೂಳೆಯಾದರು ಶಿ
ವನು ಅವಳ ಬಲೆಯಲ್ಲಿ ಬೀಳಲಿಲ್ಲವೋ ಅನ್ನುತ್ತಾರೆ– ಈರೀತಿಯಾಗಿ ತಮಗೆಯೋಗ್ಯವಿ
ಲ್ಲದೆ ತಮಗೆ ನಾಚಿಕೆಯಿಲ್ಲದೆ ಮಾನವಿಲ್ಲದೆ ದೇವತೆಗಳನ್ನು ಸ್ತುತಿಸುತ್ತಿದ್ದಾರೆ– ಈ ವಿವಾ
ದವು ಯಂಥಾದ್ದೆಂದರೆ ಚೋರಿಗೆ ಮೇಲೂ– ಮರವು ಮೇಲೂ ಎಂದು ತರ್ಕಿಸುವದಕ್ಕೆ ಸಮಾ
ನವಾಗಿರುವದು–

౩ వరహావతారవు

మూరనే అవతారవు విష్ణువిగె అష్టు కిన్నంయోగ్యవాద అవతారవు - హిరణ్యాక్షనెంబ రాక్షసన వధెమాడలి క్కె దొడ్డ కోరెగళిందలూ దొడ్డ హందియాగి విష్ణువు అవతరిసిదను - మనుష్యనల్లింతుష్టు నీచ నాదరు హంది హొట్టెయల్లి హోగువదక్కూ హందియాగి హుట్టువదక్కూ ఒడంబడువనే - ఇల్ల - మత్తు గరుడను విష్ణువిగె వాహనవాదుదక్కె గరుడపక్షిగె నమస్కారవమాడిదరె - జలదాశియల్లి ఆగలి - తప్పిమేలా గళిబిద్దిరువ సాక్షాద్వరహావతారక్కె సాష్టాంగవాగి నమస్కారగళను సమర్పిసువదిల్ల - అదుయోగ్యవల్లవల్ల - మత్తు ఇంథా తమ్మ దేవతెగళిగె హందియాగిహుట్టువదు యోగ్యవాయితో -

౪నే నరసింహావతారవు -

నాల్కనే అవతారవేనందరె అర్ధవు దుష్టమృగవు అర్ధవు మనుష్యను కూడి నరసింహనెంబహెసరాయితు - యాతక్కందరె - హిరణ్యాక్షన తమ్మనాద హిరణ్యకశ్యపు తన్న అణ్ణన వధెనిమిత్తవాగి విష్ణువిన మేలె అత్యంత ద్వేషియాగి హగెయన్ను తీరిసికొళ్ళబేకెందు వైకుంఠపట్టణక్కె హోగి అల్లల్లి విష్ణువిన్న హుడికి విష్ణువు శిక్కదెయిద్దదరింద దేవతెగళెల్లరన్ను కళగెమాడి నానావు పత్రగళన్ను పడిసిదను - ఆమేలె మగనాద ప్రహ్లాదను ఎష్టు హేళిదకాలక్కూ కివికొట్టిల్లదె విష్ణువిగె శత్రువాగిద్ద కారణ అవన్న కొల్లువుదక్కె ప్రయత్నవన్ను మాడలాగి విష్ణువు తన్న భక్తగెసహాయవాగి జాపడిసంబదొళగింద ఉగ్రనారసింహనాగి ఉదయిసి హిరణ్యకశ్యపువిన కూడె కెలవు హొత్తు యుద్ధవమాడి అవన్న తొడెగళల్లి యిరిసికొండు ఉగురుగళింద అవన హొట్టెయన్ను హరిదు రక్తవన్ను కుడిదు కరుళన్ను కంఠమాలెయాగి కొరళిగె హాకికొండు ఆ మహా హుచ్చు కోపవన్ను ఆరిసలిక్కె మహాప్రయాసవాయితు -

ಅಂಥಾ ಅತಿಕ್ರೂರವಾದ ಲಕ್ಷಣಗಳು ಹೆಚ್ಚಿ ಇಷ್ಟವಾದ ಕ್ರೂರವು ನಗಳಿಗೆ ಸಲ್ಲುವದಲ್ಲದೆ ಮನು
ಷ್ಯಗೆ ಸಲ್ಲದಲ್ಲ- ಮತ್ತು ದೇವರಿಗೆ ಪೂಜೆಗೆ ಸಲ್ಲುವದು-

೫ನೆ ವಾಮನಾವತಾರವು

ಐದನೆ ಅವತಾರವು ವಿಷ್ಣುವು ಪುಟ್ಟ ಬ್ರಹ್ಮಚಾರಿಯಾಗಿ ವಾಮನನೆಂಬ ಹೆಸರಿನಲ್ಲಿ ಹುಟ್ಟಿದವನಾದ
ನು ಆವೇಳೆಯಲ್ಲಿ ಬಲಿಯೆಂಬ ರಾಕ್ಷಸನು ಜಗತ್ತ್ರಯವನ್ನು ಆಕ್ರಮಿಸಿ ದೇವತೆಗಳೆಲ್ಲರನ್ನು ತನ
ಗೆ ಪರಿಚಾರಕರಾಗಿ ಮಾಡಿಕೊಂಡುಯಿರುವಲ್ಲಿ ವಾಮನನು ಬಲಿ ಚಕ್ರವರ್ತಿಯ ಬಳಿಗೆ ಬಂದು
ಕಪಟಸ್ತೋತ್ರಗಳಿಂದ ಅವನ್ನ ಮೋಸಮಾಡಿ ತನಗೆ ಪಾದತ್ರಯ ಭೂಮಿಯನ್ನು ಯಿಸಿಕೊಂಡವ
ನಾದನು- ಆಗಲು ಒಂದು ಪಾದವು ಭೂಮಿ ಆಯಿತು ಒಂದು ಪಾದವು ಆಕಾಶವಾಯಿತು ಇನ್ನೊಂ
ದು ಪಾದವನಿಡುವದಕ್ಕೆ ಸ್ಥಳವಿಲ್ಲದೆಯಿರುವದನ್ನು ಕಂಡು ಬಲಿಯ ತಲೆಯ ಮೇಲೆಯಿಟ್ಟು ಬಲಿಯ
ನ್ನು ಪಾತಾಳಲೋಕಕ್ಕೆ ಹೋಗತುಳಿದನು- ಯಿಂಥಾ ಕನಸನ ವಿಚಾರವು ನಿಜವೆಂದು ಬುದ್ಧಿವಂತ
ರುಗ್ರಹಿಸಬೇಕು-

೬ನೆ ಪರಶುರಾಮಾವತಾರ-

ವಿಷ್ಣುವು ಜಮದಗ್ನಿ ರೇಣುಕೆಗೆ ಮಗನಾಗಲಿಕ್ಕೆ ಕಾರ್ತವೀರ್ಯಾರ್ಜುನನು ಜಮದಗ್ನಿ ಮುನಿಯ ಹೋಮ
ಧೇನುವನ್ನ ಬಲವಂತವಾಗಿ ಹಿಡಿದದರಿಯಿಂದ ಪರಶುರಾಮನು ಕಾರ್ತವೀರ್ಯಾರ್ಜುನನ ಮೇಲೆಯು
ದ್ಧಕ್ಕೆ ಹೋಗಿ ಅವನ್ನ ಕೊಂದು ತನ್ನ ತಂದೆಗೆ ಆಕಳನ್ನು ತಂದು ಕೊಟ್ಟನು ಆ ಅರಸನ ಕುಮಾರರು ಹಗೆ
ಯನ್ನ ತೀರಿಸಲಿಕ್ಕೆ ಬಂದು ಜಮದಗ್ನಿ ತಲೆಯನ್ನು ಹೊಡದರು ಪರಶುರಾಮನು ತಂದೆಯ ಸಾವಿಗೋಸ್ಕರ
ಇಪ್ಪತ್ತೊಂದು ಸಾರಿ ಎದುರಿಸಿದ ಅರಸುಗಳನ್ನ ಕೊಂದು ಹಾಕಿದನು- ಮತ್ತು ತಂದೆಯ ವಚನಪ್ರಕಾರ
ತನ್ನ ತಾಯಿಯಾದ ರೇಣುಕೆಯನ್ನೂ ಅಣ್ಣಗಳನ್ನೂ ಕೊಂದವನಾದನು ಯಿದೇ ಪರಶುರಾಮಾವತಾರ—

೭ನೆ ಶ್ರೀರಾಮಾವತಾರ-

ಏಳನೆ ಅವತಾರವಾಗಿ ವಿಷ್ಣುವು ರಾಮಚಂದ್ರನೆಂಬ ಹೆಸರಿನಿಂದ ದಶರಥ ಕೌಸಲ್ಯೆಗೆ ಜನಿಸಿದನು ಈ ಅವತಾ

ದಲ್ಲಿಯೂ ನಿರ್ಣಯವು ನಡೆಯದಾಗಲಿ ನಮ್ಮನ್ನು ಸತ್ಯವನ್ನು ದೂಷಿಸುವರೆಂಬುವದಕ್ಕೆ ಸಂದೇಹವಿಲ್ಲವು —
ಯೆಂದು ಅನ್ನುತ್ತಾರೆ — ಯೀ ಪ್ರತ್ಯುತ್ತರವೇ ಯೆಂದು ಬುದ್ಧಿವಂತಿಕೆ ಲಕ್ಷಣವೋ ಅಲ್ಲವೋ ಯೆಂದು ತಿಳಿಯ
ತಕ್ಕಹಾಗೆ ಬಂದೆರಡು ದೃಷ್ಟಾಂತಗಳು ಮಾತ್ರ ತೋರಿಸುವೆವು — ಅದು ಹ್ಯಾಗಂದರೆ — ಹೆತ್ತ ತಾಯಿಯಾದ ಪರಶಕ್ತಿ
ಯನ್ನು ಸ್ತ್ರೀಯಾಗಿ ಯಿಟ್ಟುಕೊಂಡದ್ದು ತಾನು ಪಡೆದ ಮಗಳ ಸಂಗಾತದು ಪ್ರಿಯರೂಪವ ಧರಿಸಿ ಸಂ
ಗವಮಾಡಿದ್ದು — ಮರವರ ಸ್ತ್ರೀಯರನ್ನು ಮೋಹಿಸಿದ್ದು ತನಗೆ ಸ್ತ್ರೀಯಾದ ಪರಶಕ್ತಿಗೆ ದ್ರೋಹವ ಮಾಡಿ ಪರಸ್ತ್ರೀ
ಯರಸಂಗಡ ತಿರುಗಿದ್ದು — ಕಾಮಾತುರವಾಗಿ ಅವರಸಂಗಡ ದರ್ಶನಪಟ್ಟದ್ದು — ಬೆಣ್ಣೆ ಕದ್ದುಕೊಂ
ಡದ್ದು — ಯಿದಕ್ಕಾಗಿ ಬೇಳ್ತಿಗಳಿಂದದ್ದು — ಮೋಹಿನಿವೇಷವ ಧರಿಸಿ ಋಷಿಗಳ ತಪಸ್ಸು ಕೆಡಿಸಿದ್ದು ಯಿವು ಮೊ
ದಲಾದವು ನಾಚಿಕೆಗೆ ಪಡತಕ್ಕ ಚರಿತ್ರೆಗಳು — ನೀತಿಗೆ ವಿರೋಧವಾ ನೀತಿಯಿಲ್ಲದ ದೇವರಿಗೆ ಆದ ಚರಿತ್ರೆಗಳು
ಯೆಂದು ಬುದ್ಧಿವಂತನಾದವನು ಫಲವನ್ನು ಸಾಧಿಸಿ ಪರಿಶೋಧವ ಮಾಡಲುಳ್ಳವನು — ಕಡೆಗೆ ಮುಂಚೆ ಹೇಳಿದ
ಚರಿತ್ರೆಗಳು ಪಾಪವೋ ಪುಣ್ಯವೋ ಯೆಂದು ವಿಚಾರಿಸಬೇಕಾಗಿರುವದು — ಯಿಲ್ಲದೆ ಬೆಕ್ಕಿನ ಶೂನ್ಯ ಶಾಸ್ತ್ರನ್ನು ಪಂ
ಚಮಹಾಪಾತಕರೆಂದು ಯೆಲ್ಲರು ನ್ಯಾಯದಿಂದ ಹೇಳುತ್ತಾಯಿದ್ದಾರೆ — ಅಂಥಾ ಶೂನ್ಯಗಳು ಸಲಿಸುವದಕ್ಕೆ ಮಹಾ
ಜಿಂಯಂತ್ರಗಳು ದ್ರೋಹಿಸಿದ ಅಂಥಾ ಮಹಾಪಾತಕಿಗಳಿಗೆ ಸರಿಹಾಯವಮಾಡಿ ಅವುಗಳಿಗೆ ಮುಖ್ಯವಾಗಿರುವಂಥಾ
ದ್ದು ಪಾಪವೆಂದು ಪರಿಶೋಧವ ಮಾಡುವೆನಲ್ಲದೆ ಯಿಂದಿಗೆ ಸವಿಸ್ತಾರ ಹೇಳಲ್ಪಟ್ಟ ಅಜ್ಞಾನವೂ ದುರ್ಬಲವೂ ಮೊ
ದಲಾದ ಹೀನಗಳು ಅಷ್ಟು ವೇದಪುರಾಣ ಪ್ರಬಂಧಗಳೊಳು ತಿರುನಾಳ್ಗಳಿಗು ಹಾಗಳು ವವರಬಳಿಗೂ ಪ್ರತ್ಯಕ್ಷ
ವಾಗಿಯಿರುವ ವಿಷಯದಲ್ಲಿ ಅವುಗಳನ್ನು ನಮ್ಮ ಮನಸ್ಸಿನ ಪ್ರಕಾರ ಸಂಪಾದಿಸಲಿಯೆಂದು ಹೇಳುವದಕ್ಕೆ ಅವಕಾಶವಿಲ್ಲ

ವು— ಅವುಗಳಲ್ಲಿ ಒಂದೆರಡು ವಿಶೇಷಗಳನ್ನು ಯಾವನಾದರು ತನ್ನ ದೇವರ ಮೇಲಿನ ಭಕ್ತಿಯಿಂದಲೂ ಛಲದಿಂದಲೂ —
ಪ್ರತ್ಯುತ್ತರವು ಹೇಳದೆಯಿದ್ದರೆ ಅದರಲ್ಲಿ ಸತ್ಯವು ಹೊಳಗುವದಕ್ಕೆ ಅವನವನಿಗೆ ವುಂಟಾದ ಸಂದೇಹಗಳಿಗೆ ಸಂಕ್ಷೇಪ
ವಾಗಿ ಪ್ರತ್ಯುತ್ತರಗಳು ಹೇಳುತ್ತಾಯಿದ್ದೇವೆ— ಅದೇನಂದರೆ— ಯಿವೆಲ್ಲಾ ದೇವತೆಗಳೇ ಎಂದು ಹೇಳುತ್ತಿದ್ದಾ
ರೆ— ಮಹಾ ಶಾಸ್ತ್ರಜ್ಞನಾಗಿಯೂ ಮಹಾ ಬುದ್ಧಿವುಳ್ಳವನಾಗಿಯೂ— ಯಿರುವಂಥಾ ಯಾವನಾನೊಬ್ಬ ದೊಡ್ಡ ಮನುಷ್ಯನು
ಬೀದಿಗಳಲ್ಲಿ ಹಸುಕೂಸುಗಳ ಸಂಗಡಲಾಡಿದ್ದು ವಸ್ತ್ರವಿಲ್ಲದೆ ತಿರುಗಿದ್ದು ಯೇನು ಕಂಡ್ಯಾದರೆ ಅಂಥಾವನಿಗೆ ಹುಚ್ಚು ಹಿಡಿಯಿತೆಂದು
ಹೇಳುವಿ— ಮಾನಮರ್ಯಾದೆಗಳು ತಪ್ಪಿದವನೆಂದು ಹೇಳುವಿ— ಯೆಂಬುವದಕ್ಕೆ ಸಂದೇಹವಿಲ್ಲವು— ಮಹಾ ಬುದ್ಧಿಯುಳ್ಳ ಮಹಾ
ತ್ಮಗೆ ಯಿಂಥಾ ಆಟಗಳು ಆಗಬಾರದಲ್ಲ— ಪರಜ್ಞಾನಸ್ವರೂಪವಾಗಿರುವವನಿಗೆ ಮುಂಚೆ ಹೇಳಲ್ಪಟ್ಟ ಆಟಗಳು ಸಲುವದೆಂ
ಬುದು ಹ್ಯಾಗೆ— ಯಿದಲ್ಲದೆ ಸ್ವಾಭಾವಿಕವಾಗಿ ಮಹಾತ್ಮರಿಗೆ ಕೇಡಾಗಿರುವ ಚೇಷ್ಟೆಗಳು ಆ ದೇವತೆಗಳಲ್ಲಿ ವುಂಟಾಗಿಯಿರು
ವದಕ್ಕೆ ಅವರ ಮಹಿಮೆಗೆ ಸರಿಸಮಾನವಾಗಲೂ ಯಿಷ್ಟು ದೊಡ್ಡವನು ಒಬ್ಬನಾದರೆ ಅಷ್ಟು ಸರಸಗಳೂ ಯಿಲ್ಲಾ ಮಾತು
ಗಳು ಅವರಿಗೆ ಯೋಗ್ಯವಾಗಿರುವದೆಂದು ಹೇಳಬೇಕಾಗಿರುವದು— ಅದು ಏನು ನೋಡಿದರೆ ಹಿರಿಯವರು ಹೀಗೆ ಮಾಡುವ
ರೆಂದು ಹೇಳುವಾಗ್ಯೆ ಕಡೆಗುರುತುಗಳಿಲ್ಲದ ಮಹಾಮಹಿಮೆಯುಳ್ಳವರಲ್ಲಿ ಅವಿಷ್ಟು ಸಲುವವೆಂದು ಹ್ಯಾಗೆ ಹೇಳುತ್ತಾಯಿ
ದ್ದೀ— ಯಿಪರಿಯಂತರ ನಮ್ಮ ಕೈಯಿಂದ ಹೇಳಲ್ಪಟ್ಟ ನ್ಯಾಯಗಳಿಂದ ಮುಂಚೆ ಹೇಳಲ್ಪಟ್ಟಿರುವರು ವಸ್ತುವಲ್ಲವು
ಯೆಂದು ಕೆಲಬರು ಬುದ್ಧಿವಂತರಾಗಿ ಚನ್ನಾಗಿ ನಿಶ್ಚಯಿಸಿಯಿನ್ನು ಅವರನ್ನ ನಡೆ ಕೊಂಡು ಬರುವ ಪ್ರತ್ಯುತ್ತರ ನೆನಸರಿಕಷ್ಟು
ಯಿವರ ಪ್ಟುವಸ್ತುವಾಗದಿದ್ದರೂ ವಸ್ತುವಿಗೆ ಸಲುಗೆಯಾಗಿದ್ದ ಕಾರಣ ಅವರನ್ನ ಆರಾಧಿಸುತ್ತಾಯಿದ್ದೇವು— ಅರಸನ ಆ
ಜ್ಞೆಯಲ್ಲಿರುವ ಮಣಿಯಗಾರನಿಗೆ ಮಾಡತಕ್ಕ ಬಹುಮಾನಗಳು ಅರಸನಿಗೆ ಮಾಡಲ್ಪಟ್ಟ [illegible]ಗಳಿಗೆ ಸರಿಬಾರದೆಂಯಂದಿನ್ನು
ತ್ತರೆಯೂ ಪ್ರತ್ಯುತ್ತರವು ಸರಿಯಾಗಿ ಬುದ್ಧಿಗೆ ಯಿರುವದೋ ಯಿಲ್ಲವೋ ಯೆಂದು ಕಾಣುವದಕ್ಕೆ ತಿಳಿಯಬೇಕಿನಲಾಗಿಯೂ
ವನಾನೊಬ್ಬನು ಅರಸನಿಗೆ ಸಲುಗೆಯಾಗಿರುವದಕ್ಕೆ ಅರಸನ ಗುಣಗಳನ್ನು ತಿಳಿದು ಅರಸನಿಗೆ ಹೊಂದುವ ಕಾರ್ಯವನ್ನು ವಿಶೇ
ಷವಾಗಿ ಅವುಗಳೊಳು ಬುದ್ಧಿಗೂ ನ್ಯಾಯಕ್ಕೂ ವಿರೋಧವುಂಟಾದರೆ ಕಡೆಗೆ ಯಿಂಥಾ ವೇದಪುರಾಣವು ಅವರು
ಹೊಸರಿಪ್ಪರೂ ಅದನ್ನ ನಂಬುವದು ಮೋಸವಾಗಿರುವದು— ಅದೇನಂದರೆ ವಿಷದ ಸಂಗಡ ಕಲಸಿರುವರು ಚಕ್ಕರವಾ
ದನ್ನಿರವು ಶರೀರವನ್ನು ಕೊಂದು ಹಾಕುವ ಹಾಗೆ ಘನವಾದ ವಿಷವಾಗಿ ಹೋಗುವದಲ್ಲ ಅದರ ಹಾಗೆ ಅಸತ್ಯದ ಸ
ಂಗಡ ಕಲಸಿರುವ ಮಧುರವಾದ ವಚನಗಳು ಆತ್ಮವನ್ನು ಕೊಲ್ಲುವದೆಂಬುವದಕ್ಕೆ ತಪ್ಪದು ಶಾಸ್ತ್ರಗಳು ಮೊದ

ಲಾದ ಗುರು ಪೀಠವುಂಟಾದವರು ವಳಗುಂಟುಂಟೆಂದರೆ ಆ ದೇವತೆಗಳನ್ನು ಆಚರಿಸುವವರು ತಾವು ತಮ್ಮ
ಮನಸ್ಸಿನೊಳು ನಿಬದ್ಧವಾದ ದೇವತೆಗಳೆಂದು ವಿಚಾರಿಸಿ ಆರಾಧಿಸುತ್ತಾರೋ ಅಲ್ಲವೆಂದು ತನಗೆ ತಾನೆ ವುಮ್ಮಳಿ
ಗೆ ಮೊದಲಾದ ಪ್ರಯೋಜನಗಳಿಗಾಗಿ ಆ ದೇವತೆಗಳನ್ನು ಸಂಪಾದಿಸುತ್ತಾರೋ ಅವರನ್ನು ತಾನೆ ಕೇಳಬೇಕು-
ಅವರಿಗೆ ವುಂಟಾಗಿರುವ ಅಭಿಪ್ರಾಯವು ಹೇಳದೆಯಿದ್ದರೆ ಅವನವನು ನ್ಯಾಯ ಕಲ್ಪ ಬುದ್ಧಿಗೂ ವುಂಟಾಗಿರುವ
ದನ್ನು ಅಂಗೀಕರಿಸಲುಳ್ಳವನು- ಅರಸುಗಳು ಪ್ರಭುಗಳು ಮೊದಲಾದ ಅಧಿಪತಿಗಳೂ ವಿಷಯಕ್ಕಾಗಿ
ನಗರಕ್ಕೆ ಬೇರೆ ಬಂದು ಹೇಳದೆಯಿದ್ದುಂಟೋ ಕ್ರಿಯೆವಾಗಿ ಮಾತ್ರ ಬಂದು ಸತ್ಯವಿಶೇಷವನ್ನು ಹೇಳಿವು-
ಅದು ಯಂಥಾದೆಂದರೆ ದೇವತ್ವವೂ ಪರಲೋಕ ಮೇಲುಗಳೂ ಕರ್ತೃತ್ವವಿಲ್ಲದವರಂನಕುರಿತು ಅವರು
ವುದರ ಪ್ರಯೋಜನಕ್ಕಾಗಿಯೂ ಹೇಳುವಂಥಾ ವಸ್ತುಗಳ ನಿಮಿತ್ತವಾಗಿಯೂ ವ್ಯರ್ಥವಾಗಿ ವೆಚ್ಚವಮಾಡು
ವದಕ್ಕಿಂತ ತನ್ನ ಕಾಣಿಕೆ ಸಮುದಾಯ ಮೊದಲಾದ ಜಾಂಗಗಳಿಂದ ಪ್ರಾಯವ ಮಾಡುವದು ಒಳ್ಳೆಯದೆ
ಂದು ಸಂದೇಹವ ಬೀಳುವವನು ಯಿಲ್ಲಿಯದಕ್ಕೆ ಆಚೆ ನಾಲ್ಕನೆ ಸಂದೇಹವೇನಂದರೆ- ಮುಂಚೆ ಪೂ
ಗೆ ಹೇಳಲ್ಪಟ್ಟ ದೇವತೆಗಳು ಅವನವನಿಗೆ ಕಾವ್ಯಾರ್ಥವ ಕೊಡುತ್ತಾರೆಂದು ಅನುಭವಸಿದ್ಧಾಂತದಿಂ
ದ ಕಂಡುಕೊಂಡು ಬರುತ್ತೇವೆ- ಅವರಲ್ಲಿ ಕರ್ತೃತ್ವವು ಯಿಲ್ಲದಿದ್ದರೆ ಅದೆಲ್ಲವು ಬರುವದು ಹ್ಯಾಗೆನುತ್ತಾರೆ-
ಆದರೆ ಯಿಂಥಾವರುಗಳು ಕಾರ್ಯಾರ್ಥಗಳು ಕೊಡುವಂಥಾವರು ಮುಂಚೆ ಹೇಳಲ್ಪಟ್ಟ ನ್ಯಾಯ
ಗಳಿಂದ ದೇವತೆಗಳೆಲ್ಲಾಯೆಂದು ಹೇಳಿದಾಗಲಿ ಅವರು ಯಾರು ಯೆಂದು ಕೇಳಿದರಾಯಿತೆ- ಯೀ
ಸಂದೇಹಕ್ಕೆ ಸೂಕ್ಷ್ಮವಾಗಿ ನಿವಾರಣೆಯಾಗುವದು ಯಿದನ್ನು ಸ್ಪಷ್ಟಮಾಡುವದಕ್ಕೆ ಯೀಗಲೂ ತರುವಾಯವೂ ಆ
ಗುವದಿಲ್ಲವೆಂದು ಹೇಳುವದಕ್ಕೆ ಯೊಂದು ದೃಷ್ಟಾಂತಮಾತ್ರಕ್ಕೆ ಹೇಳಿದೆವು ಅದೇನಂದರೆ- ಮೀನುಗ
ಳನ್ನು ಹಿಡಿಯುವವನು ಬಲೆ ಹಾಕುವಾಗಲೂ ನಿಮಿತ್ತವಾಗಿ ಮೀನಾದದ್ದು ತನ್ನ ಕ್ರಿಯಲ್ಲಾ ಸಿಗು ಬಿದ್ದು ಸಾ
ಯಬೇಕೆಂದು ಅವನಿಗೆ ತಾತ್ಪರ್ಯವಾಗಿರುವದಲ್ಲದೆ ಪಕ್ಷಿಯ ನಿಮಿತ್ತವಾಗಿ ಮೀನು ಬದುಕಬೇಕೆಂದು
ಅದರ ಮೇಲೆ ಕಂಬಿತ್ತಾದರೂ ಕೃಪೆಯಿಲ್ಲವು- ಅದೇ ಪ್ರಕಾರವೇ ನೀನು ಹೇಳಿದ ಕಾರ್ಯಾರ್ಥಗಳು ವರಗ
ಳು- ನೀನು ಅವುಗಳ ವಶವಾಗಿ ಪಕ್ಕನರಕದ ಸಾವನ್ನು ಹೊಂದಲಾರಿ ನೆಂದು ಗಾಳವು ಮೀನಿನ ಪಕ್ಷಿಹಾ
ಗೆ ಯಿರುವದೋ ಯಿಲ್ಲವೆ ನಿನ್ನ ಮೇಲೆ ನಿಬುದ್ಧಿಯಾಗಿ [illegible] ಕೃಪೆಯಿಂದಿರುವೆಯೋ ಯೆಂದು ಚನ್ನಾಗಿ ವಿ
ಚಾರಿಸಲುಳ್ಳವನು- ಐದನೆ ಸಂದೇಹವೇನಕ್ಕೆಯೂ ವೇಳೆಗೆ ಹೇಳಲ್ಪಟ್ಟದ್ದೆಲ್ಲವು ನ್ಯಾಯ ಕಲ್ಪ ಬುದ್ಧಿಗೂ

ಪರಿಂತೂಗಿರುವದೆಂಬುವದಕ್ಕೆ ಸಂದೇಹವಿಲ್ಲ - ಆದರೆ ಪರಾಪರವಸ್ತುವಿನ ನಿರ್ಣಯ ಪ್ರಕಾರ ನಡೆಯುವದು ಕಠಿ
ಣವೆನುತಿದ್ದಾರು - ಯಾಪ್ರತ್ಯುತ್ತರ ಹೇಳುವವರು ಮೋಕ್ಷದ ಬೆಷ್ಟ ಪತ್ರಿಕೆ ತಕ್ಕಂಥ ಆಶೆಯಿಲ್ಲದೆ ಕೆಟ್ಟು ಹೋ
ಗುತಿದ್ದಾರೆಂಬುವದಕ್ಕೆ ಸಂದೇಹವಿಲ್ಲವು - ಅದೇನಂದರೆ - ರೋಗಿಷ್ಠನು ಕೆಲವು ದಿವಸ ಬದುಕುವದಕ್ಕೆ ಶಾಸ್ತ್ರಪ್ರಕಾರ ಪಾಲ್ಗೆ
ಯಾಸೆಪು ವೃಲ್ಲಂಥಾ ಪಾಕಗಳು ಮೊದಲಾದಕರಿ ಜಾತಾ ಪಥ್ಯಗಳಿಗೆ ಒಂದಾಗದಲೆಯಿರುವಾಗ ನೀನುಂತೂವಾಗಲೂ
ಮೋಕ್ಷಮಾರ್ಗವ ಅನುಭವಿಸಿಕೊಂಡು ಬದುಕತಕ್ಕಹಾಗೆ ನಾಳ್ಕುದಿವಯೂ ಲೋಕದಲ್ಲಿ ಬಿದ್ದು ಕತಂದೆ ಮೊದಲಾದ
ಹಿರಿಯರು ಕಂಬಾಗೆ ಹೋಗುವ ವ್ಯಾಳಿಯಲ್ಲಿ ದಾರಿ ತಪ್ಪಿ ಕಲ್ಲರ ಕೈಯಲ್ಲಿ ಶಿಕ್ಷಿತಲೆಯ ಪಿಪ್ರಾಸ ಕೊಲ್ಲಪಟ್ಟರೆಂದು ನಿ
ನಗೆ ತಿಳಿದದೆ ಆದರೆ ನೀನು ಕಂಬಾಗೆ ಹೋಗಬೇಕಾದರೆ ಅವಶ್ಯವಾಗಿ ಅವರು ಹೋದ ಮಾರ್ಗವನ್ನು ಅನುಸರಿಸಿ
ದೆ ತಿಳಿದವರು ಹೇಳುವಂಥಾ ಬೇರೆ ದಾರಿಯಲ್ಲಿ ನಡೆದು ಹೋಗುವೆನುಯೆಂಬುವದಕ್ಕೆ ಸಂದೇಹವಿಲವು -
ಮತ್ತು ನಿಮ್ಮ ವಂಶದವರೆಲ್ಲಾ ಮಹಾದರಿದ್ರವನ್ನು ಅನುಭವಿಸ ಸತ್ತುಹೋದರು ನಿನಗೆ ಚನ್ನಾಗಿ ಬದುಕುವ
ದಕ್ಕೆ ಐಶ್ವರ್ಯವು ಶಿಕ್ಷಿತು - ಅದು ಬಿಟ್ಟು ಬಿಟ್ಟು ಬಲವಂತದಿಂದ ದರಿದ್ರನಾಗಿ ಹೋಗುವಿಯಾ - ನಿನ್ನ ಬತೃಗಳು
ಮೋಕ್ಷದಾರಿಯೊಳು ತಪ್ಪಿದ್ದೇವತ್ತವಿಲ್ಲದೆ ದೇವರಿಗಾದ ಆರಾಧನೆಯನ್ನು ತಿಗವ ಕಲ್ಲರ ಕೈಯಲ್ಲಿ ಸಾಯದ ಸಾ
ವು ಸತ್ತು ಗೋವಿನ್ನ ಹೊಂದಿದರೆಂದು ನಿತ್ಯವೂ ಬದುಕುವ ಹಾಗೆ ಆದಂಥಾ ದ್ರವ್ಯವೂ ಆಗುವಂಥಾ ವಸ್ತುವಿನ ಜ್ಞಾ
ನವಿಲ್ಲದೆ ದರಿದ್ರಸ್ಥತಿಗೆ ಸಮಾನವಾಗುವ ಅಜ್ಞಾನದೊಳು ಮುಣುಗಿ ಕೆಟ್ಟು ಹೋಗುತ್ತಿದ್ದಾರೆ - ಯಂದು ತಿಳಿ
ದಮೇಲೆ ಅವರು ನಡೆದದಾರಿಯೊಳು ನೀನು ನಡೆಯೂದರೆ ನಿನಗಿಂತ ಮತಿಕೆಟ್ಟವನುಯಿಲ್ಲವೆಂದು ಹೇಳ
ಬಹುದು - ಯಿದಲ್ಲದೆ ನಿನ್ನ ಜಾತಿಗೆ ಸಂಬಂಧವಾದ ಆಚಾರಗಳನ್ನು ಮೀರದೆ ಪಾಪಗಳನ್ನು ದಬ್ಬಿ ಹಾಕಿ ಪು
ಣ್ಯದ ಮಾರ್ಗದಲ್ಲಿ ನಡೆಯುವದರಿಂದ ಮತಿಗೆಟ್ಟ ಮ್ಲೇಛನು ಮಾತ್ರವೆ ನಿನ್ನನ್ನು ದಹಿಸುವನಲ್ಲವೆ - ಬುದ್ಧಿವಂ
ತನಾದವನು ನಿಂದೆ ಮಾಡಲಾರನು ಅರಿಯದೆ ನಿಂದಿಸಿದ ಕಾಲಕ್ಕೂ ಮೋಕ್ಷಫಲವನ್ನು ಹೊಂದುವದಕ್ಕೆ ಅದನ್ನು
ಪಡ್ಡೆಮಾಡದೆಯಿರುವೆಯಾಗಲಿ ಯಾವರಿಗೆ ನಮ್ಮಿಂದ ಹೇಳತಕ್ಕ ಸತ್ಯವ ವಿನಾಯಿಸಿ ಮೋಕ್ಷದ ಬೆಷ್ಟವನ್ನು
ಪತ್ರಿಕೆ ತಕ್ಕಂಥಾದ್ದ ಕೊಡುವವರನ್ನ ಬಿಡ್ಡೆಲುಲ್ಲವನಾಗಿ ನೀನು ಯಾಬುದ್ಧಿಗಳನ್ನು ಸದ್ದೆಮಾಡದೆ ಹೋದ
ರೆ ನಿನಗೆ ನರಕವೆಗತಿ - ನಮ್ಮ ಮೇಲೆ ಸಾಲವಿಲ್ಲವು - ಸತ್ಯವಾದ ವಸ್ತುವನ್ನೆಂದು ಕಂಡು ಹಿಡಿಯುವದಕ್ಕೆ
ಕೆಲವು ಲಕ್ಷಣಗಳನ್ನು ಬಯಲು ಮಾಡಿದ ಹಾಗೆ ವೇದವಿಷಯವಾಗಿ - ಅವನವನು ಕೋಸಹೋ
ಗ್ದ ಹಾಗೆ ಸತ್ಯವಾದ ವೇದವ್ಯಾಯಾವದು ಯಂದು ನಿಶ್ಚಯ ಮಾಡುವದಕ್ಕೆ ಪ್ರತ್ಯಕ್ಷಲಕ್ಷಣಗಳನ್ನು
ಸ್ವರೂಪ ಸಂಕ್ಷೇಪವಾಗಿ ಬರೆದ ಹಾಗೆ ವಿಚಾರ [illegible] ತೋಚುವದು - ಆದರೆ ಪರಿಪರಿಯ ನ್ಯಾಯಗಳ

ంథయూ వాగ్యా అవుగళన్ను బిట్టు మనుష్యరెల్ల బిట్టవన్ను హొత్త తక్కహాగె పరాపరవస్తువు ఆజ్ఞాబ
ద్ధవేదదల్లి బరెదుయిరువ కెలవు కల్పనెగళు నీతి న్యాయద సంగడ నడెయువదక్కె అపేక్షెయుళ్ళ
వనిగెయిల్లి కూడిసి బరదుయిడుత్తివె — ఆదియందరె సర్వేశ్వరను — ఆజ్ఞాబద్ధవేదకల్పనెగళు
హత్తు — అదరొళు మొదలాదద్దు సర్వేశ్వరగె మాత్ర ఆరాధనె మాడువవనాగు — యెరడనేదు స
ర్వేశ్వరన దివ్యనామవ వ్యర్థవాగి నుడియదెయిరువవనాగు — మూరనెదు సర్వేశ్వరన పుణ్య
హ దివసవన్ను ఆశ్రయిసి నడసువవనాగు — నాల్కనేదు తాయి తందెగళన్ను బహుమానవాగి నడసు
వవనాగు — ఐదనేదు నరహత్యమాడదెయిరు — ఆరనేదు మోహాగమాగమ్యవన్ను మాడదెయిరు
వవనాగు — యెళనేదు కదియదెయిరువంథావనాగు — యెంటనేదు కసుళ్ళు సాక్షి
గళన్ను నుడియదెయిరు — వవనాగు — వంబత్తనేదు పరస్త్రీయళన్న అపేక్షిసదెయిరువవనా
గు — హత్తనేదు పరర ఉపజీవిగె అపేక్షెయిల్లదెయిరువవనాగు — యీహత్తు కల్పనెగళు యెర
డు కల్పనెగళొళగె విల్యతవాగుత్తవె — అదరల్లి మొదలాద్దు సకలవస్తుగళమేలెయిట్ట అపే
క్షెయిన్నసర్వేశ్వరన మేలె అధికభక్తిపూర్వం పొందవనాగు — యెరడనేదు తన్నతాను స్నేహిసదరీత్యా
కడమె జనరెల్లరన్ను స్నేహిసియిరువవనాగు — ॥ సంపూర్ణ ॥ = ॥

2c—

36,

ಬಸವನಪುರಾಣ

ಪೂರ್ವದಲ್ಲಿ ಬಸವೇಶ್ವರದೇವರು ಭೂಲೋಕದಲ್ಲಿ ಅವತರಿಸಿದ ಚರಿತ್ರೆಯನ್ನು ಆದಿಮೊದಲ್ಗೊಂಡು ಅಂತ್ಯದಪರ್ಯಂ
ತ ಸವಿಸ್ತಾರವನ್ನು ಬರೆದಿದ್ದೇನೆ- ಪುರಾಣದಲ್ಲಿ ಅನೇಕಪ್ರಕಾರ ಕವಿಗಳು ಗ್ರಂಥವ ಮಾಡಿ ಹೇಳಿಯಿದ್ದಾರೆ ಅದರೊಳಗೆ ಕೆಲ
ವು ಮಾತುಗಳ ಬರೆದು ತಿಳಿಸಿದ್ದೇನೆ- ಹಾಂಗು ಚನ್ನಬಸವೇಶ್ವರದೇವರ ವೃತ್ತಾಂತವನ್ನು ಹಾಂಗು ಶರಣಗಣಂಗಳ ಮಹಿ
ಮೆಯನ್ನೂ ನನಗೆ ದೇವರು ತಿಳಿಸಿದಷ್ಟು ಬರೆದುಯಿದ್ದೇನೆ—

ಎಂಟುನೂರುವರುಷದ ಮುಂಚಿಗೆ ಜೈನರ ಮತ್ತದಲ್ಲಿ ಒಬ್ಬ ರಾಜನು- ಆತನ ಹೆಸರು ಏನಂದರೆ- ಬಿಜ್ಜಳಾಂಕರಾಯನು ಆತನು ರಾ
ಜ್ಯವನಾಳುತ್ತಾಯಿದ್ದನು- ಆತನು ತಾನೆ ಜಗತ್ತಿಗೆ ದೇವರಾಗಿಯಿದ್ದೇನೆ ನನ್ನ ಹೊರ್ತು ಮತ್ತೊಬ್ಬ ದೇವರು ಯಿಲ್ಲವು- ಆತನು ಜೈ
ನಧರ್ಮವನ್ನೂ ಆತನು ಕೆಲವು ಮತದವರನ್ನು ನಾಶಮಾಡುತಿದ್ದನು ಅನೇಕಪ್ರಕಾರವಾಗಿ ಪಾಪವ ಮಾಡುತಿದ್ದನು- ಈಪ್ರಕಾರದಲ್ಲಿ
ಅರಸು ರಾಜ್ಯವನಾಳುತ್ತಿರಲಾಗಿ ಸ್ವರ್ಗಲೋಕದಲ್ಲಿ ದೇವರ ಸನ್ನಿಧಿಯಲ್ಲಿ ಪ್ರಮಥಗಣಂಗಳು ಮುಖ್ಯವಾದ ನಂದಿಕೇಶ್ವರರು ಕೂಡಿ
ದ ಸಮಯದಲ್ಲಿ ನಾರದಮುನೀಶ್ವರನು ಭೂಲೋಕದಲ್ಲಿ ಅರಸುಗಳು ಯಿದ್ದಾರೆ ಅವರು ಪರಮೇಶ್ವರನ ಧ್ಯಾನವನ್ನು ಸದಾಕಾಲದಲ್ಲಿ ಸ್ತು
ತಿಸುತ್ತಾರೆ- ಹಿಂದುದೇಶವು ಹಾಂಗು ತೆಲುಂಗದೇಶವು ಅದರಲ್ಲಿ ಒಬ್ಬ ಅರಸು ಆತನು ಜೈನನ ಭಕ್ತನು ಆತನು ಮಹಾಗರ್ವಿಷ್ಠ
ನು ಆತನ ರಾಜ್ಯದಲ್ಲಿ ಬಹಳ ಪಾಪವು ಹೆಚ್ಚಾಗಿ ಯಿದ್ದೀತು ಮತ್ತು ಕೆಲವು ಮತಸ್ತರನ್ನು ಹಾಂಗು ಸಾಧುಸಜ್ಜನರನ್ನು ನಾಶನಮಾಡುತ್ತಾ
ನೆ ಆತನು ತಾನೇ ದೇವರೆಂದು ಹೇಳುತ್ತಾನೆ ಇಂಥಾ ಪಾಪಿ ಜಗತ್ತಿನಲ್ಲಿ ಯಿದ್ದಾನೆಂದು ಬಹಳಪ್ರಕಾರವಾಗಿ ನಾರದಮುನೀಶ್ವರನು
ಹೇಳಲಾಗಿ ದೇವರು ಮಹಾಕೋಪದಿಂದಾ ಆತನ ಮತವನ್ನು ನಾಶಮಾಡುವೆನೆಂದು ಪ್ರಮಥಗಣಂಗಳಿಗೂ ಹಾಂಗು ನಂದೀ
ಶ್ವರದೇವರಿಗೂ ಹೇಳಿದ್ದೇನಂದರೆ- ನೀವು ಭೂಲೋಕದಲ್ಲಿ ಜನಿಸಬೇಕು ಮೇಲಾಗಿ ನಿಮ್ಮ ಸಂಗಾತ ಶರಣಗಣಂಗಳನ್ನು ಕಳುಹಿ
ಸುತ್ತೇವೆ- ಕಲ್ಯಾಣಪಟ್ಟಣದ ಬಿಜ್ಜಳರಾಯನ ಜಲಂಗದಲ್ಲಿ ಏಳುಮೊಳದ ಉದ್ದ ಏಳುಮೊಳ ಅಡ್ಡಗಲವಾದ ಕಲ್ಲು ಅದರಲ್ಲಿ ಅ
ಕ್ಷರಸಹಿತವಾಗಿ ಬರೆದುಯಿದ್ದೀತು- ಅದರ ಅರ್ಥವೇನಂದರೆ- ಎಲೋ ರಾಯಾ ನಿನ್ನ ಶಾಸ್ತ್ರವು ನೀನೇ ದೇವರೆಂಬುವದು ನಾ
ಶಮಾಡಲಿಕ್ಕಾಗಿ ಶರಣಗಣಂಗಳು ನರರಲ್ಲಿ ಹುಟ್ಟಿ ನಿನ್ನನ್ನು ಸಂಹಾರಮಾಡಲಿಕ್ಕೆ ಬರುತ್ತಾರೆ ನೀನು ಬಹಳ ಯಚ್ಚರಿಕೆಯಿಂದ ಇರ
ಬೇಕೆಂದು ಬಹಳ ಗ್ರಂಥಗಳಿಂದಾ ಬಹು ದೃಷ್ಟಾಂತಗಳು ಬರೆದು ಜಲಗದ ಮುಂದೆ ಚಲ್ಲುತ್ತೇನೆ- ಆ ಕಲ್ಲಿನ ಅಕ್ಷರಗಳನ್ನು ನೀನೇ
ಓದಬೇಕಲ್ಲದೆ ಇತರರು ಯಾರೂ ಓದಲಿಕ್ಕೆ ತಿಳಿಯದು- ಮತ್ತು ನಿನಗೆ- ವಾಕ್ಯಪುರುಷ ಕೋಪಪುರುಷ ಹಸ್ತಪುರುಷ ಮಹಿ
ಮೆಪುರುಷ ಉದಾರಪುರುಷ- ಈಪ್ರಕಾರ ಪಂಚಪುರುಷರನ್ನು ಕೊಡುತ್ತೇನೆ- ನಿರಂತರದಲ್ಲಿ ನಿನ್ನ ಸಂಗಾತ ಯಿದ್ದು ನೀನು ಮಾಡು
ವದನ್ನು ಗೆಲಿಸುತ್ತೇನೆ ಆ ವೇಳೆಯಲ್ಲಿ ಕಾಲಜ್ಞಾನವನ್ನು ಬರೆದು ಇಟ್ಟಿದ್ದಾರೆ ಅದೇಪ್ರಕಾರ ನಂದಿಕೇಶ್ವರನು ದೇವರ ಅಪ್ಪಣೆಯಿಂ
ದಾ ಕೇಳಿದನು- ನಾನು ಹೋಗಿ ಯಾರಲ್ಲಿ ಜನಿಸಬೇಕೆಂದನು ಅದಕ್ಕೆ ಕರ್ನಾಟಕದೇಶದಲ್ಲಿ ಬಾಗವಾಡಿಯೆಂಬ ಗ್ರಾಮದಲ್ಲಿ
ಮಾದವ ಅರಸು ಮಾದಲಾಂಬಿಕೆಯೆಂಬ ಹೆಂಡತಿಯು ಅವರು ಮಕ್ಕಳ ಸಂತಾನವಿಲ್ಲದ್ದರಿಂದಾ ಬಹಳ ಬಳಲುತ್ತಾರೆ ಅ
ವರಲ್ಲಿ ನೀವು ಜನಿಸಬೇಕು ಅವರು ಶಿವಬ್ರಾಹ್ಮರು ಯಿದ್ದಾರೆ ಬಹಳ ಭಕ್ತಿಯುಳ್ಳ ಯುಕ್ತವಂತರು ಇದ್ದಾರೆ ಮೊದಲು ಒಬ್ಬ ಹೆಂ
ಣುಮಗಳು ಹುಟ್ಟುತ್ತಾಳೆ ಆ ಹೆಣ್ಣುಮಗಳು ಯಾರು ಯಂದರೆ ನನ್ನಲ್ಲಿರುವ ಜ್ಞಾನಶಕ್ತಿಯು ನಿನ್ನ ಕಾರ್ಯಕ್ಕೋಸ್ಕರ ಕಳು
ಹಿಸುತ್ತೇನೆ ನೀವು ಭೂಲೋಕದಲ್ಲಿ ಅವತಾರಮಾಡಬೇಕೆಂದು ಆ ಪರಮೇಶ್ವರನು ಅಪ್ಪಣೆ ಕೊಟ್ಟು ಕಳುಹಿಸಿದನು- ನಂದಿಕೇಶ್ವ
ರರು ಭೂಲೋಕಕ್ಕೆ ಬರಲಿಕ್ಕೆ ಆರಂಭಮಾಡಲಾಗಿ ಯಿತ್ತ ಕರ್ನಾಟಕದೇಶದಲ್ಲಿ ಎಂಟುನೂರುವರುಷದ ಮುಂದೆ ಬಾಗವಾ
ಡಿಯೆಂಬ ಗ್ರಾಮದಲ್ಲಿ ಮಾದವರಸು ಮಾದಲಾಂಬಿಕೆ ಯಿವರು ಶಮನೆ ಮಕ್ಕಳಿಲ್ಲದ ಕಾರಣ ದೇವರಿಗೆ ಪೂಜಿಸಿ ಸ್ತೋತ್ರವ

-ಮೊದಲಾಗಿ ಆ ಸಮಯದಲ್ಲಿ ಅವರ ಸ್ವಪ್ನದಿ ದೇವರು ಬಂದು ಒಬ್ಬ ಹೆಣ್ಣುಮಕ್ಕಳು ಹುಟ್ಟುತ್ತಾಳೆ ಆಕೆಗೆ ನಾಗಲಾಂಬಿಕೆಯೆಂಬ
ಹೆಸರನಿಡುವದು ಮತ್ತೊಬ್ಬ ಗಂಡುಮಗನು ಹುಟ್ಟುತ್ತಾನೆ ಆತನ ನಾಮವೇನಂದರೆ ಬಸವೇಶ್ವರನೆಂಬ ಹೆಸರನ್ನು ಇಡುವದು
ಎಂದು ಹೇಳಿದನು- ಆತನೇ ಕಾರಣಕರ್ತನು ನಿಮ್ಮಲ್ಲಿ ಹುಟ್ಟುವನೆಂದು ಉತ್ತತ್ತಿ ಫಲವನ್ನು ಕೊಟ್ಟು ತಲೆಯ ಮೇಲೆ ಹಸ್ತವನ್ನಿ
ಟ್ಟು ಅದೃಶ್ಯವಾದನು- ಅವರಿಬ್ಬರು ಎಚ್ಚರಿಕೆಯಾಗಿ ದೇವದೂತನು ಹೇಳಿದ ಪ್ರಕಾರ ಆ ಸ್ತ್ರೀಯು ತನ್ನ ಗಂಡನಿಗೆ ಹೇಳಿದ್ದಕ್ಕೆ ಹಾಂ
ಗು ದೃಷ್ಟಾಂತವಾಗಿ ಎರಡು ಫಲವನ್ನು ಕೈಯಲ್ಲಿ ತೋರಿಸಿದಳು ಆತನು ಬಹಳ ಸಂತೋಷವಾಗಿ ಹೇಳಿದನು- ನಾವು ಇಷ್ಟು
ದಿವಸ ದೇವರಿಗೆ ಸ್ತೋತ್ರಿಸಿ ಬೇಡಿಕೊಂಡ ಕಾರಣ ನಮಗೆ ದೇವರು ಪ್ರಸಾದಿಸಿ ಕೊಟ್ಟನಲ್ಲ ಆ ಸ್ತ್ರೀಯು ಫಲವನ್ನು ಪರಮಾತ್ಮನೆ
ನೀನೇ ದಯಪಾಲಿಸಿದ್ದೀಯೆಂದು ಹರುಷದಿಂದಾ ಸೇವಿಸಿದಳು ಆ ಮೇಲೆ ಆ ಸ್ತ್ರೀಗೆ ದಿನದಿನಕ್ಕೆ ಗರ್ಭ ಚಿಹ್ನವು ತೋರಿತು- ನವಮಾಸ
ತುಂಬಿದ ಬಳಿಕ ಹೆಣ್ಣುಮಗಳನ್ನು ಹೆತ್ತಳು ಆ ಶಿಶುವಿಗೆ ನಾಗಲಾಂಬಿಕೆಯೆಂದು ನಾಮವನ್ನೇ ಇಟ್ಟರು- ಆ ಶಿಶುವು ದಿನದಿನ
ಕ್ಕೆ ಬೆಳೆವುತ್ತಿರುವದು ಮೂರನೆವರುಷದ ಮೇಲೆ ಗರ್ಭವತಿಯಾದಳು ಯಿಪತ್ತೇಳು ತಿಂಗಳು ತನಕ ಗರ್ಭವಂತಳಾಗಿ ಇರುವ ಸಮ
ದಲ್ಲಿ ದೇವರಿಗೆ ಬೇಡಿಕೊಂಡಳು- ನೀನು ದಯಮಾಡಿ ಹೇಳಿದ ಮಾತು ಮೊದಲಲ್ಲಿ ಸತ್ಯವಾಯಿತು ಎರಡನೆ ಗಂಡು ಮಗನು ಹು
ಟ್ಟುವನೆಂದು ಹೇಳಿದ್ದಿನ್ನ ಹೊಟ್ಟೆಯಲ್ಲಿ ಇರುವದಿದಕ್ಕೆ ಜನರು ಆಡಿಕೊಳ್ಳುತ್ತಾರೆ- ಕಷ್ಟರೋಗ ಸೇರಿ ಇದ್ದೀತೆಂದು ಅ
ಪಹಾಸ್ಯವ ಮಾಡುತ್ತಾರೆ ನೀನು ಹೇಳಿದ ವಚನವು ನೀನೇ ಪರಿಪೂರ್ಣಮಾಡು ಮನುಷ್ಯರ ತತ್ರವಲ್ಲವೆಂದು ಬಹುಪ್ರಲಾ
ಪದಿಂದಾ ಮೊಲಗಿಕೊಂಡಳು- ಆಕೆಯ ಸ್ವಪ್ನದಲ್ಲಿ ದೇವರು ಬಸುರಿನಲ್ಲಿ ಇದ್ದಂಥಾ ಕೂಸನ್ನು ತೆಗೆದು ಆ ಸ್ತ್ರೀಯ ಹಾಸಿಕೆಯ
ಲ್ಲಿ ಮಲಗಿಸಿ ಹೋದನು ಆ ಸ್ತ್ರೀಯು ಉದಯಕಾಲದಲ್ಲಿ ಎದ್ದು ಹೊರಗೆ ಬರಲಾಗಿ ತನ್ನ ಹೊಟ್ಟೆಯ ಭಾರವು ಇಲ್ಲದೆ ಇತ್ತು-
ಆ ಸಮಯದಲ್ಲಿ ತನ್ನ ಪುರುಷನಿಗೆ ತೋರಿದಳು ಬಹಳ ಆಶ್ಚರ್ಯದಿಂದಾ ಹಾಸಿಗೆ ನೋಡಲಾಗಿ ಕೂಸನ್ನು ಕಂಡರು ಆ ಕೂಸು ಐ
ದು ದಿವಸ ತನಕ ಮೊಲೆಹಾಲು ಕುಡಿಯಲಿಲ್ಲವು ಆ ದಿವಸದ ರಾತ್ರಿಯಲ್ಲಿ ದೇವರು ಆ ಕೂಸಿಗೆ ಉಪದೇಶವನು ಕೊಟ್ಟು ಈಶ್ವರ
ನನ್ನು ಕೈಯಲ್ಲಿ ಕಟ್ಟಿ ಹೋಗಲಾಗಿ ಆ ವೇಳೆಯಲ್ಲಿ ಆ ಕೂಸು ತಾಯಿಯ ಮೊಲೆಹಾಲನ್ನು ಸೇವಿಸಿತು ಆ ಬಾಲೆಯು ಈ ಆಶ್ಚ
ರ್ಯವನ್ನು ನೋಡಿ ತನ್ನ ಗಂಡನಿಗೆ ಬಹಳ ಹರುಷಿತರಾಗಿ ಸರ್ವಜನರನ್ನು ಕರಿಸಿ ಬಸವೇಶ್ವರನೆಂದು ಹೆಸರಿಟ್ಟರು —

- ಒಂದು ಸಂಧಿ ಮುಗಿಯಿತು -

ಬಸವೇಶ್ವರನು ಐದು ವರುಷವಾದ ಮೇಲೆ ಓದಕ್ಕೆ ಸಾಲೆಯಲ್ಲಿ ಹಾಕಿದರು ಆತನು ಒಂದು ವರುಷದಲ್ಲಿ ಸಕಲ ಬರಹಗಳನ್ನು
ಕಲಿತನು- ಒಂದು ದಿವಸದಲ್ಲಿ ಎಲ್ಲಾ ಸಾಲೆ ಹುಡುಗರನ್ನು ಕರಕೊಂಡು ಆ ಪೂರದ ಮುಂದೆ ದೊಡ್ಡದೊಂದು ನೀರು ತುಂಬಿದ
ಬಾವಿಯಲ್ಲಿ ಸರ್ವಹುಡುಗರು ಆಡುತ್ತಿರಲಾಗಿ ಒಬ್ಬರಿಗೊಬ್ಬರು ವ್ಯಾಜ್ಯಮಾಡಿ ಈ ಬಸವೇಶ್ವರನನ್ನು ನೀರೊಳಗೆ ಮುಳುಗಿ
ಸಿದರೂ ಆ ಮೇಲೆ ಆತನು ನೀರಿನೊಳಗಿಂದ ಹೊರಗೆ ಬಂದನು ಅವರಷ್ಟು ಹುಡುಗರು ನೋಡಲಾಗಿ ಆ ಹುಡುಗರೆಲ್ಲರೂ ನೀರಿನೊ
ಳಗೆ ಮುಳುಗಿದರು- ಆ ವೇಳೆಯಲ್ಲಿ ಆ ಪೂರಿನ ಸರ್ವಜನರು ಬಂದು ಆ ಹುಡುಗರ ತಂದೆ ತಾಯಿಗಳು ಸಹಿತವಾಗಿ ಸರ್ವ
ಜನರು ಶೋಕವ ಮಾಡುತ್ತಿರಲು ಈ ಬಸವೇಶ್ವರನು ಹೇಳಿದನು ನೀವು ಅಳುವದೇತಕ್ಕೆ ನಿಮ್ಮಿಂದಲಾಗುವದೇನಯ
ಎಂದು ಹೇಳಲಾಗಿ ಈತನ ತಾಯಿ ನಾಗಲಾಂಬಿಕೆ ಈತನನ್ನು ಬೇಡಿಕೊಂಡಳು- ಈ ನೀರಲ್ಲಿ ಬಿದ್ದಿರುವ ಹುಡುಗರ
ನ್ನು ಹೊರಗೆ ತಂದರೆ ಬಹಳ ಸಂತೋಷವಾಗುವದೆಂದು ಹೇಳಲಾಗಿ ಆ ಜನರು ಅಪಹಾಸ್ಯಮಾಡಿದರು ನಿಮ್ಮ ಮಗ
ನು ನಮ್ಮ ಹುಡುಗರನ್ನೆಲ್ಲ ಬಾವಿಯಲ್ಲಿ ಕೆಡವಿ ತಾನು ಒಬ್ಬನೆ ನಿಂತಿದ್ದಾನೆ ನೀವು ನಿಮ್ಮ ಮಗನಿಗೆ ಮೇಲಾಗಿ ಮೇಲಾ

೧

ನಿ ಹೇಳುತ್ತೀರಲ್ಲ — ನೀನು ನೀರ ಬಳಿಗಿನ ಹುಡುಗರನೆಲ್ಲಾ ಹೊರಗೆ ತೆಗೆಯಬೇಕೆಂದು ಯಿಂಥಾ ಹುಚ್ಚುಮಾತನ್ನು ಈತಗೆ ಹೇಳುತ್ತೀ
ರಿ ಈತನು ದೇವರ ಮಗನೇ ಅಲ್ಲವು ನೀವು ನಮ್ಮ ಹಾಗೆ ಹುಡುಗಯಿದ್ದೀರಿ ಯೆಂದು ಅವರು ಈ ಮಾತನ್ನು ಹೇಳಲಾಗಿ ತಾಯಿಯ ಮೊ
ರೆಯನ್ನು ಬಸವೇಶ್ವರನು ನೋಡಿ ಆ ಜನರಿಗೆ ಹೇಳಿದನು - ನೀವು ಪಾಪದ ದೇವರನ್ನು ಪೂಜಿಸುತ್ತೀರಿ ಪರಲೋಕದಲ್ಲಿರುವ ಮಹಾ
ದೇವರನ್ನು ಪೂಜಿಸಲಾರಿರಿ - ಯೆಂದು ಆ ನೀರಿನೊಳಗಣ ಹುಡುಗರ ಹೆಸರು ಗೊಂಡು ಕರೆದನು ಆ ಕ್ಷಣದಲ್ಲಿ ಅಷ್ಟು ಹುಡು
ಗರು ಬಂದರು ಈ ಮಹಿಮೆಯನ್ನು ಸರ್ವಜನರು ನೋಡಿದರು ಸರ್ವರು ಬಸವೇಶ್ವರನ ಕೊಂಡಾಡಿದರು ಮೊದಲಿನ ಪವಾಡವಾ
ಡಿದನು - ॥೧॥ ॥ ಯೆರಡನೆ ಆಶ್ಚರ್ಯ ಏನೆಂದರೆ ಆತನು ಏಳುವರುಷದವನು ಆದ ಮೇಲೆ ಸರ್ವಸ
ಮಸ್ತಬ್ರಾಹ್ಮರು ಜೋಯಿಸರು ಕೂಡಿ ಈತಗೆ ಮುಂಜೀ ಲಗ್ನವ ಮಾಡಬೇಕೆಂದು ತಂದೆ ತಾಯಿಗಳು ಸಹಿತವಾಗಿ ಈತನನ್ನು ಕೇ
ಳಿದರು - ಅವರಿಗೆ ಉತ್ತರವನ್ನು ಹೇಳಿದನು - ನಾನು ಜನಿವಾರದವನಲ್ಲ ನೀವು ಯಿಂಥಾ ಹುಚ್ಚು ಕೆಲಸವ ಮಾಡುವದು ತರವಲ್ಲ
ವೆನ್ನಲಾಗಿ - ತಂದೆ ಹೇಳಿದನು - ನಮ್ಮ ಕುಲದವರು ಜನಿವಾರವನ್ನು ಹಾಕದಿದ್ದರೆ ಕುಲದಲ್ಲಿ ಕರಕೊಂಬುವದಿಲ್ಲವು ಯೆಂದು
ಬಹಳ ಪ್ರಕಾರವಾಗಿ ಈತನನ್ನು ಬೇಡಿಕೊಂಡರು ಮತ್ತು ಹೇಳಿದರು - ನಿನಗೆ ಜನಿವಾರವ ಹಾಕಿದ ಮೇಲೆ ನೀನು ನಿನ್ನ ಮನಸ್ಸಿ
ಗೆ ಬಂದ ಹಾಗೆ ಮಾಡು ಯೆಂದು ಹೇಳಲಾಗಿ ಆ ಕ್ಷಣದಲ್ಲಿ ತಂದೆ ತಾಯಿಗಳ ಮಾತನ್ನು ಕೇಳಿ ಒಪ್ಪಿಕೊಳ್ಳಲಾಗಿ ಆ ಮೇಲೆ ಜೋ
ಯಿಸರೂ ಆಚಾರ್ಯರೂ ಯಜ್ಞವನ್ನು ಮಾಡಿ ಮಂಟಪದಲ್ಲಿ ಬಸವೇಶ್ವರನಿಗೆ ಜನಿವಾರ ಹಾಕಲಾಗಿ ಮೂರು ವೇಳೆ ಹರಿ
ಯಿತು ಸರ್ವರು ಹುಬ್ಬಾಗಿ [?] ಆತನ ಕೈಯಲ್ಲಿ ಅದನು ಕೊಡಿರಿ ಯೆಂದು ಹೇಳಿದರು ಆಗ ಬಸವಣ್ಣನ ಕೈಯಲ್ಲಿ ಜನಿವಾರ
ವನ್ನು ಕೊಟ್ಟರು ತರುವಾಯ ಅಕ್ಕಿ ಕಾಳನ್ನು ಹಾಕಿದರು ಅದಷ್ಟು ಆದ ಮೇಲೆ ಬ್ರಾಹ್ಮರಿಗೆ ಭೋಜನಕ್ಕೆ ಹೇಳಿಸಿದರು
ಸರ್ವಸಮೂಹವೆಲ್ಲಾ ಬಂದುದೂ ಸಮಸ್ತಬ್ರಾಹ್ಮರು ಊಟಕ್ಕೆ ಕುಳಿತ ಸಮಯದಲ್ಲಿ ಹಾಲು ತಂದಿಲ್ಲ ಹಾಲು ಮಾರುವ
ವಡುವ್ವಾರ [?] ಹೊರಗೆ ದೂರದಲ್ಲಿದ್ದರು ಆ ಸಮಯದಲ್ಲಿ ವ್ವಾರು [?] ಬಾಜಾರೊಳಗೆ ಬಂದು ಆಕಳು ಸತ್ತು ಬಿದ್ದಿತ್ತು - ಆಗಲು ಬ
ಸವೇಶ್ವರನು ಸತ್ತಂಥಾ ಆಕಳನ್ನು ಯೆಬ್ಬಿಸಿ ಹತ್ತು ಕೊಡ ಹಾಲನ್ನು ಹಿಂಡಿಸಿಕೊಂಡು ಮನೆಗೆ ಬರಲಾಗಿ ಈ ಸುದ್ದಿಯನ್ನು ಸಮ
ಸ್ತಬ್ರಾಹ್ಮರು ಕೇಳಿ ನಿಮ್ಮ ಮಗನು ಬಹು ನೀಚನು ಸತ್ತಂಥಾ ಆವಿನ ಹಾಲನ್ನು ತಂದು ನಮಗೆ ಊಟಕ್ಕೆ ನೀಡಿಸುತ್ತಾನೆ ನೀನು
ನೀಚನು ಯೆಂದು ಸರ್ವರು ಬಿಟ್ಟು ಹೋದರು ಆಯಡಿಗಳು [?] ಯಿರಲಿಕ್ಕೆ ತಂದೆ ತಾಯಿಗಳು ಬಸವೇಶ್ವರನೇ ಸಮಸ್ತರು
ನೀಚದಯ [?] ಡಿಂಮಂ [?] ಬಿಟ್ಟು ಹೋದರು ಇನ್ನಾರುವು [?] ನಾಬೇಕೆಂದು ಚಿಂತೆಮಾಡಿದರು ಅವರಿಗೆ ಹೇಳಿದನು - ನೀವು ಈ
ಗ್ರಾಮದಲ್ಲಿ ಹಿಂದಕ್ಕೆ ಸತ್ತು ಹೋಗಿರುವ ನಿಮ್ಮ ಪೂರ್ವದವರ ಹೆಸರು ಗೊಂಡು ಕರಿಯಬೇಕೆಂಬ ವೇಳೆಯಲ್ಲಿ ಆ ಕಾಲದಿ
ಂದಾ ಆ ಗ್ರಾಮದಲ್ಲಿ ಸತ್ತು ಹೋದ ಜನರು ಸರ್ವರು ಯಿವರ ಅರಮನೆಗೆ ಬಂದು ಯೆಡೆಗಳಲ್ಲಿ ಕುಳಿತರು ಸರ್ವರು ಹೇ
ಳಿದರು - ಏನಮ್ಮ ಅರಸನ ಮೊಮ್ಮಕ್ಕಳು ಉತ್ತಮವಾಗಿ ಯಿದ್ದಾರೆ ನಿನ್ನ ಮಗನ ದಯದಿಂದಾ ನಾವು ಊಟಕ್ಕೆ ಬಂದಿ
ವೆಂದು ಸರ್ವರು ಹೇಳಲಾಗಿ ಯಿಬ್ಬರು ತಾಯಿತಂದೆಗಳು ಆಶ್ಚರ್ಯವಾಗಿ ಮತ್ತು ಉಣ್ಣುವದು ಬಿಟ್ಟು ಹೋದ ಜನರು
ತಮ್ಮ ತಂದೆ ತಾಯಿಗಳನ್ನು ನೋಡಿ ಬಹಳ ಸಂತೋಷವಾಗಿ ಅವರವರು ಕೂಡಿಕುಳಿತುವುಂಡರು - ಈ ಬಸವೇಶ್ವ
ರನ ದಯೆಯಿಂದಾ ನಿಮ್ಮ ಬೇಟಿ ಸಮನಾಯಿತು [?] ಯೆಂದು ಸರ್ವರು ಸಂತೋಷವಾಗಿ ತಮ್ಮ ತಮ್ಮ ಮನೆಗಳಿಗೆ ಹೋ
ದರು - ಮೇಲಿನಿಂದಾ ಬಂದಂಥಾವರು - ೭ - ದಿವಸದ ಮೇಲೆ ಅದೃಶ್ಯವಾದರು - ಆ ಮೇಲೆ ಸರ್ವರು ಬಸವೇಶ್ವರ
ನ ಬಳಿಗೆ ಬಂದು ಈತನ ಕೊಂಡಾಡಿದರು ಈತನು ಹೇಳಿದನು ಸರ್ವರಿಗೂ ಒಬ್ಬನೇ ದೇವರು ಇದ್ದಾನೆ ಆತನ ಕೊಂ 40.

ಡಾದುವದುಯಂದು ಜನರಿಗೆ ಹೇಳಿದನು ೬೨ ನೆ ಮಹಿಮೆ ತೀರಿತು-

೬೩ ನೆ ಮಹಿಮೆಯೇನಂದರೆ ಬಸವೇಶ್ವರನು ಹತ್ತುವರುಷದವರಿಂಯುಂತರ ಸಕಲವಿದ್ಯೆಗಳನ್ನು ಸಂಪಾದಿಸಿಕೊಂಡನು ಲೋಕದಲ್ಲಿ ಬಹಳ ಬುದ್ಧಿವಂತನೆಂದು ಪ್ರಸಿದ್ಧಿಯಾದನು ಈ ಪ್ರಕಾರ ಇರುತಿರಲಾಗಿ ಆಕ್ಷಣದಲ್ಲಿ ದೇವದೂತರು ಬಂದು ಹೇಳಿದರು- ಪೂರ್ವದಲ್ಲಿ ಪರಮೇಶ್ವರನು ಹೇಳಿದಮಾತುಗಳ ನೀನು ಮರೆತು ಈ ಜನಕರ ಮನೆಯಲ್ಲಿ ಕುಳಿತಿದ್ದೀಯಂದು ಯಚ್ಚರಿಸಿದರು ಆಗ ನಾಗಲಾಂಬಿಕೆಯು ನನ್ನ ತಮ್ಮನೇ ನಿನ್ನ ಕಾರ್ಯವು ಕಲ್ಯಾಣದಲ್ಲಿ ಪರಮೇಶ್ವರನು ಆಕಾಶದಿಂದಾ ಒಬ ಕಲ್ಲನ್ನು ಬಿಜ್ಜಳನ ಜಲಗದಲ್ಲಿ ಚಲ್ಲಿಯಿದ್ದಾನೆ ಆಕಲ್ಲಿನಲ್ಲಿಯಿರುವ ಅಕ್ಷರವು ಆದೇಶದಲ್ಲಿ ಇರುವ ಜನರಿಗೆ ತಿಳಿಯದೆಯಿದ್ದೀತು ನೀನು ಅಗತ್ಯವಾಗಿ ಹೋಗಬೇಕೆಂದು ನಾಗಲಾಂಬಿಕೆ ತನ್ನ ತಮ್ಮಗೆ ಹೇಳಲಾಗಿ ಬಹಳ ಸಂತೋಷಪಟ್ಟು ನೀನು ಸಹಾ ನನ್ನ ಸಂಗಡ ಬರಬೇಕೆಂದು ಕೇಳಲಾಗಿ ನಾಗಲಾಂಬಿಕೆ ನಾನು ಸಹಾ ನಿನ್ನ ಸಂಗಡ ಬರುವೆನೆಂದು ಹೇಳಿದಳು ಆಕ್ಷಣದಲ್ಲಿ ತಮ್ಮ ತಂದೆ ತಾಯಿಗಳಿಗೆ ಹೇಳಿದರು- ಏನಂದರೆ ನಾವು ಉಭಯತರು ಪರದೇಶಕ್ಕೆ ಹೋಗುತ್ತೇವೆ ನಮಗೆ ಅಪ್ಪಣೆಯನ್ನು ಕೊಡಬೇಕೆನ್ನಲಾಗಿ ಅವರು ಮಹಾದುಃಖದಿಂದಾ ಪ್ರಲಾಪ ಮಾಡಿದರು ಆದರು ನಾಗಲಾಂಬಿಕೆ ಹೇಳಿದ್ದೇನಂದರೆ ನಿಮ್ಮ ದೆಸೆಯಿಂದಾ ಮೊದಲಲ್ಲಿ ಪರಮೇಶ್ವರಗೆ ವಂದಿಸಿ ಬೇಡಿಕೊಂಡು ನಿಮ್ಮನ್ನು ಹೆತ್ತೆನು- ನೀವು ನಮ್ಮಕ್ಕೆ ಬರಿದು ಮಾಡಿ ಹೋಗುವದೇನು- ನಾವು ನಿಮ್ಮ ಸಂಗಡ ಬರುವೆವೆಂದು ಬಹಳ ಪ್ರಲಾಪ ಮಾಡಿ ಭೂಮಿಯಲ್ಲಿ ಬಿದ್ದು ಹೊರಳ್ಯಾಡುತ್ತಿದ್ದರು ಆ ಸಮಯದಲ್ಲಿ ಪುರದ ಜನರು ದುಃಖಮಾಡಿ ಪ್ರಲಾಪಿಸಿದರು ಮತ್ತು ಅರಣ್ಯದಲ್ಲಿದ್ದಂಥಾ ಪಕ್ಷಿಗಳು ಪಕ್ಷಿಗಳು ಮೊದಲಾಗಿ ಶೋಕವ ಮಾಡುತ್ತಿದ್ದವು- ಆ ತಂದೆ ತಾಯಿಗಳು ಶೋಕದಿಂದಾ ಮೂರ್ಛೆಯಾದರು- ಆ ಸಮಯದಲ್ಲಿ ದೇವದೂತರು ಬಂದು ನೀವು ದುಃಖವನ್ನು ಮಾಡಬೇಡಿರಿ ನಿಮ್ಮ ಮಕ್ಕಳು ಯಿಬ್ಬರನ್ನು ಕಳುಹಿಸಿಕೊಡಬೇಕು ಅವರಿಂದಾ ಪರಮೇಶ್ವರನು ಭೂಲೋಕದ ಕಾರ್ಯವನ್ನು ಸಾಗಿಸುವದಕ್ಕಾಗಿ ಕಳುಹಿಸಿಕೊಟ್ಟಿದ್ದಾನೆ ನೀವು ನರರಂತೆ ಅವರಿಗೆ ಚಿಂತೆ ಮಾಡಬೇಡಿರಿಯೆಂದು ಹೇಳಿ ಅದೃಶ್ಯವಾದರು ಆಮೇಲೆ ತಂದೆ ತಾಯಿಗಳು ಯಚ್ಚರಿಯಾಗಿ ಪುರದ ಜನಸಮುದಯಕ್ಕೆ ಅಪ್ಪಣೆ ಕೊಟ್ಟು ಬಸವೇಶ್ವರನಿಗೂ ನಾಗಲಾಂಬಿಕೆಗೂ ಹೇಳಿದ್ದೇನಂದರೆ- ನಮಗೆ ಒಬ್ಬ ದೂತನು ನಿಮಗೆ ಸಂತೋಷದಿಂದಾ ಅಪ್ಪಣೆಯ ಕೊಟ್ಟು ಕಳುಹಿಸಿರೆಂದು ಹೇಳಿದನು ನೀವು ಅಂತ್ಯಕಾಲಕ್ಕೆ ನಮ್ಮ ಉಭಯತರಿಗೂ ಹಾಗು ನಮ್ಮ ಬಳಗದವರಿಗೂ ಸಮಸ್ತರಿಗೂ ಮೋಕ್ಷರಾಜ್ಯವನ್ನು ಕೊಟ್ಟು ಕೇಳಿಸಬೇಕು ಯಿದಕ್ಕೆ ನೀವು ನಮಗೆ ನಂಬಿಗೆಯನ್ನು ಕೊಡಬೇಕೆಂದು ತಮ್ಮ ಉಭಯ ಮಕ್ಕಳನ್ನು ಬೇಡಿಕೊಂಡರು- ಅದಕ್ಕೆ ಬಸವೇಶ್ವರನು ಹೇಳಿದನು ನೀವು ಪರಮೇಶ್ವರನಲ್ಲಿ ವಿಶ್ವಾಸವಿಡಬೇಕು ಆತನು ಸರ್ವರಿಗೂ ಮೋಕ್ಷವನ್ನು ಕೊಡುವನು ಯೆಂದು ಬಹಳ ಪ್ರಕಾರ ಹೇಳಿ ಸಮಾಧಾನವನ್ನು ಮಾಡಿ ನಿರೂಪವನ್ನು ತೆಗದುಕೊಂಡು ಹಾಂಗು ಪುರದ ಜನರಿಂದಾ ಅಪ್ಪಣೆ ತೆಗದುಕೊಂಡು ಅಕ್ಕ ನಾಗಲಾಂಬಿಕೆಯನ್ನು ಕರಕೊಂಡು ಕಲ್ಯಾಣನಗರದ ಮಾರ್ಗವನ್ನು ಹಿಡಿದು ನಡೆದರು- ಮಾದವರಾಯನು ಮಾದಲಾಂಬಿಕೆಯು ಪುರದ ಜನರು ಕೂಡಿಕೊಂಡು ತಮ್ಮ ಗ್ರಾಮಕ್ಕೆ ಪ್ರವೇಶಿಸಿದರು- ೭ - ಸಂಧಿ ಮುಗಿಯಿತು- ॥

ಬಸವೇಶ್ವರನು ನಾಗಲಾಂಬಿಕೆಯು ಯಿವರಿಬ್ಬರು ಅರಣ್ಯದಲ್ಲಿ ಹೋಗುತ್ತಿರಲಾಗಿ ಮೃಗಪಕ್ಷಿಗಳ ನಾಗಲಾಂಬಿಕೆಯು ನೋಡಿ- ಭಯಂಕರವಾಗಿ ತಮ್ಮನನ್ನು ಕೇಳಿದಳು- ಈ ದೊಡ್ಡ ಮೃಗಗಳು ನಮ್ಮ ಸಮೀಪಕ್ಕೆ ಬರುತ್ತಾವೆ ನಮಗೆ ಬಹು ಅಂಜಿಕೆಯಾಗುತ್ತದೆಯೆಂದು ತನ್ನ ತಮ್ಮನನ್ನು ಕೇಳಿದಳು ಆತನು ಹೇಳಿದೇನಂದರೆ- ಈ ಅರಣ್ಯದಲ್ಲಿ ಮೃಗಗಳು ಯಿರುವಂಥಾ ಸ್ಥಳವು ಯಿಲ್ಲಿರುವ ಮೃಗಗಳು ನಮ್ಮನ್ನು ಯೇನು ಮಾಡಲಿಕ್ಕಿಲ್ಲವು ನೀನು ಅಂಜಿಕೊಳ್ಳಲಾಗದು ಯೆಂದು ಮಾ

ಗಳಲ್ಲಿ ಹೀಗೆ ಹೇಳಲಾಗಿ ಆ ಕಲ್ಯಾಣ ನಗರದ ಸಮೀಪಕ್ಕೆ ಬಂದರು ಅಲ್ಲಿ ಆ ದೇಶದ ರಾಜನ ತೋಟವು ಇತ್ತು ಆ ತೋಟದಲ್ಲಿ ಇರುವಂಥಾ
ವನಪಾಲಕನು ಇವರಿಬ್ಬರು ಪ್ರಾಯದವರನ್ನು ಕಂಡು ಬಹಳ ಸಂತೋಷನಾಗಿ ತೋಟದಲ್ಲಿರುವಂಥಾ ಫಲಗಳನ್ನು ತಂದು ಇವರ ಸಮೀ
ಪಕ್ಕೆ ಬಂದು ಸಾಷ್ಟಾಂಗವೆರಗಿ ಫಲಗಳನ್ನು ಕೊಟ್ಟು ಆತನು ಕೇಳಿದನು - ಎಲೈ ಬಾಲಕರೇ ನೀವು ಬಹಳ ಸಣ್ಣವರು ಇದ್ದೀರಿ ನಿಮ್ಮ ತೇಜಸ್ಸ
ನೋಡಲಿಕ್ಕೆ ಸೂರ್ಯನ ಹಾಗೆ ಕಾಣುತ್ತೀರಿ ನೀವು ಯಾವ ದೇಶದಿಂದಾ ಬಂದಿರಿ ಯಾವ ಅರಸನ ಮಕ್ಕಳು ನೀವು ಇದನ್ನು ಹೇಳಬೇ
ಕೆಂದು ವಿಜ್ಞಾಪನೆ ಮಾಡಿಕೊಂಡು ಕೇಳಿದನು - ಈತನು ಹೇಳಿದನು - ನಾವು ಕನ್ನೋಜ ದೇಶದಲ್ಲಿ ಬಡ ಬ್ರಾಹ್ಮಣನ ಮಕ್ಕಳು ಇದ್ದೇ
ವೆ - ಕಲ್ಯಾಣ ಪಟ್ಟಣ ನಗರದಲ್ಲಿ ಪರಮೇಶ್ವರನು ಮಾಡಿದಂಥಾ ಪುಸ್ತಕದ ಶಾಸ್ತ್ರವನ್ನು ಜನರಿಗೆ ಹೇಳಲಿಕ್ಕೆ ಬಂದೆವು ಎನಲು ಅ
ದಕ್ಕೆ ಆ ವನಪಾಲಕನು ಹೇಳಿದನು - ಈ ದೇಶದ ಅರಸನು ಜಿನ್ನ ಬಹಿರನ ಪಕ್ಷನು ಈತನು ಮತ್ತು ಅಂಥಾ ಶಾಸ್ತ್ರವ ಹೇಳುವ ವಿದ್ವಾಂಸರ
ನ್ನು ನರಹತ್ಯ ಮಾಡುತ್ತಾನೆ - ನೀವು ಆ ಜಿನ್ನ ಭೈರವನ ಶಾಸ್ತ್ರವನ್ನು ಕಲಿತು ಹೇಳಿದರೆ ನಿಮಗೆ ಬಹಳ ಮೆಚ್ಚಿಕೊಂಬುವನು - ಈ
ದೇಶದಲ್ಲಿ ಬ್ರಹ್ಮ ವಿಷ್ಣು ರುದ್ರರನು ಯಾರು ಸೇವೆ ಮಾಡುವದಿಲ್ಲಾ - ನೀವು ಜಿನ್ನದೇವರನ್ನು ಆರಾಧಿಸಬೇಕು - ಹ್ಯಾಗಾದರು ನೀವು
ಈ ನಗರದಲ್ಲಿ ಕೆಲವು ದಿವಸ ತಮಾಷವಾಗಿ ಇದ್ದರೆ ಉತ್ತಮವು - ಮತ್ತು ಕೈಲಾಸದಿಂದಾ ನಮ್ಮ ಅರಸಿನ ಜಲಗದಲ್ಲಿ ಒಂದು ಲಿಪಿ
ಕಲ್ಲು ಇಳಿದಿತು ಆ ಕಲ್ಲುಮೇಲಿನ ಅಕ್ಷರವು ದಾರಿಗೂ ತಿಳಿಯುವದಿಲ್ಲ ಆ ಕಾರಣ ಅರಸನು ತನ್ನ ಎಂಟು ಮಂದಿ ಪ್ರಧಾನರಿಗೆ ನೇಮಕ ಮಾ
ಡಿದನು - ಅದೇನೆಂದರೆ - ಈ ಕಲ್ಲಿನೊಳಗಿನ ಅಕ್ಷರವನ್ನು ನೀವು ೨ ೧ ತಿಂಗಳೊಳಗೆ ದಾರ ಕಡೆಯಿಂದ ಆದರೂ ಓದಿಸಿ ಅರ್ಥವನ್ನು ನನಗೆ
ತಿಳಿಸಿಕೊಟ್ಟರೆ ನನಗೆ ಉತ್ತಮವಿರುವದು ಮೂರು ತಿಂಗಳೊಳಗೆ ನೀವು ನನಗೆ ಅರ್ಥವನ್ನು ತಿಳಿಸದಿದ್ದರೆ ನಿಮ್ಮ ಎಂಟು ಮಂದಿಯ
ನ್ನು ಕಲ್ಲಿನ ಗಾಣದಲ್ಲಿ ಹಾಕಿಸಿ ನಿಮ್ಮ ಜೀವವನ್ನು ಕೊಲ್ಲಿಸುವೆನು ಇದು ನಿಶ್ಚಯವೆಂದು ಘಟ್ಟಿಯಾಗಿ ಈ ದೇಶದಲ್ಲಿ ತಿಳುಕೊಳ್ಳಲಿಕ್ಕೆ ಒಂ
ದು ಪತ್ರವನ್ನು ಬರೆದು ತನ್ನ ಸದರಿನಲ್ಲಿ ಕಂಬಕ್ಕೆ ಹಚ್ಚಿದ್ದಾನೆ ಆ ಕಾರಣ ಎಂಟು ಮಂದಿ ಪ್ರಧಾನರು ಕೇಶವಮೇ ಲಿಹಾಕ
ಷು ವಿದ್ವಾಂಸರನ್ನು ಒಡಿಯುಳ್ಳವರನ್ನು ಕರಕೊಂಡು ಬರಲಿಕ್ಕೆ ಹುಡುಕುತ್ತ ಇದ್ದಾರೆ ಆ ದಿವಸವು ಇಂದಿಗೆ ಎರಡೂವರೆ ತಿಂ
ಗಳಾಗಿದ್ದೀತು ಇಂದಿನ ಪರಿಯಂತರವು ಒಬ್ಬರು ಬಂದು ಓದಲಿಲ್ಲವೆಂದು ಈ ಪ್ರಕಾರದಲ್ಲಿ ವನಪಾಲಕನು ಹೇಳಿದನು - ಅದಕ್ಕೆ ಬ
ಸವೇಶ್ವರನು ಉತ್ತರವನ್ನು ಕೊಟ್ಟನು - ಅದು ದೊಡ್ಡವರ ಮಾತು ಆ ಕಲ್ಲಿನ ಅಕ್ಷರವನ್ನು ಬಡವರಲ್ಲಿ ದಾರಾದರು ಓದಿ ಹೇಳೇವೆಂದರೆ ಅವ
ರ ಮನಸ್ಸಿಗೆ ಬರಲಿಕಿಲ್ಲಾ ಎನ್ನಲು ಈ ಮಾತನ್ನು ವನಪಾಲಕ ಕೇಳಿ ಸಂತೋಷವಾಗಿ ಹೇಳಿದ್ದೇನೆಂದರೆ - ಎಲೈ ಬಾಲಕನೇ ನೀನು ಅದ
ನ್ನು ಸ್ವಲ್ಪ ನೋಡಿ ಓದಿದರೆ ಬಹಳ ಉತ್ತಮವು ಆಗಿರುವದು - ಇದಲ್ಲದೆ ಆ ಪ್ರಧಾನನು ನೇಮಕ ಮಾಡಿದ್ದಾನೆ ಅದೇನೆಂದರೆ - ಅರ
ಸನ ಜಲಗದ ಮುಂದೆ ಬಿದ್ದಂಥಾ ಕಲ್ಲಿನಲ್ಲಿರುವ ಅಕ್ಷರಗಳನ್ನು ದಾರು ಓದಿ ಹೇಳುತ್ತಾರೋ ಅವರಿಗೆ ನನ್ನ ಪ್ರಧಾನತ್ವವನ್ನು ನನ್ನ ಮಗ
ಳಾಗಿರುವ ನೀಲಾಂಬಿಕೆಯನ್ನು ನನ್ನ ಮನೆಯಲ್ಲಿರುವ ದ್ರವ್ಯವನ್ನು ಕೊಟ್ಟು ನೀಲಾಂಬಿಕೆಯನ್ನು ಅಂಥವನಿಗೆ ಲಗ್ನ ಮಾಡಿಕೊಡು
ವೆನೆಂದು ಪಟ್ಟಣದೊಳಗೆ ಮಂತ್ರಿಯು ಕೇರಿಕೇರಿಯಲ್ಲಿ ಡಂಗುರವನ್ನು ಸಾರುತ್ತಾನೆಂದು ಈ ಪ್ರಕಾರ ಎಲ್ಲರ ಮುಂದೆ ಹೇ
ಳಿದನು - ಅದಕ್ಕೆ ಬಸವೇಶ್ವರನು ಹೇಳಿದನು - ಓದಬಹುದು ಕೊಡುವದು ಬಹು ಕಷ್ಟವೆಂದು ಹೇಳಿದನು - ಆಕ್ಷಣದಲ್ಲಿ ಆ ವನ
ಪಾಲಕನು ಅವರನ್ನು ಕರಕೊಂಡು ಪೂರ್ವಳಗೆ ಬಂದನು - ತಾನು ತನ್ನ ಮನೆಯ ಸಮೀಪದಲ್ಲಿ ಒಂದು ಬಡ ಬ್ರಾಹ್ಮಣನ ಮನೆಯ
ಲ್ಲಿ ಇಳಿಸಿದನು - ಮತ್ತು ಅವರಿಗೆ ಊಟಕ್ಕೆ ಬೇಕಾದ ಕಬ್ಬಿಣಗಿನ ಹಾಂತ ಮಾಡಿ ಕೊಟ್ಟನು - ಹೀಗೆಯೇ ಅವರು ಇರುತ್ತಿದ್ದರು -
ಆ ಅರಸನು ನೇಮಕ ಮಾಡಿದ ಮೂರು ತಿಂಗಳು ಪೂರಾ ಆಗುವದಕ್ಕೆ ಇನ್ನು ಮೂರು ದಿವಸ ಉಳಿದಿದ್ದವು - ಆತನು ತನ್ನ ಆಳು
ಗಳಿಗೆ ಹೇಳಿದನು - ಎಂಟು ಮಂದಿ ಪ್ರಧಾನರನ್ನು ಕೊಲಲಿಕ್ಕೆ ಗಾಣವನ್ನು ತಯಾರು ಮಾಡಿರೆಂದು ಮೂರು ವೇಳೆ ಹುಕುಂ
ಕೊಟ್ಟನು - ಆ ಅಪ್ಪಣೆಯನ್ನು ಕೇಳಿ ಆಳುಗಳು ಕಲ್ಲುಗಾಣವನ್ನು ತಯಾರು ಮಾಡಲಿಕ್ಕೆ ಆರಂಭ ಮಾಡಿದರು ಈ ವರ್ತಮಾನವ
ನ್ನು ಮಧ್ಯರಾತ್ರಿಯಲ್ಲಿ ಪ್ರಧಾನಿಯು ಕೇಳಿ ಬಹಳ ಚಿಂತೆಯನ್ನು ಮಾಡಿ ದೇವರಿಗೆ ಬೇಡಿಕೊಂಡು ನಿದ್ರೆಗೈದನು ರಾತ್ರಿಯಲ್ಲಿ ಆದ ಸ್ವಪ್ನ 41.

ದಲ್ಲಿ ದೇವದೂತರು ಬಂದು ಹೇಳಿದರು - ನೀನು ಯೇನು ಚಿಂತೆಮಾಡಬೇಡ ನಿ ಬಿಕ್ಕಿನ ಅಕ್ಷರವುಳ್ಳದರಿಕ್ಕೆ ಒಬ್ಬ ಅರಸನು ನಿಮ್ಮ ಗ್ರಾ
ಮದಲ್ಲಿ ಬಂದಿದ್ದಾನೆ ಆತನಿಗೆ ನೀನು ಸೇವಕನಾಗಿದ್ದರೆ ಬಾವಪ್ಪುವಿ ಆತನು ಹೇಳಿದ ಪ್ರಕಾರ ನಡದುಕೊಳ್ಳುತ್ತಾಯಿರಬೇಕೆಂದು
ಹೇಳಿ ಅದೃಶ್ಯವಾದರು - ಆ ಪ್ರಧಾನನು ಯಿಚ್ಚತ್ತು ತನ್ನ ಮನಸ್ಸಿನಲ್ಲಿ ಸಂತೋಷವಾದ ಮೇಲೆ ತನ್ನ ಸ್ತ್ರೀಯು ಮಗಳು ಯಿವರ ಮುಂದೆ ಹೇ
ಳಿದನು ಅದಕ್ಕೆ ಆತನ ಸ್ತ್ರೀಯು ಅಂದಳು ಕಷ್ಟವು ಬಹಳಲು ತ್ರಮವಾಗಿ ಯಿದ್ದೀತು ನೀವು ಯಿನ್ನು ಮೇಲೆ ಅಸಮಾಧಾನವಾಗಿ ಯಿರಬೇ
ಡಿರೆಂದು ಹೇಳಿದಳು - ತರುವಾಯ ತನ್ನ ಮಗಳಾದ ನೀಲಾಂಬಿಕೆ ಹೇಳಿದಳು - ನನ್ನ ಸ್ವಪ್ನದಲ್ಲಿ ಒಬ್ಬ ಬ್ರಾಹ್ಮಣನು ನನ್ನ ಸಂಗಡ ನಿನಗೆ
ಮದುವೆ ಮಾಡಲಿಕ್ಕಾಗಿ ಒಬ್ಬ ಅರಸನನ್ನು ಕರತಂದು ಯಿದ್ದೇನೆ ನೀನು ಆತನನ್ನು ಮದುವೆಮಾಡಿಕೊಂಡು ಬಂದೇಮನಬ್ಬುನಿಂದಾ ನಿನ್ನ
ಪುರುಷನ ಸೇವೆಮಾಡಿಕೊಂಡು ಯಿರು ಯೆಂದು ಹೇಳಿ ಅದೃಶ್ಯವಾದನು ಈ ಪ್ರಕಾರ ಮಗಳ ಸ್ವಪ್ನವೂ ತನ್ನ ಸ್ವಪ್ನವೂ ವಿಚಾ
ರಮಾಡಿ ಬಹಳ ಸಂತೋಷವಾದನು - ಮತ್ತು ನನಗೆ ದೇವರು ಮೆಚ್ಚಿ ನನ್ನ ಪ್ರಾಣವನ್ನು ಉಳಿಸಬೇಕೆಂದು ಯಾವದೋ ಬಂದು ದೇಶ
ದ ಅರಸನನ್ನು ಕಳುಹಿಸಿಯಿದ್ದಾನೆ ಆತನೇ ನನಗೆ ದೇವರು ಆತನ ಬೇಟ ನನಗೆ ಪ್ರಾಗಿ ಆಗುವದೆಂದು ತನ್ನ ಸ್ತ್ರೀಯ ಸಂಗಡ ಮಾತಾ
ಡುತ್ತಾಯಿರಲಿಕ್ಕೆ ಅರಸನ ಆಳುಗಳು ಬಂದು ಹೇಳಿದರು - ಅರಸನು ನೀವು ಕರೆಮಾಡಿಸಿದ ದಿವಸವು ಸಂದಿತು - ನಿನ್ನನ್ನು ಕೊಲ್ಲಲಿ
ಕ್ಕೆ ಕರೆಯಲು ಕಳುಹಿಸಿಯಿದ್ದಾನೆ ಆದಕಾರಣ ನಿನ್ನ ಹೆಂಡತಿಗೆ ಹೇಳುವಂಥಾ ಮಾತುಗಳನ್ನು ಹೇಳಿ ನೀವು ಹೊರಡಬೇಕೆಂದು ಕ
ರೆಯಲು ಆಗ ಪ್ರಧಾನಿಯ ಮನೆಯಲ್ಲಿಯಿದ್ದಂಥಾ ಜನರೂ ಬಹಳ ಶೋಕವ ಮಾಡಿದರು - ಆಸಮಯದಲ್ಲಿ ಪ್ರಧಾನಿಯು
ಬಹಳ ಧೈರ್ಯವಾಗಿ ತನ್ನ ಹೆಂಡತಿಯನ್ನು ಕರೆಸಿ ತಬ್ಬಿಕೊಂಡು ಕೇಕೆ ಕೇಕೆ ಹಾಕಿ ಸಾರಿದನು - ಅದೇನೆಂದರೆ - ನಮ್ಮ ಅ
ರಸನ ಜಲಗದಲ್ಲಿ ಕೈಲಾಸದಿಂದಾ ಬಂದಂಥಾ ಒಬ್ಬನನ್ನು ಯಾರು ಬಿಡುತ್ತಾರೋ ಅವರಿಗೆ ನನ್ನ ಪ್ರಧಾನತ್ವವನ್ನೂ ನನ್ನ ಮನೆಯಂಥಾ
ರವನ್ನೂ ನನ್ನ ಮಗಳು ನೀಲಾಂಬಿಕೆಯನ್ನೂ ಲಗ್ನವಮಾಡಿಯಿಷ್ಟನ್ನು ಕೊಡುತ್ತೇನೆಂದು ಸಾರುತ್ತಾ ಬಂದನು ಆ ಸಮಯದಲ್ಲಿ ಅ
ರಸನ ವನಪಾಲಕನ ಮನೆಯ ಸಮೀಪಕ್ಕೆ ಬಂದನು - ಆ ವನಪಾಲಕನು ಪ್ರಧಾನನ ಪಲ್ಲಕ್ಕಿಯನ್ನು ತನ್ನ ಮನೆಗೆ ಕರತಂದು ತನ್ನ
ಮನೆಯಲ್ಲಿ ಕುಳ್ಳಿರಿಸಿ ಆತನ ಮುಂದೆ ಹೇಳಿದನು - ನಮ್ಮ ಪ್ರಧಾನನೇ ನೀವು ಸಾರುವಂಥಾ ಮಾತನ್ನು ಯಾರಾದರು ಬಿಡಿತಿಳಿ
ಬಿದರೆ ಅವರಿಗೆ ಸರ್ವವೂ ಕೊಡುವದು ನಿಶ್ಚಯವೇ ಯೆಂದು ಆತನನ್ನು ವಿಚಾರಿಸಲಿಕ್ಕೆ ಆತನು ಬಹಳವಾಗಿ ಆತಗೆ ವಂದಿಸಿ
ಹೇಳಿದನು - ನನ್ನ ಜೀವವನ್ನು ದಾರು ಉಳುಹಿಕೊಂಬುತ್ತಾರೋ ಅವರೇ ನನ್ನ ದೇವರೆಂದು ಹೇಳಲಾಗಿ - ತನ್ನ ನೆರೆಯ ಮ
ನೆಯಲ್ಲಿ ವಸ್ತ್ರ ಯಿದ್ದಂಥಾ ಬಾಲಕನ ಬಳಿಗೆ ಹೋಗಿ ಹೇಳಿದನು - ಯಿ ಸೋಪರದೇಶದ ರಾಯನೇ ನನ್ನ ಮನೆಯಲ್ಲಿ ಪ್ರಧಾ
ನನು ಬಂದು ಕುಳಿತುಯಿದ್ದಾನೆ - ನೀವು ದಯಮಾಡಿ ಬರಬೇಕೆಂದು ವಿಜ್ಞಾಪನೆಮಾಡಿಕೊಂಡನು ಆಗಲು ಬಸವೇಶ್ವರನು ತನ್ನ ಅ
ಕ್ಕನಿಗೆ ನಮಸ್ಕಾರವಮಾಡಿ ಹೇಳಿದ್ದೇನಂದರೆ - ವನಪಾಲಕನು ಬಂದು ನನ್ನ ಸಂಗಡ ತನ್ನ ಮನೆಯಲ್ಲಿ ಪ್ರಧಾನನು ನಿಮ್ಮನ್ನು ಕರೆಯ
ಲಿಕ್ಕೆ ಬಂದು ಕುಳಿತಿದ್ದಾನೆ ಆದಕಾರಣ ನೀವು ದಯಮಾಡಿ ಅಪ್ಪಣೆಯ ಕೊಡಬೇಕೆಂದು ಹೇಳಿದನು ಯೆಂಬದಾಗಿ ತಿಳಿಸಿ
ದನು ಅದಕ್ಕೆ ನಾಗಲಾಂಬಿಕೆಯು ಬಹಳ ಹರ್ಷಿತಳಾಗಿ ನನ್ನ ತಮ್ಮನೇ ನೀನು ರಾಜಮಂದಿರಕ್ಕೆ ಹೋಗಿ ಸಕಲಕಾರ್ಯಗಳ
ನ್ನೆಲ್ಲಾ ಜಯಿಸಿಕೊಂಡು ಬರಬೇಕೆಂದು ಹಸ್ತವನ್ನು ತಮ್ಮನ ತಲೆಯ ಮೇಲೆಯಿಟ್ಟು ಕಳುಹಿಸುವ ಸಮಯದಲ್ಲಿ ಆ ಪ್ರಧಾನ
ನು ಯಿವರಿದ್ದ ಸ್ಥಳಕ್ಕೆ ಬಂದು ಬಾಲಕರಿಗೆ ದೀರ್ಘದಂಡನಮಸ್ಕಾರವಹಾಕಿದನು - ಮತ್ತು ಅವರನ್ನು ಬೇಡಿಕೊಂಡನು - ನನ್ನ ತಂ
ದೆತಾಯಿಗಳೇ ಯಿಂದು ಹತ್ತನೇ ತಾಸಿಗೆ ನನ್ನ ಜೀವವನ್ನು ನಮ್ಮ ಅರಸನು ತೆಕ್ಕೊಳ್ಳುತ್ತಾನೆ - ನೀವು ಬಂದು ನನ್ನ ಜೀವವನ್ನು ಉ
ಳಿಸಿಕೊಳ್ಳಬೇಕೆಂದು ಬಹಳ ಪ್ರಕಾರವಾಗಿ ಶೋಕದಿಂದಾ ಹೇಳಿಕೊಳ್ಳಲಾಗಿ ಅದಕ್ಕೆ ಬಸವೇಶ್ವರನು ಹೇಳಿದನು -
ನಾವು ಸಣ್ಣ ಬಾಲಕರು ನಮ್ಮಿಂದ ಯೇನು ವದಿಕೆ ನಾಯಿತು ಕೈಲಾಸದಿಂದ ಅಕ್ಷರವು ನರರಮನುಷ್ಯರಿಗೆ ತಿಳಿಯಲಿಕ್ಕೆ ಬಾರದು

ಮತ್ತು ಈ ದೇಶದಲ್ಲಿ ಅದನ್ನು ಒಬ್ಬರಾದರೂ ಓದಲಿಲ್ಲವೆಂಬನ್ನಲಾಗಿ ಅದಕ್ಕೆ ಪ್ರಧಾನನು ಹೇಳಿದನು - ಪುಸ್ತಕ ಬರಹಗಳನ್ನು ಓದಬಲ್ಲೆವು ಯು ಪುತ್ರ ನಾಮೆಗಳನ್ನು ಹೇಳಬಲ್ಲೆವು - ಮೇಲಾಗಿ ಸಕಲ ದೇಶದವರನ್ನು ಕರಸಿ ಕೇಳಿದೆನು ದಾರಾದರೂ ಒಬ್ಬರೂ ಓದಲಿಲ್ಲವು - ನೀವು ದಯಮಾಡಿ ಬಂದು ಓದಿ ನನ್ನ ಪ್ರಾಣವನ್ನು ಉಳಿಸಿಕೊಂಡಾಕ್ಷಣವೇ ನನಗುಂಟಾದುದೆಲ್ಲಾ ನಿಮಗೆ ಒಪ್ಪಿಸಿಕೊಡುತ್ತೇನೆ - ನನ್ನ ಮಗಳಾದ ನೀಲಾಂಬಿಕೆಯನ್ನು ನಿಮಗೆ ಒಪ್ಪಿಸುತ್ತೇನೆ - ನಾನು ಈ ಸಮಯದಲ್ಲಿ ಲಜ್ಜಾತುರನಾಗಿ ಇದ್ದೇನೆ - ತಾವು ನನ್ನ ಮಾತುಗಳನ್ನು ಮೀರಬಾರದೆಂದು ಹೇಳಿ ಬಹಳ ದುಃಖದಿಂದ ನಮಸ್ಕಾರವ ಮಾಡಲಾಗಿ ಬಸವೇಶ್ವರನು ಅಕ್ಕನ ಅಪ್ಪಣೆಯನ್ನು ತಕ್ಕೊಂಡು ಪ್ರಧಾನನನ್ನು ಎಬ್ಬಿಸಿ ಆತನಿಗೆ ಸಮಾಧಾನವನ್ನು ಹೇಳಿದನು ಆ ಸಮಯದಲ್ಲಿ ಬಸವೇಶ್ವರನು ತಾನೇ ಏಕಾಂತದಲ್ಲಿ ಕುಳಿತು ಪರಮೇಶ್ವರನನ್ನು ಧ್ಯಾನವ ಮಾಡಲಾಗಿ ಪರಮೇಶ್ವರನು ಪ್ರತ್ಯಕ್ಷವಾಗಿ ಹೇಳಿದ್ದೇನೆಂದರೆ ನಿನ್ನ ಕಾರ್ಯಸಿದ್ಧಿಯಾಗಲಿ ಎಂದು ಮತ್ತು ಯೆಳುನೂರಾಯರುವತ್ತು ಮಂದಿ ಗಣಂಗಳು ಈ ಪಟ್ಟಣದಲ್ಲಿ ಜನ್ಮಿಸಿಯಿದ್ದಾರೆ ನಾನು ನಿನ್ನ ಸಂಗಡ ಯಿರುತ್ತೇನೆ - ನೀನು ಸರ್ವರಂತೆ ಅಂಜಿಕೊಳ್ಳಬೇಡ ಬಹಳ ವಿಶ್ವಾಸವಿಟ್ಟು ಶಾಸನವನ್ನು ಓದುವದು ಎಂದು ಹೇಳಿ ಪರಮೇಶ್ವರನು ಅದೃಶ್ಯವಾದನು ಆ ಮೇಲೆ ಬಸವೇಶ್ವರನು ನಾಗಲಾಂಬಿಕೆಗೆ ನಮಸ್ಕಾರವ ಮಾಡಿ ಅಪ್ಪಣೆಯ ತಕ್ಕೊಂಡು ಸಭೆಯಲ್ಲಿ ನಿಂತಿರಲಾಗಿ ಶರಣಗಣಂಗಳು ಯೆಳುನೂರಾಯವತ್ತು ಮಂದಿ ಅರುವತ್ತು ಮೂವರು ಪುರಾತರು ಬಂದರು - ಸಕಲದೇವರ್ಯ್ಯನು ಪರಾಕೆ ಹೇಳಿದನು - ಅಂಜಲೀಕರಿಯ ಮುಕ್ತಿನಾಥನು ಎಚ್ಚರಿಕೆ ಹೇಳಿದನು - ಮಡಿವಾಳ ಅಪ್ಪಣ್ಣನು ಚಿತ್ರವ ಬರೆದು ನಿಂತನು ಕಿನ್ನರಿ ಬೊಮ್ಮಣ್ಣನವರು ಹಾಡಿದರು - ಏಕಾಂತದ ರಾಮಯ್ಯನು ಸಮೀಪಕ್ಕೆ ಬಂದು ನಿಂತನು. ಕೋಲ ಶಾಂತಪ್ಪನವರು ಸನ್ನಿಧಿಯಲ್ಲಿ ಬಂದು ನಿಂತರು - ಈ ಪರಿಯಾಗಿ ಸಮಸ್ತ ಗಣಂಗಳು ಬರುವದನ್ನು ಕಂಡು ನೋಡುತ್ತ ಪ್ರಧಾನಿಯು ಆಕ್ಷಣದಲ್ಲಿ ಆಶ್ಚರ್ಯವಾಗಿ ತಾನು ತನ್ನ ಮಗಳನ್ನು ಕರೆಸಿ ಬಸವೇಶ್ವರಗೆ ನಮಸ್ಕಾರ ಮಾಡಲಾಗಿ ನಾಗಲಾಂಬಿಕೆ ಬಹಳ ಸಂತೋಷಿತಳಾಗಿ ತಮ್ಮಲ್ಲಿ ಕರಿಸಿಕೊಂಡರು - ಬಸವೇಶ್ವರನು ದಂಡಿಗೆಯ ಮೇಲೆ ಕೊಂಡು ಅರಸನ ಬಳಿಗೆ ಹೋಗಲಾಗಿ ಅರಸನು ಬಪ್ಪಾಸನದಲ್ಲಿ ಕುಳ್ಳಿರಿಸಿದನು - ಬಹಳವಾಗಿ ಸಂತೋಷದಿಂದ ಮಾತಾಡಿದರು ಅದೇನೆಂದರೆ - ನಿಮ್ಮ ದೇಶದಾವದು ತಾವು ಯಾವ ಅರಸನ ಮಕ್ಕಳು ಇದ್ದೀರಿ ತಮ್ಮ ನಾಮವು ದಾವದು ಎಂದು ಆ ಬಿಜ್ಜಳರಾಯನು ಕೇಳಲಾಗಿ ಈತನು ಹೇಳಿದನು - ದೇಶಕ್ಕೆ ಮೇಲು ದೇಶದವರು ನಮ್ಮ ತಂದೆಯು ಮಾದವ ಅರಸನು ನಮ್ಮ ತಾಯಿಯು ಮಾದಲಾಂಬಿಕೆಯು. ನಮ್ಮ ಹಿರಿಯ ಅಕ್ಕನ ಹೆಸರು ನಾಗಲಾಂಬಿಕೆಯು ನನ್ನ ಹೆಸರು ಬಸವರಸು ಎಂದು ಈ ಪ್ರಕಾರ ಬಸವೇಶ್ವರನು ಹೇಳಲಾಗಿ ಆ ಅರಸನು ಈತನ ಮಾತನ್ನು ಕೇಳಿ ತಾನು ಹೇಳಿದನು - ಇಂದಿಗೆ ಮೂರು ತಿಂಗಳ ಮುಂದೆ ಕೈಲಾಸದಿಂದ ದೇವರು ನಮ್ಮ ಮೇಲೆ ಅಂತಃಕರಣದಿಂದ ಈ ಬಯನ್ನು ನಮ್ಮ ಆಲಯದಲ್ಲಿ ಚಲ್ಲಿ ಬಿಟ್ಟಿದ್ದಾನೆ. ದೇಶದೇಶದ ಪಂಡಿತರಿಗೆ ಅದು ತಿಳಿಯ ಬಾರದು ತಾವು ದಯಮಾಡಿ ನಮ್ಮಲ್ಲಿ ಬಂದಿರಿ ನನಗೆ ಬಹಳ ಸಂತೋಷವಾಯಿತು ಎಂದು ಹೇಳಿ ಆ ಮೇಲೆ ತನ್ನ ಆಳುಗಳಿಗೆ ಅಪ್ಪಣೆ ಮಾಡಿದನು - ಆ ಬಿದ್ದಿರುವಂಥಾ ಶಿಕಲ್ಲನ್ನು ಸಭೆಯಕ್ಕೆ ತಂದು ಬಿಡಿರೆಂದು ಹೇಳಿದನು - ಆಕ್ಷಣದಲ್ಲಿ ಆಳುಗಳು ಆ ಶಿಲೆಯ ಕಲ್ಲನ್ನು ತಂದು ಮುಂದೆ ಇಟ್ಟರು ಆಗ ಸಮಸ್ತ ಪ್ರಧಾನರು ಸಹಿತವಾಗಿ ಬಂದು ಕರಗಳನ್ನು ಜೋಡಿಸಿ ಬೇಡಿಕೊಂಡರು ಈ ಬಸವರಸನೇ ಈ ಶಿಲೆಯಲ್ಲಿ ಬರೆದ ಅಕ್ಷರದ ಅರ್ಥವನ್ನು ಅರಸನಿಗೂ ಸಮಸ್ತ ಪಂಡಿತರಿಗೂ ಸನ್ಮಾನ ಹೊಂದುವಂತೆ ದಯಮಾಡಿ ಓದಬೇಕು ಎಂದು ಹೇಳಿಕೊಂಡರು ಆಕ್ಷಣದಲ್ಲಿ ಬಸವರಸನು ಪರಳಾಗೆ ಕೈಕರವನೆತ್ತಿ ಆ ಪರಮೇಶ್ವರನಿಗೆ ಸ್ತೋತ್ರಮಾಡಿ ಆ ಶಿಲೆ ಕಲ್ಲಿನ ಸಮೀಪದಲ್ಲಿ ಕುಳಿತು ಓದಲಿಕ್ಕೆ ಆರಂಭ ಮಾಡಿದನು ಅದರಲ್ಲಿರುವ ಹನ್ನೊಂದು ಶ್ಲೋಕವನ್ನು ಓದಿದನು ಅದರ ಅರ್ಥವನ್ನು ಸ್ವಲ್ಪ ಹೇಳುತ್ತೇನೆ ಅದೇನೆಂದರೆ ಈ ಅರಸನೇ ಈ ಕಲ್ಲು ಬಿದ್ದ ಸ್ಥಳದಲ್ಲಿ ಕೆಳಗೆ ಏಳು ಕೊಪ್ಪರಿಗೆ ದ್ರವ್ಯವುಂಟು ಒಂದು ಸಾವಿರ ಮುತ್ತುಗಳು ಉಂಟು ಒಂದು ಕರಿ ಕಾಳಿಂಗನೆಂಬ ಸರ್ಪ ಉಂಟು. ಇದಕ್ಕೆ ಅಧಿಪತಿಯು ಬ್ರಹ್ಮವೇತಾಳವುಂಟು ಈ ದ್ರವ್ಯವು ಸ್ವಾಧ್ಯವಾಗುವದು ನಿನ್ನ

ಕ್ಕೆ ಸರ್ವಲೋಕದಲ್ಲಿ ದೇವರ ಸನ್ನಿಧಿಯಲ್ಲಿರುವಂಥಾ ಪ್ರಮಥಗಣಂಗಳು ನಂದಿಕೇಶ್ವರ ಮೊದಲಾದ ದೇವತೆಗಳು ಸಹ ವಾದಿ
ಸುವರು ಅದು ಯೇನು ಕಾರಣವೆಂದರೆ ಭೂಲೋಕದ ಅರಸುಗಳೆಲ್ಲರು ವೀರಮಹೇಶ್ವರನನ್ನು ಆರಾಧಿಸುವರು- ನಿನ್ನ ದೇ
ಶದಲ್ಲಿ ಬಹಳ ಪಾಪಿಷ್ಟರಾದುದರಿಂದಾ ಈ ದೇಶದ ಜನರನ್ನು ಶಿಕ್ಷೆಮಾಡಲಿಕ್ಕೆ ಬರುತ್ತಾರೆ ನೀನು ಬಹಳ ಯೆಚ್ಚರಿಕೆಯಾಗಿ
ರಬೇಕು- ನೀನು ಯೆಚ್ಚರವನ್ನು ತಪ್ಪಿದರೆ ಯಮಲೋಕದಲ್ಲಿ ವಾಸವಾಗಿರುವಿ ಮತ್ತು ಶರಣಗಣಂಗಳ ಕ್ರೋಧದಿಂದಾ ನೀನು
ಮರಣವಾಗುವಿ ನೀನು ಬಹಳ ಭಕ್ತಿಯಿಂದಾ ದೇವರಿಗೆ ವಂದಿಸು ಯೆನುತ್ತಾ ಸಕಲ ಮಾತುಗಳನ್ನು ಹೇಳಿದನು- ಆ ವೇಳ್ಯದಲ್ಲಿ ಬಿಜ್ಜಳ
ರಾಯನು ಮಾತಾಡಿದನು- ಅದು ಯೇನಂದರೆ ನೀವು ಮೊದಲೇ ಹೇಳಿದ ಮಾತಿನ ತಾತ್ಪರ್ಯವನ್ನು ತೋರಿಸಬೇಕು ಅದೇನಂ
ದರೆ- ಈ ನಿಬಿಕಲ್ಲು ಬಿದ್ದ ಅದರ ಕೆಳಗೆ ಯೇಳುಕೋಟಿ ದ್ರವ್ಯವೂ ಪ್ರೇತ ಪಿಶಾಚ ಬ್ರಹ್ಮರಾಕ್ಷಸ ಕರೇ ಕಾಳಿಂಗನೆಂ
ಬ ಸರ್ಪವು ಉಂಟೆಂದು ಹೇಳಿದಿರಿ ನನಗೆ ದೃಷ್ಟಾಂತವಾಗಿ ತೋರಿಸಬೇಕು- ಆಗ ತಾವು ಮುಂದಾಗಿ ಹೇಳಿದ ಸಕಲವಾ
ಕ್ಯವು ಸತ್ಯವೆಂದು ನಂಬುತ್ತೇವೆಂತಂದು ಅರಸನು ವಿನಯವಾಗಿ ಅದಕ್ಕೆ ಪ್ರತ್ಯುತ್ತರವಾಗಿ ಹೇಳಿದನು- ಈ ದ್ರವ್ಯದ ಸುತ್ತ
ಲು ಯಿರುವ ಪಿಶಾಚಗಳು ನಿನಗೆ ಬಹಳ ಉಪದ್ರವ ಮಾಡುತ್ತಾವೆ- ಅದಕ್ಕೆ ನೀನು ಅಂಜಬಾರದು ನಿಮ್ಮ ರಾಜಮಂದಿರದ
ಲ್ಲಿಯಿರುವಂಥಾ ಮಂತ್ರಗಾರರನ್ನು ಕಾಮಾಟಿಗಾರರನ್ನು ಕರಸಬೇಕೆಂದು ಹೇಳಲಾಗಿ ಹಾಗೆಯೇ ಅರಸನು ಮಂತ್ರಗಾ
ರರನ್ನೂ ಕೆಲಸದ ಆಳುಗಳನ್ನೂ ಕರಸಿದನು ಆಗಲು ಬಸವರಸನು ತೋರಿಸಿದ ಭೂಮಿಯನ್ನು ಆಳುಗಳು ಅಗೆವ ಸಮಯ
ದಲ್ಲಿ ಐವತ್ತು ಜನರು ಸತ್ತರು ಮಂತ್ರಗಾರರಲ್ಲಿ ಹತ್ತು ಮಂದಿ ಸತ್ತರು ಮತ್ತು ಆ ತಗ್ಗಿನಿಂದಾ ಸರ್ಪವು ಹೊರಡಲಾಗಿ ಅದರ ಬಾಯಿಂ
ದ ಬಂದ ಬೆಂಕಿಯು ಜನರಿಗೆ ತಾಕಿ ೧೦೦ ಮಂದಿ ಸತ್ತರು- ಯಿದೆಲ್ಲವನ್ನು ಬಿಜ್ಜಳರಾಯ ಕಂಡು ಬಹಳ ಭಯಂಕರದಿಂದಾ
ಆಗುವದೇ ಆಶ್ಚರ್ಯವೇನೆಂದು ಅಂಜಿಕೊಂಡು ಬಸವರಸನ ಕೈಯ ಹಿಡಿದು ನಿಂತು ಬಸವರಸನೇ ನನ್ನ ಪ್ರಾಣವ ನೀನು ಉಳುಹಿ
ಕೋ ನನ್ನ ಅರಸುತನದ ಸಿಂಹಾಸನವನ್ನು ನಿನಗೆ ಕೊಡುವೆನೆಂದು ಬಹಳ ಪ್ರಕಾರ ಬೇಡಿಕೊಂಡನು- ಅದಕ್ಕೆ ಬಿಜ್ಜಳನ ಪುತ್ರನೇ
ನಿನ್ನ ದೇವರನ್ನು ಭಜಿಸು ಆ ದೇವರು ರಕ್ಷಿಸಿಕೊಂಬುವನೆಂದು ಹೇಳಲಾಗಿ ಅರಸನು ಹೇಳಿದನು ಆ ಮಾತುಗಳು ಕೇಳಿ ಸಮ
ಯಕ್ಕೆ ಕಲ್ಲಾದವು ನೀನು ನನ್ನ ಗುಣಗಳನ್ನು ನೋಡುವ ಸಮಯವಿದಲ್ಲವು- ನೀವೇ ನನ್ನ ರಕ್ಷಿಸಲಿಕ್ಕೆ ಬಂದವರೀಯುದ್ದೀರಿ- ನಿಮ್ಮನ್ನು ದೇ
ವರು ಕಳುಹಿಸಿದ್ದಾನೆ ನನ್ನ ತಂದೆಯೇ ನನ್ನನ್ನು ಉಳುಹಿಕೊಳ್ಳಿಯೆಂದು ಹೇಳಿದನು ತಾವು ಮುಂದಾಗಿ ನನಗೆ ಹೇಳಿದ್ದನ್ನು ನಂಬ
ದೆ ನಿಮ್ಮನ್ನು ಪರೀಕ್ಷೆಮಾಡಬೇಕೆಂದು ನನ್ನ ಗರ್ವದಿಂದಾ ಹೇಳಿದೆನು ನನಗೆ ಬಹಳ ಆಶ್ಚರ್ಯ ತೋರುತ್ತದೆಯೆಂದು ಬಹಳ ಪ್ರಕಾರ ಬೇಡಿ
ಕೊಂಡನು- ಆಗಲು ಬಸವೇಶ್ವರನು ಪರಮೇಶ್ವರನ ಹೆಸರಿನಲ್ಲಿ ಸತ್ತಂಥಾವರ ಮೇಲೆ ನೀರನ್ನು ಚಲ್ಲಿದನು- ಅವರೆಲ್ಲರು ಯೆದ್ದು
ಕುಳಿತರು ಆ ಸರ್ಪವು ಬಸವೇಶ್ವರನ ತೊಡೆಯ ಮೇಲೆ ಕುಳಿತುಕೊಂಡಿತು- ಬ್ರಹ್ಮರಾಕ್ಷಸ ವೋಡಿಹೋಯಿತು- ಯಿಂತಿಷ್ಟು
ಆದಬಳಿಕ ದ್ರವ್ಯವನ್ನು ತೆಗಸಿ ಅರಮನೆಗೆ ಹಾಕಿಸಿದನು ಅಕ್ಷಣದಲ್ಲಿ ಅರಸು ಬಹಳ ಹರುಷವಾಗಿ ಕರೆದು ಮಂತ್ರಿ ಮಾರ್ಬ
ಲ ಮಾನ್ನೆಯರೆಲ್ಲಾ ಕೊಟ್ಟು ಬಸವರಸನಿಗೆ ತನ್ನ ಸಿಂಹಾಸನವನ್ನೂ ಮಂತ್ರಿತನವುಂಗರವನ್ನು ಸ್ವಾಧೀನಮಾಡಿ ನನ್ನ ರಾಜ್ಯಭಾರ
ವನ್ನ ನೀನೇ ಸಂರಕ್ಷಿಸುಂತೆಂದು ಒಪ್ಪಿಸಿದನು- ಇಷ್ಟು ಮಂದಿ ಪ್ರಧಾನರೊಳಗೆ ನೀನೇ ಹಿರಿಯ ಪ್ರಧಾನನೆಂದು ಸಾರಿದನು ಮತ್ತು
ಮರುಮಂತ್ರಿಯು ತನ್ನ ಸಮೂಹದಿಂದಾ ಹೊರಟು ತನ್ನ ಮನೆಗಳನ್ನು ಸೇರತಂದು ಪಾಡಕ್ಕೆ ವಪ್ಪಿಸಿದನು- ॥ ೩ - ಸಂಧಿ —

ಯರಡನೆ ದಿವಸದಲ್ಲಿ ತನ್ನ ಪರಿವಾರದ ಜನರನೆಲ್ಲಾ ಕರಕೊಂಡು ಮಹಾಪ್ರಧಾನನ ಮನೆಗೆ ಬಂದು ಆತನ ಮಗಳನ್ನು ಕರದು ಮಂಟಪದಲ್ಲಿ ಕುಳ್ಳಿರಿಸಿ ನೀಲಾಂಬಿಕೆಯನ್ನು ಶೃಂಗರಿಸಿ ಶೋಭನವನ್ನು ಮಾಡಿಸಿ ದೇವರ ಚಿತ್ರವನ್ನು ಮಾಡಿ ಬಸವೇಶ್ವರನನ್ನು ಉತ್ಸಹದಿಂದಾ ಕರಸಿದರು. ಅದಕ್ಕಾಗಿ ತನ್ನ ಅಕ್ಕ ನಾಗಲಾಂಬಿಕೆಯ ಕೂಡ ಮಾತನಾಡಿದನು. ಅಕ್ಕನೇ ಕೇಳು ದೇವರು ತಾನು ಪೂರ್ವದಲ್ಲಿ ಹೇಳಿಕಳುಹಿಸಿದ ಮಾತಿನ ನಗೆ ಬದ್ಧಿಯಾಯಿತು. ನಿನ್ನಿನ ದಿವಸದಲ್ಲಿ ದೇವರು ತಾನೇ ಬಂತು ನನ್ನ ಮುಖದಿಂದನುಡಿಸಿದವು ಹಮೆಯನ್ನು ಈ ಸ್ತ್ರೀ ಜನರೊಳ್ಗೆ ನೆ ತೋರಿಸಿದನು ಮಂತ್ರಿಯು ತನ್ನ ಮಗಳನ್ನು ನನಗೆ ಒಪ್ಪಿಸಿದನು ಯೆಂದು ಹೇಳಲಾಗಿ ನಾಗಲಾಂಬಿಕೆಯು ಉತ್ತರವನ್ನು ಹೇಳಿದಳು. ನನ್ನ ತಮ್ಮನೇ ಕೇಳು ಸೊನ್ನಪರಮೇಶ್ವರನು ಸಕಲವು ನಿನಗೆ ಆಗುವದೆಂದು ಪಂಚಪರುಷವನ್ನೇ ಕೊಟ್ಟು ಭೂಲೋಕದಲ್ಲಿ ಜನಿಸೆಂದು ನಿನ್ನನ್ನು ಕಳುಹಿಸಿದನು ಚನ್ನಾಗಿ ನೀನು ನೀಲಾಂಬಿಕೆಯನ್ನು ಲಗ್ನವ ಮಾಡಿಕೊಳ್ಳೆಂದು ಅಪ್ಪಣೆಯ ಕೊಟ್ಟಳು ಆ ಕ್ಷಣದಲ್ಲಿ ಶರಣಗಣಂಗಳು ಬಂದರು. ಬಸವೇಶ್ವರನು ಊರ್ಧ್ವಸ್ಥಲಕ್ಕೆ ಬಂದವರಲ್ಲಿ ಕೆಲವರ ಹೆಸರುಗಳನ್ನು ಬರೆದಿಹೆನು. ಅವರ ಹೆಸರುಗಳೇ ನಂದರೆ-

೧ ಕೂಗಿನಮಾರಯ್ಯ
೩ ಒಬ್ಬರಿಕಿ ಮುಕ್ಕಣ್ಣ-
೫ ಪರಾಕುಮ್ಮೇವಯ್ಯ-
೭ ಮಡಿವಾಳ ಮಾಚಯ್ಯ-
೯ ಶಿವನಾಗಮಯ್ಯನು-
೧೧ ಕಿಂಬಾವಿ ಬೋಗಯ್ಯನು-
೧೩ ಮುಗ್ಧಸಂಗಯ್ಯನು-
೧೫ ಶಂಕರದಾಸಿಮಯ್ಯ-
೧೭ ಕಿಂಪಗಾಧೀಶ್ವರ-
೧೯ ಕಾಲಕೇಶಯ್ಯ
೨೧ ನಿರ್ಲಜ್ಜ ಶಾಂತಯ್ಯಾ-
೨೩ ದಾಸರಯ್ಯ-
೨೫ ಪಿಂಡದಮಾರಯ್ಯ-
೨೭ ಸುಳ್ಳು ಚನ್ನಯ್ಯಾ
೨೯ ಕೊಪಲಾನಂದಕಾ
೩೧ ಬಿಲ್ಲೇಶಮಯ್ಯ-
೩೩ ಕಿನ್ನರಿಬ್ರಹ್ಮಯ್ಯ-
ಅವರ ಗಣಂಗಳು ೭೭೦.

೨ ಘೋಲುಕಾಂತಯ್ಯ-
೪ ಅಡಪದ ಅಪ್ಪಣ್ಣ-
೬ ಏಕಾಂತರಾಮಯ್ಯ-
೮ ಮರುಳು ಶಂಕರದೇವರು
೧೦ ಬಿಬ್ಬಿಬಾಚಯ್ಯನು.
೧೨ ಹಾವಿನಹಾಳ ಕಾಲಪ್ಪಯ್ಯನು.
೧೪ ದೇವರದಾಸಿಮಯ್ಯ
೧೬ ಕೊಟ್ಟೂರು ಬಸವಯ್ಯ-
೧೮ ಒಬ್ಬಲೇಶ್ವರದ ಕೇತಯ್ಯ-
೨೦ ಮೊಳಿಗೆಯ ಮಾರಯ್ಯ
೨೨ ಘಟ್ಟಿವಾಳಯ್ಯ.
೨೪ ಧರ್ಮಯ್ಯಾ-
೨೬ ಗಾಣದ ಕಣ್ಣಯ್ಯ.
೨೮ ಬರಿಯಸಿಟ
೩೦ ಮರಾಟದ ಖಾಂಕಯ್ಯ.
೩೨ ಖಾಂಡರ ನೆಂಬಯ್ಯ
೩೪ ಕನ್ನದ ಬ್ರಹ್ಮಯ್ಯ.-
ಮರಗಣಂಗಳು ೯೦೦೦೦

೩೫ ಕೋಳೂರ ಕೊಡಗೂಸು-
೩೭ ಬೇಡರ ಕಣ್ಣಯ್ಯ.
೩೯ ಮೆರೆಮಿಂಡಿದೇವಯ್ಯ-
೪೧ ಮಾದುವಯ್ಯ-
೪೩ ದೋಹರದ ಕಕ್ಕಯ್ಯ-
೪೫ ಸುರಿಯ ಚಂದಯ್ಯ-
೪೭ ಬಾಹೂರ ಬ್ರಹ್ಮಯ್ಯ-
೪೯ ಮುತಜೀವಯ್ಯ-
೫೧ ಅದಕಿಮಾರಯ್ಯ
೫೩ ಸಿಂಧು ಬಾಲಾಳ ದೇವಾಂಕಯ್ಯ
೫೫ ಸತ್ಯೇಂದ್ರ ಚೋಳ
೫೭ ಮುಖಣ ಚೋಳ
೫೯ ಅಕ್ಕಮದೇವಿ.
೬೧ ಕಾಮಲದೇವಿ-
೬೩ ಸೊನ್ನಲಾಪುರದ ಸಿದ್ಧರಾಮಯ್ಯನು-
೬೫ ಜಗದೇವಯ್ಯನು-
೬೭ ಗಂಡಬ್ರಹ್ಮಯ್ಯ
೬೯ ದೀಪದ ಕಲಿ ಅರಸು
೭೧ ವೈಜಿದೇವಯ್ಯ-
ಅಮರಗಣಂಗಳು ೭೭೦

೩೬ ಪಶುಪತಿರುದ್ರಯ್ಯ-
೩೮ ಸುಳ್ಳಿನ ಚಿತಾ-
೪೦ ಹರಳಯ್ಯ
೪೨ ಮಾದರಚನ್ನಯ್ಯ-
೪೪ ವೀರಗೊಲ್ಲಯ್ಯ-
೪೬ ಪಡಿಹಾರಿ ಹೋತಣ್ಣ-
೪೮ ಸಾಡ್ಡಳ ಬಾಚರಸರು-
೫೦ ಮೇದಾರ ಕೇತಯ್ಯ
೫೨ ಅಜಗಣದೇವಯ್ಯ-
೫೪ ಕರಿಕಾಲ ಚೋಳ
೫೬ ಮನಸಿ ಚೋಳ-
೫೮ ಡೊಂಬರ ಚವುಡಯ್ಯ-
೬೦ ಗುಗ್ಗುಳ ಧಾವಳಯ್ಯ-
೬೨ ಬಂದಲದೇವಿ-
೬೪ ಕೆಂಬವಿ ಭೋಗಣ-
೬೬ ಮಹಾಪ್ರಭುಯ್ಯ-
೬೮ ವಕ್ಕಲಮುದ್ದಣ್ಣ
೭೦ ಪಾಲಗುಜ್ಜರರಾಯ-
೭೨ ಚೇರರಾಮರಾಯ-
೯೦೯೦೦ ಪುರಗಣಂಗಳು-

೭೩ ಆದಯ್ಯ-
೭೫ ದೋಬಿದಡಪ್ಪ
೭೭ ಅಗ್ಗಣಿಯ ಹೊನ್ನಯ್ಯ-
೭೯ ಉರಿಲಿಂಗಪೆದ್ದಯ್ಯ-
೮೧ ಘೋಟ್ರ ಗಾವಿಕೇರನಯ್ಯ-
೮೩ ಮುಲ್ಲಹುಣಿ
೮೫ ಕೀಲಿರಾಜಯ್ಯ-
೮೭ ಬೆಂಡೆಬಾಮ್ಮನಹಳ್ಳಿ ಪರಪ್ಪಯ್ಯ-
೮೯ ನಿಜಗುಣದೇವಯ್ಯ-
೯೧ ಸಂಕರದ ಬಾಂತಯ್ಯ
೯೩ ನೀಲನೂರ ಸಿಂಬಪ್ಪ-
೯೫ ಸೂಳೆ ಚನ್ನವ್ವ-
೯೭ ನಿಡಗುಣಿಂತ ಸಿಂತ್ರಯ್ಯ-
೯೯ ಕೊಲ್ಲಿಪಾಕಿ ಬಸವಯ್ಯ-
೧೦೧ ಮಂಡಿ ಶರಣರು-
೭೭೦ ಮಂಡಿ ಅಮರಗಣಂಗಳು-

೭೪ ಅಣತಿಯ ಲಕ್ಷ್ಮರಸು-
೭೬ ಅಧಿಸೋವಯ್ಯ-
೭೮ ಗುಗ್ಗುಳ ಧಾವಳಯ್ಯ-
೮೦ ಕುಂಬಾರ ಗುಂಡಯ್ಯ-
೮೨ ಮಲುಹಣ
೮೪ ಕಿಸುವಿ ಬ್ರಹ್ಮಯ್ಯ-
೮೬ ಕಲ್ಲಿಕಲಸದ ಸೋವಯ್ಯ-
೮೮ ಸತ್ತಿಗೆ ಯಿಟ್ಟಪ್ಪಯ್ಯ-
೯೦ ನಿಜಲಿಂಗ ಚಿತ್ರಯ್ಯ-
೯೨ ಸುರಗಿಯ ಚೌಡಯ್ಯ-
೯೪ ಸಾಗ್ಗಪ್ಪ
೯೬ ಹೊತ್ತೆ ಮುಲ್ಲಾಬಾಂತಯ್ಯ
೯೮ ಮಂಡಿಯ ಚವುಡಯ್ಯ-
೧೦೦ ಜೀಪನೂರ ಅಪ್ಪಯ್ಯ-
೭೨ ಮಂಡಿ ಪುರಾತರು-
೯೦೦೦೦ ತೊಂಬತ್ತುಸಾವಿರ ಪುರಗಣಂಗಳು-

ತತ್ಸಮಯಕ್ಕೆ ಬಂದರು ಆಗಲು ಬಸವೇಶ್ವರನು ಅವರವರು ಕನಕಕ್ಕಿಂತ ಬಹಳ ಹರುಷದಿಂದಾ ಅಕ್ಕನಾಗಲಾಂಬಿಕೆಸಹವಾಗಿ ಬಿಜ್ಜಳರಾಯನು ನಿರ್ಮಿಸಿದ ಮಂಟಪದ ಆಲಯಕ್ಕೆ ಬಂದರು ಸಕಲ ಜನರು ಕೂಡಿ ಬಸವೇಶ್ವರಗೆ ನೀಲಾಂಬಿಕೆಯನ್ನು ಲಗ್ನವ ಮಾಡಿದರು- ಸರ್ವಜನರು ಬಹಳ ಹರುಷಿತರಾಗಿ ಅರಸು ತನ್ನ ಅರಮನೆಯ ಹೊಸವಸ್ತ್ರಗಳನ್ನು ತರಿಸಿ ಬಸವೇಶ್ವರನು ಮೊದಲ್ಗೊಂಡು ಸರ್ವಶರಣಗಣಂಗಳಿಗೆ ವಸ್ತ್ರಾಭರಣಂಗಳನ್ನು ಕೊಟ್ಟು ತನ್ನ ಅರಮನೆಗೆ ಹೋದನು- ಇತ್ತಲಾಗಿ ಪ್ರಧಾನನು ತನ್ನ ಅರಮನೆಯಲ್ಲಿ ಸಕಲರನ್ನು ಕೂಡಿಕೊಂಡುಯಿದ್ದನು - ಈ ಪ್ರಕಾರ ಲಗ್ನ ಆರಂಭವು ಸಂಪೂರ್ಣವಾಯಿತು- ನೀಲಾಂಬಿಕೆಯಿಂದ ಬಸವೇಶ್ವರನೂ ನಾಗಲಾಂಬಿಕೆಯೂ ಶರಣಗಣಂಗಳು ಸಹ ಒಂದು ಅರಮನೆಯಲ್ಲಿ ಸುಖದಿಂದಾಯಿರುತಿದ್ದರು -॥

೪ ಸಂಧಿ-

ಬಸವೇಶ್ವರನು ಹೊಸ ಅರಮನೆಯನ್ನು ವಿಸ್ತಾರವಾಗಿ ಕಟ್ಟಿಸಿ ತನ್ನ ಅರಮನೆಯಲ್ಲಿ ಬಂದ ಜನರಿಗೆ ಊಟಕ್ಕೆ ಕರೆದು ಸಕಲರು ಲವರೆಲ್ಲರನ್ನು ಒಂದೇ ಪಙ್ಕ್ತಿಯಲ್ಲಿ ಕೂಡ್ರಿಸಿ ತಾನು ಮೊದಲಾಗಿ ಊಟವ ಮಾಡುತಿದ್ದನು- ದಿನಂಪ್ರತಿಯಲ್ಲಿ ರಾಜಶಾ

ಯ್ಯವನ ಬಿಸುತ್ತಿದ್ದನು - ಸಕಲ ಜಿನ ಚಾರ್ವಾಕರು ಬಸವೇಶ್ವರಗೆ ನಿಂದಿಸಿ ಅಪಹಾಸ್ಯವೂ ತುಂಗಳನ್ನು ಆಡುತ್ತಿದ್ದರು - ಒಂದು ದಿ
ವಸದಲ್ಲಿ ಜೈನರು ಕೂಡಿ - ಅರಸಿಗೆ ಹೇಳಿದರು - ಬಸವಣ್ಣನು ಪಾಪಕುಲದವರು ಬಂದರೂ ಅವರಿಗೆ ಲಿಂಗವನ್ನು ಕಟ್ಟಿ ಊಟವನೂ
ಡುತ್ತಾನೆ - ನಮ್ಮ ದೇವರಿಗೆ ನಮಿಸುವದಿಲ್ಲವು - ಮತ್ತು ನಮಗೆ ದೀನ ಶರಣು ಮಾಡುವದಿಲ್ಲವು - ತನ್ನ ಬೆರಳಿನಲ್ಲಿ ಲಿಂಗಮುದ್ರೆಯುಂಗು
ರವನ್ನಿಟ್ಟಿಹನು - ಅದಕ್ಕೆ ನಮಸ್ಕರಿಸುವನು - ಇಂದು ತಾವು ಪರೀಕ್ಷೆಯ ಮಾಡುವದು ಸಾವುಸುಳ್ಳು ಆಡುವವರಲ್ಲವೆಂದು ಹೇಳಲಾಗಿ ಅರ
ಸನು ತನ್ನ ಜತಿ ಜನರ ಮಾತನ್ನು ಕೇಳಿ ಬಹಳ ಕೋಪದಿಂದ ಪಾಸ ಬೆಂದಲ್ಲಿಯಿದ್ದಂಥಾ ಬಸವೇಶ್ವರನನ್ನು ಕರದು ಹೇಳಿದನು - ನೀನು
ನಿನ್ನ ಬೆರಳಿನಲ್ಲಿ ಇರುವ ಉಂಗುರವ ತೆಗದು ನಮಗೆ ಶರಣು ಮಾಡೆಂದು ಹೇಳಲಾಗಿ ಅದಕ್ಕೆ ಬಸವೇಶ್ವರನು ಅಂದನು - ನನಗೆ ಉ
ಂಗರವನ್ನು ಕೊಟ್ಟಾತನು ದೇವರಾಗಿದ್ದಾನೆ ನೀನು ತೆಗಿಯು ಬೇಕೆಂಬ ಮಾತು ನನಗೆ ಅಪರೂಪವಾಯಿತು - ನಿಮ್ಮ ಉಂಗುರ
ವು ದೇವರಿಂದ ಬರಲಿಲ್ಲವು - ಅಕ್ಕಸಾಲಿಗನು ಮಾಡಿ ಕೊಟ್ಟಿದ್ದದೆಂದು ಹೇಳಲಾಗಿ ಅದಕ್ಕೆ ಅರಸನು ಬಸವೇಶ್ವರನಿಗೆ ಹೇಳಿದ
ನು - ನಿಮ್ಮ ಉಂಗುರವು ದೇವರಿಂದ ಬಂದದ್ದು ಉಂಟಾದರೆ ಅದರ ಮಹಿಮೆಯನ್ನು ನಮಗೆ ತೋರಿಸಬೇಕೆನ್ನಲಾಗಿ ಬಸವೇ
ಶ್ವರನು ತನ್ನ ಮನಸ್ಸಿನಲ್ಲಿ ದೇವರಿಗೆ ಹೇಳಿದ ಮೇಲೆ ತಾನು ಅರಸನಿಗೆ ಹೇಳಿದನು - ತಾವು ಕುಳಿತಿರುವ ಸಿಂಹಾಸನವನ್ನು ಬಿ
ಟ್ಟು ಸ್ವಲ್ಪ ದೂರದಲ್ಲಿ ಕುಳಿತರೆ ಉಂಗುರವ ತೆಗದು ಶರಣು ಮಾಡುವೆನೆಂದು ಹೇಳಲಾಗಿ ಅರಸು ಸಿಂಹಾಸನವ ಬಿಟ್ಟು ಎ
ದುರಿನಲ್ಲಿ ನಿಂತನು ಆಗಲು ಬಸವೇಶ್ವರನು ಉಂಗುರವ ತೆಗದು ಅರಸಗೆ ಕೊಟ್ಟು ಸದರಿಗೆ ಶರಣು ಮಾಡಿದನು - ಆಕ್ಷ
ಣದಲ್ಲಿ ಸದರು ಸಿಂಹಾಸನವು ಉರಿದು ಬೂದಿಯಾಯಿತು - ಈ ಆಶ್ಚರ್ಯವನ್ನು ಅರಸು ನೋಡಿ ಬಸವೇಶ್ವರನ ಕೈ
ಲಿ ಉಂಗುರವನ್ನು ಕೊಟ್ಟು ನೀನು ಮಹಾಪುರುಷನೆಂದು ಸಭೆಯ ಜನರೆಲ್ಲಾ ಕೊಂಡಾಡಿದರು - ಬಸವೇಶ್ವರನು ಮೊ
ದಲು ಪವಾಡ ಮಾಡಿದನು ಮತ್ತು ಜೈನರೆಲ್ಲ ಮುಖಭಂಗ ಮಾಡಿದನು - ॥೧॥ - ಎರಡನೆ ದಿವಸದಲ್ಲಿ ರಾಜಬೀದಿಯಲ್ಲಿ ಬ
ರುವಂಥಾ ವೇಳೆಯಲ್ಲಿ ಬಬ್ರುಹಸ್ತನು ಸತ್ತಿದ್ದನು - ಅವನನ್ನು ಸುಡಲಿಕ್ಕೆ ಹೊಯ್ಯುತ್ತಿದರು - ಆತನ ಹೆಂಡತಿಯು ಬಹಳ ದುಃಖ
ದಿಂದಾ ಅತ್ತುಕೊಳ್ಳುತ್ತಾ ಬಂದು ಬಸವೇಶ್ವರಗೆ ನಮಿಸಿದಳು - ಅದಕ್ಕೆ ಬಸವೇಶ್ವರನು ಮುತ್ತೈದೆಯಾಗಿ ಸ್ಥಿರವಿರುವೆಂದು
ಹೇಳಿದನು - ಆಸ್ತ್ರೀಯು ಅಂದಳು ನನ್ನ ಗಂಡನು ಸತ್ತು ಹೋದನು ಆತನನ್ನು ಸುಡಲಿಕ್ಕೆ ಹೊಯುತ್ತಾರೆ ತಾವು ನನಗೆ ನನ್ನ ಗಂ
ಡನನ್ನು ಜೀವಂತನಾಗ ಮಾಡಿ ಕೊಡಬೇಕು ಯೆಂದು ಬೇಡಿಕೊಂಡಳು ಆಕ್ಷಣದಲ್ಲಿ ಬಸವೇಶ್ವರನು ದೇವರಿಗೆ ಹೇಳಿಕೊಳ್ಳಲಾ
ಗಿ ಆಸ್ತ್ರೀಯ ಗಂಡನು ಬಿದ್ದಿಗೆಯ ಮೇಲೆಯದ್ದು ಕುಳಿತನು - ಆಕ್ಷಣಕ್ಕೆ ಸ್ತ್ರೀಪುರುಷರಿಬ್ಬರು ಬಸವೇಶ್ವರನ ಅರಮ
ನೆಗೆ ಬಂದು ಇರುತ್ತಿದ್ದರು ಅವರಿಗೆ ಲಿಂಗಸ್ಥಾಪನೆ ಮಾಡಿ ತನ್ನಲ್ಲಿ ಇಟ್ಟುಕೊಂಡನು - ೨ - ಈ ಸುದ್ದಿಯನ್ನು ಅರಸನು ಕೇಳಿ
ಬಹಳ ಸಂತೋಷದಿಂದಾ ತಮ್ಮ ಜನರಿಗೆ ಹೇಳಿದನು - ಬಸವೇಶ್ವರನು ಮಹಾಪುರುಷನು ನೀವು ನಮ್ಮ ಜೈನ ಮತದಲ್ಲಿ ಬಂದು
ದೃಷ್ಟಾಂತವನ್ನು ನಾನು ನೋಡುವ ಹಾಗೆ ಇಷ್ಟು ದಿವಸ ತೋರಲಿಲ್ಲವು ಎಂದು ತಮ್ಮ ಆಚಾರ್ಯರಿಗೆ ಹೇಳಲಾಗಿ ಅವರು ಹೇ
ಳಿದರು - ಬಸವೇಶ್ವರನು ಗಾರುಡಿಗಾರನು ಇದ್ದಾನೆ ನಾವು ಬಂದು ಕಟ್ಟಿಗೆಗೊಂಬೆಯ ಮಾಡುತ್ತೇವೆ ಅದನ್ನು ಜೀವವಾಗಿ ಈತ
ನು ಮಾಡಿದರೆ ಈತಗೆ ಶರಣೆಂದು ಹೇಳುತ್ತೇವೆನ್ನಲಾಗಿ ಅದಕ್ಕೆ ಅರಸನು ನಿಮ್ಮ ಮಾತಿನ ಹಾಗೆಯೇ ಮಾಡಿರಿಯೆಂದ
ನು - ಆಕ್ಷಣದಲ್ಲಿ ಕಟ್ಟಿಗೆಗೊಂಬೆಯನ್ನು ಮಾಡಿ ಅದಕ್ಕೆ ವಸ್ತ್ರಗಳನ್ನು ಆಭರಣಗಳನ್ನು ತೊಡಿಸಿ ಕಾವಿವಸ್ತ್ರದಲ್ಲಿ ಲಿಂಗವ ಕಟ್ಟಿ ಅಲ
ಯಕ್ಕೆ ತಂದು ಆರಸನ ಸಭೆಯಲ್ಲಿ ಮೂರ್ತಗೊಳಿಸಿ ಚಾರ್ವಾಕ ಜನವೆಲ್ಲ ಹಾಸ್ಯವ ಮಾಡಿದರು - ಮತ್ತು ಬಸವೇಶ್ವರಗೆ ಹೇಳಿದರು
ಬಾ ಜಂಗಮ ನಿನ್ನ ಮತದಿಂದಾ ಬಂದು ನಮಗೆ ಭಿಕ್ಷವ ಕೊಡುಯೆಂದು ಕೇಳಿದಾಕ್ಷಣಕ್ಕೆ ನಮ್ಮ ಶಿವರು ಬಂದು ಜೀವವನ್ನು
ಕೊಂಡನು ನೀನು ಎಬ್ಬಿಸಿಕೊಂಡು ಹೋಗೆಂದು ಬಸವೇಶ್ವರನಿಗೆ ಕೊಟ್ಟರು - ತನ್ನ ಎದುರಿಗೆ ಈ ತಂತ್ರವ ಮಾಡಿದನ್ನು ಕಂ
ಡು ಬಸವಣ್ಣನು ತನ್ನ ದೇವರಿಗೆ ಮೊರೆಯಿಟ್ಟನು ಆಕ್ಷಣದಲ್ಲೇ ನನ್ನ ಜಂಗಮ ಮೂರ್ತಿಯೇ ನನ್ನ ಮೇಲೆ ದಯವಿಟ್ಟು ಬರಬೇ

ಕೆಂದು ಪಾದಕ್ಕೆ ನಮಿಸಿ ದಾಕ್ಷಿಣಾತ್ಯ ಆಚಾರ್ಯರ ಸಮೀಪಕ್ಕೆ ಬಂದಿತು - ಆ ನಂತರ ದಂಡಿಗೆಯ ಮೇಲೆ ಕುಳ್ಳಿರಿಸಿಕೊಂಡು ತನ್ನ
ಅರಮನೆಗೆ ಕರೆತಂದನು - ಬಹುಜನ ಜಾವಾರಕರು ಮುಖದಂತಿತವಾಗಿ ಬಸವಣ್ಣನ ಆಲಯಕ್ಕೆ ಬಂದು ನೀನೇ ಶರಣನು
ನೀನೇ ಸತ್ಯನು ನೀನೇ ನಿತ್ಯನು ಎಂದು ಕೊಂಡು ವಂದಿಸಿ ನಿನ್ನ ಆಚಾರದಲ್ಲಿ ಬರುವೆವೆಂದು ನಮಿಸಿ ಬೇಡಿಕೊಂಡರು ಆ
ಕ್ಷಣದಲ್ಲಿ ಲಿಂಗವ ಧರಿಸಿ ಒಂದು ಸಾವಿರ ಜನರಿಗೆ ವಿಸಲಿಷ್ಟರು - ॥೨ —

ಶಿವಶರಣರೊಳಗೆ ಒಬ್ಬ ಹೊಲೆಯರಲ್ಲಿ ಜನಿಸಿದ ಶಿವನಾಗಮ್ಮಯ್ಯನೆಂಬ ಒಬ್ಬ ಶರಣನಿದ್ದನು - ಇವನನ್ನು ಬಸವೇಶ್ವರನು ತನ್ನ
ಆಲಯಕ್ಕೆ ಕರೆತಂದು ಗದ್ದಿಗೆಯಲ್ಲಿ ಮೂರ್ತಗೊಳಿಸಿ ಪಾದಪೂಜೆ ಮಾಡುತ್ತಿದ್ದನು - ಈ ಸುದ್ದಿಯನ್ನು ಜಾವಾರಕರು ತಂದು ತ
ಮ್ಮ ಅರಸನಿಗೆ ಹೇಳಿದರು - ಬಸವಣ್ಣನು ನೀಚ ಹೊಲೆಯನ ಕರೆತಂದು ತನ್ನ ಗದ್ದಿಗೆಯಲ್ಲಿ ಕುಳ್ಳಿರಿಸಿ ಪಾದಪೂಜೆ ಮಾಡುತ್ತಾ
ನೆ ಇವನು ಎಲ್ಲಾ ಕುಲದವನೋ ನಮಗೆ ತಿಳಿಯದು ಸ್ವಾಮಿ ನಮ್ಮ ನಗರದಲ್ಲಿ - ನಮ್ಮ ಜನರು ಯಾವತ್ತರು ಲಿಂಗವ ಕಟ್ಟಿ
ಕೊಂಡದ್ದು ತನ್ನ ಮತದಲ್ಲಿ ಆಗಿಯದೆಯೆಂದು ಹೇಳುತ್ತಾನೆ - ನಮ್ಮ ಆಚಾರವನ್ನೆಲ್ಲಾ ಕೆಡಿಸುತ್ತಾನೆ - ಎಲ್ಲಾ ಕುಲವನ್ನು
ತನ್ನೊಳಗೆ ಕೂಡಿಸಿಕೊಳ್ಳುವನು - ನಾವು ಸುಳ್ಳು ಹೇಳುವವರಲ್ಲವು - ಈ ಕ್ಷಣದಲ್ಲಿ ನಿಜವಾಗುವದು - ಅವನು ಹೊಲೆಯನನ್ನು
ಪೂಜಿಸಿ ಅರಮನೆಗೆ ಬಂದಿಹನು - ನೀವು ಕೇಳುವದು ಎಂದು ಹೇಳಿದರು - ಆ ಸಮಯದಲ್ಲಿ ಕೊಂಡೆಮಂಚಣ್ಣನು ಜಲ
ಗದಲ್ಲಿ ಬಸವಣ್ಣ ನಿಂತಿರುವಲ್ಲಿ ನಿಂತುಕೊಂಡು - ಬಸವೇಶ್ವರನೇ ನೀನು ಪೂಜಿಸಿದವನು ತಿರ ಬಹಳ ದೊಡ್ಡ ಶರಣನೋ
ಎಂದು ಕೇಳಿದನು - ಅದಕ್ಕೆ ನಮ್ಮ ಶರಣರ ಗೊಡವೆ ಇನು ತಿಳಿಯುದೀ ಬೇಡ ಅದರ ಎಲ್ಲಾ ಮಹಿಮೆಯನ್ನು ಪನ್ನಗಧರ
ನು ಬಲ್ಲನು ಎಂಬ ಮಾತನ್ನು ಮಂಚಣ್ಣನು ಕೇಳಿ ಬಿಜ್ಜಳರಾಯನಿಗೆ ಹೇಳಿದನು - ನಮ್ಮ ಜೈನ ಆಚಾರ್ಯರು ಹೇಳಿ
ದ ಮಾತು ನಿಜವೆಂದು ಕೇಳಿದಾ ಕ್ಷಣಕ್ಕೆ ಅರಸನು ಕೋಪದಿಂದಾ ಬಸವೇಶ್ವರನ ಕೇಳಿದನು - ನೀವು ದೊಡ್ಡವರು ನೀಚ
ರಾದ ಹೊಲೆಯರನ್ನು ಕರೆತಂದು ನೀವು ನಿಮ್ಮ ಅರಮನೆಯಲ್ಲಿ ಪೂಜೆ ಮಾಡುವದು ಕರವೆ - ನಮ್ಮ ಜಾತಿಯನ್ನೆಲ್ಲಾ ನಿಮ್ಮ
ಕುಲದಲ್ಲಿ ಕೂಡಿಸಿದಿರಿ ನಿಮ್ಮ ಮಾತು ನಮಗೆ ಸರಿಯಾಗಿಯದೆಯೆಂದು ನುಡಿದನು ಅದಕ್ಕೆ ಬಸವನು ಹೇಳಿದನು -
ಅರಸನೇ ಯಿಲ್ಲಿ ಕೇಳು ನಮ್ಮ ಶರಣರಿಗೆ ನೀವು ನಮಿಸುವದಿಲ್ಲವು - ನಮ್ಮ ಶರಣರಿಗೆ ಕುಲವಿಲ್ಲ - ದಾವ ಕುಲವಾದ
ರೇನು ಪರಲೋಕದಲ್ಲಿರುವ ದೇವರ ನಡತೆಯಲ್ಲಿ ನೀತಿಯಲ್ಲಿ ಸತ್ಯದಲ್ಲಿ ಕ್ರಿಯೆಯಲ್ಲಿ ನಡದಾತನೇ ಶಿವಶರಣನು
ಎನ್ನಲಾಗಿ ಅರಸನು ಹೇಳಿದನು - ನಮ್ಮ ಆಚಾರ್ಯರು ಶೀಲವ್ರತ ಮಾಡುವವರು ಅವರಿಗೆ ನೀವು ನಮಿಸುವದಿಲ್ಲವು
ನಿಮ್ಮ ಶರಣರ ಶರೀರದಲ್ಲಿ ಹಾಲು ಉಂಟೇ ನಮ್ಮ ಆಚಾರ್ಯರ ಶರೀರದಲ್ಲಿ ನೀರು ಉಂಟೇ ಎಂದು ಹೇಳಿ ಮಾತಾಡ
ಲಾಗಿ ಬಸವಣ್ಣನು ಹೇಳಿದನು - ನೀವು ನುಡಿದ ಮಾತು ಸತ್ಯವಾಗಲೀ ಬೇಕು ನಿಮ್ಮ ಆಚಾರ್ಯರೆಲ್ಲರನ್ನು ಕರೆಸಿಕೊಳ್ಳಿರಿ
ಎನ್ನಲಾಗಿ ಹಾಗೆಯೇ ಅರಸನು ತಮ್ಮ ಆಚಾರ್ಯರೆಲ್ಲರನ್ನು ಮಂಚಣ್ಣನು ಕೂಡಿಸುವದಕ್ಕೆ ಅಪ್ಪಣೆ ಮಾಡಲಾಗಿ ಬಸವೇ
ಶ್ವರನು ತನ್ನ ಅರಮನೆಗೆ ಬಂದು ಶಿವಶರಣರಿಗೆ ನಮಿಸಿ - ಶಿವನಾಗಮ್ಮಯ್ಯನವರನ್ನು ತನ್ನ ದಂಡಿಗೆಯಲ್ಲಿ ಮೂರ್ತ ಮಾಡಿಸಿ
ಆ ಪುರದಿಂದಾ ನಡಸುತ್ತಾ ಅರಸನ ಓಲಗಕ್ಕೆ ಬರುವ ಸಮಯದಲ್ಲಿ ಆಚಾರ್ಯರೆಲ್ಲಾ ಅರಸಗೆ ಹೇಳಿದರು - ನೀಚ ಹೊಲೆ
ಯವನ್ನು ಪಲ್ಲಕ್ಕಿಯಲ್ಲಿ ಬಸವೇಶ್ವರನು ಸಹಾ ಕೂತು ಕರೆತರುತ್ತಾನೆ ಈ ಆಲಯಕ್ಕೆ ತರಲಾಗದು ಹುಲ್ಲು ಚಾವಡಿಗೆ ಹೋ
ಗಿ ನಿಲ್ಲುವದು ಎಂದು ಹೇಳಲಾಗಿ ಅರಸನು ಹುಲ್ಲು ಚಾವಡಿಯಲ್ಲಿ ಹೋಗಿ ಕುಳಿತನು - ನಿಂತಿರುವ ಜನರು ಬಂದು ಕೂಡಿ
ದರು ಆಗ ಬಸವೇಶ್ವರನು ಶಿವನಾಗಮ್ಮಯ್ಯನನ್ನು ಕರೆತಂದು ತನ್ನ ಕಲ್ಲಿಗಲ್ಲಂದ ಗದ್ದಿಗೆ ಮಾಡಿ ಅವರನ್ನದರಲ್ಲಿ ಕುಳ್ಳಿರಿಸಿದ
ನು ಆಗ ಅರಸನು ಹೇಳಿದನು - ಹೊಲೆಯನಿಗೆ ನಿಮ್ಮ ವಸ್ತ್ರವನ್ನು ಹಾಕಿ ಕುಳ್ಳಿರಿಸುವದಲ್ಲವೆಂದು ಹೇಳಲಾಗಿ ಬಸವಣ್ಣನು
ಉತ್ತರವಾಗಿ ಹೇಳಿದನು ಮೊದಲು ನೀನು ಹೇಳಿದ ಮಾತನ್ನು ನಿಮ್ಮ ಆಚಾರ್ಯರನ್ನು ಕೇಳಬೇಕು ಮತ್ತು ತಮ್ಮ ಶರೀರದಲ್ಲಿಯು

ದಕವು ತಳಿಸಬೇಕು - ನಮ್ಮ ಶಿವಶರಣರು ಶರೀರದಲ್ಲಿ ಹಾಲು ಕರೆಯುತ್ತೇ ಬೇಕು ಈ ಮಹತ್ವವನ್ನು ಮಾಡದವರೇ ಹಾಳಿಯ ಕೆನ್ನಲಾದಿ
ಅರಸು ಹೇಳಿದನು - ನಮ್ಮ ಆಚಾರ್ಯರೇ ನೀವು ನಿಮ್ಮ ಶರೀರದಲ್ಲಿ ನೀರ ತೋರಿಸಬೇಕು - ಶಿವಶರಣರು ತಮ್ಮ ಶರೀರದಲ್ಲಿ ಹಾಲು ಕರೆಸುವ
ರು ಎಂದು ಹೇಳಲಾಗಿ ಆಚಾರ್ಯರು ಹೇಳಿದರು - ಶಿವಶರಣರು ತಮ್ಮ ಶರೀರದಲ್ಲಿ ಹಾಲು ಕರೆಸಿದರೆ ನಾವು ಬಸವೇಶ್ವರನ ಜ
ನರನ್ನ ಕೂಡುವೆವೆಂದು ಹೇಳಿದರು ಆ ಕ್ಷಣದಲ್ಲಿ ಬಸವೇಶ್ವರನು ಸಭೆಯೊಳಗೆ ನಿಂತು ಶಿವನಾಗಮಯ್ಯನವರ ಕೈಯನ್ನು ಹಿಡಿದುಕೊಂ
ಡು ಬೆರಳ ಹಿಂಡಿದನು ಆ ಬೆರಳಿನಿಂದಾ ಹಾಲು ನೆಲಕ್ಕೆ ಬಿದ್ದು ಹರಿಯುತ್ತ ಬಂದು ಹರಿದಾಗ ಸಕಲ ಸರ್ವ ಜನರು ತಮ್ಮ ಅರಸು ಮೊದ
ಲಾಗಿ ಆಶ್ಚರ್ಯವೆಂದು ಶರಣರ ಮಹಿಮೆ ಸತ್ಯವೆಂದು (೫೦೦೦) ಸಾವಿರ ಜನರು ಬಸವೇಶ್ವರನ ಆಲಯಕ್ಕೆ ಬಂದು ಕೂಡಿದರು
ಅವರಿಗೆ ಲಿಂಗಮುದ್ರೆ ಗುರುತು ಮಾಡಿ ತನ್ನವರೊಳಗೆ ಇಟ್ಟುಕೊಂಡನು - ॥ —

೫ - ಮತ್ತೊಬ್ಬ ಶಿವಶರಣನು ಹಾವಿನಹಾಳ ಕಲ್ಲಪ್ಪಯ್ಯ ಎಂಬವನು ತನ್ನ ಮನೆಯಲ್ಲಿ (೭) ನಾಯಿಗಳನ್ನು ಸಾಕಿದನು ಅವನು ತನ್ನ ಕೆಲಸವ ಮಾ
ಡುತ್ತಾ ಶ್ರೀಯವನದ ಸಂತ್ರಾಯಿರುತ್ತಿರಲಾಗಿ ಒಂದು ದಿವಸದಲ್ಲಿ ಅವನ ಮನೆಯ ತೊತ್ತು ಹೊಳೆಗೆ ನೀರು ತರಲಿಕ್ಕೆ ಹೋಗಿಯಿರಲಾಗಿ
ಜೈನರೂ ಬ್ರಾಹ್ಮರೂ ನೀರು ತರುತ್ತಿದ್ದರು - ಈ ತೊತ್ತಿನ ಕೊಡವು ತಗಲು ಅವರಿಗೆ ತಗಲಿತು ಅವರು ಆ ಕೊಡವನ್ನು ಬಡಿದರು - ಆಕೆ
ಯು ಅಂದಳು - ನಾನು ನಮ್ಮ ನೇದಾರಿಯಲ್ಲಿ ಹೋಗುತ್ತಿರಲಾಗಿ ನೀವು ನಿಮ್ಮ ಶರಣರು ನನ್ನನ್ನು ಮುಟ್ಟಿ ಬಡಿದಮೇಲೆ ಅವ್ವನಿಗೆ ಆ
ದೆನು ಎಂದು ಹೇಳಿ ಹೊಳೆಯಲ್ಲಿ ಸ್ನಾನವನ್ನು ಮಾಡಿ ಮನೆಗೆ ಬಂದು ತನ್ನ ಧಣಿಯರಿಗೆ ಹೇಳಿದಳು - ಆ ಮಾತನ್ನು ಸರ್ವಜನರು ಕೂ
ಡಿಕೊಂಡು ಅರಸಿಗೆ ಹೇಳಿದರು - ಹಾವಿನಹಾಳ ಕಲ್ಲಪ್ಪಯ್ಯನ ತೊತ್ತಿನ ಆತನ ಶಾಸ್ತ್ರವು ದಾವುದು ಆತನ ಮನೆಯ ತೊತ್ತು ನಮ್ಮನ್ನು ಶ
ಣಬಿದ್ದಳು ಎನ್ನಲಾಗಿ ಅರಸು ಕೋಪಿಸಿಕೊಂಡು ಶಿವಶರಣನನ್ನು ತರಿಸಿದನು - ಆತನು ಬರುವಾಗ ನಾಯಿಗಳು (೭) ತನ್ನ
ಸಂಗಡ ಬಂದವು ಅವರೆಲ್ಲರು ಕೂಡಿ ಶಾಸ್ತ್ರವನ್ನು ಕೇಳಿದರು ಆ ಕ್ಷಣದಲ್ಲಿ ಕಾಲಪ್ಪಯ್ಯನವರು ಅರಸನೇ ನಾವು ಶಾಸ್ತ್ರವನ್ನು ಅ
ರಿಯೆವು ನಿಮ್ಮ ಜನರು ಬಲ್ಲರೆಂದು ಹೇಳಿದಕ್ಕೆ ಅರಸು ಅಂದನು - ನೀವು ಶಿವಶರಣರು ಬಹಳ ದೊಡ್ಡವರು ನಿಮ್ಮ ಮನೆಯ ತೊತ್ತು
ಗಳು ವೇದವನ್ನೇ ಓದುವರು ಹೀಗಿರಲಾಗಿ ನೀವು ಅರಿಯೆವೆಂಬುವದು ಬಹಳ ಪಾಪವು ಎಂದು ಅರಸನು ಹೇಳಲಾಗಿ
ಆಗ್ಯ ಬಸವೇಶ್ವರನ ಧ್ಯಾನವನ್ನು ಮಾಡಿ ಮನದೊಳಗೆ (೭) ನಾಯಿಗಳಿಗೂ ಉಪದೇಶವನ್ನು ಮಾಡಿ ಹೇಳಿದನು - ಅರಸನೂ
ಆಚಾರ್ಯರೂ ದಾವ ಶಾಸ್ತ್ರವನ್ನು ಕೇಳುವರೋ ನೀವು ಸಕಲವನ್ನು ಓದಿ ಅರ್ಥವ ಮಾಡಿ ಹೇಳಿರಿ ಎಂದು ನಾಯಿಗಳಿಗೆ ಅಪ್ಪಣೆ
ಕೊಡುತ್ತಿರ್ದನು - ಒಂದು ನಾಯಿಯು ನಾಲ್ಕು ವೇದವನ್ನೇ ಹೇಳಿತು - ಒಂದು ನಾಯಿಯು ಅದರ ಅರ್ಥವನ್ನು ಹೇಳಿತು - ಇನ್ನೊ
ಂದು ನಾಯಿಯು ಆರು ಶಾಸ್ತ್ರವನ್ನೆ ಹೇಳಿತು - ಮತ್ತೊಂದು ನಾಯಿಯು ಅವುಗಳ ಅರ್ಥವನ್ನು ಹೇಳಿತು - ಇನ್ನೊಂದು ನಾಯಿ
ಯು ಹದಿನೆಂಟು ಪುರಾಣಂಗಳನ್ನು ಹೇಳಿತು - ಮತ್ತೊಂದು ನಾಯಿಯು ಅವುಗಳ ಅರ್ಥವನ್ನು ಹೇಳಿತು - ೪ - ವೇದವೂ -
- ೬ ಶಾಸ್ತ್ರವೂ - ೧೮ - ಪುರಾಣಗಳು ಇವುಗಳೆಲ್ಲವನ್ನು - ೬ ನಾಯಿಗಳು ಓದಿ ಅವುಗಳ ಅರ್ಥವನ್ನು ಹೇಳಿದವು - ಹೀಗಿರ
ಲಿಕ್ಕಾಗಿ ಬಸವೇಶ್ವರನು ಮಾಡಿದ ಆಶ್ಚರ್ಯವನ್ನು ಅರಸನು ನೋಡಿ ನಿಮ್ಮ ವೇದ ಶಾಸ್ತ್ರ ಪುರಾಣಗಳೆಲ್ಲವನ್ನು ನಾಯಿಗಳು ಓದಿ ಹೇ
ಳಿದವು - ನಿಮ್ಮ ವೇದವಾಕ್ಯವನ್ನು ಕೇಳಲಾಗದು ಇನ್ನು ಇದಕ್ಕೆ ಉಪಾಯವೇನೆಂದು ಅರಸು ಕೇಳಿದಾಕ್ಷಣಕ್ಕೆ ಆಚಾರ್ಯರು ತಮ್ಮ
ಕೈಮುಗಿದು ಹೇಳಿದರು - ಇವರು ಶಿವಶರಣರು ಇವರು ಸತ್ಯರು - ಇವರು ಲೋಕಪಾವನರು ಎಂದು ಹಾವಿನಹಾ
ಳ ಕಾಲಪ್ಪಯ್ಯನವರಿಗೆ ವಂದಿಸಿದರು ಮತ್ತು ಅರಸನು ಕೇಳಿದನು - ನೀವು ನಾಯಿಗಳ ಮುಖದಿಂದಾ ಸಕಲ ಶಾಸ್ತ್ರವನ್ನು
ಹೇಳಿಸಿದಿರಿ ಇವು ಪೂರ್ವಾಗಿ ಕಲಿತವು ಇವು ಅಜ್ಞಾನವಾದವುಗಳಾಗಿವೆಯೆಂದು ಕೇಳಲು - ಅದಕ್ಕೆ ಹೇಳಿದ್ದೇನೆಂದರೆ -

ಶರಣರಾದ್ಯಂತರು ಬಸವೇಶ್ವರನ ಅರಮನೆಯಲ್ಲಿ ಕೂಡಿ ಸಕಲ ಗಣಂಗಳು ಸಹಿತವಾಗಿ ಪೂಜೆಮಾಡಿದರು ಅವರು ಪೂಜೆ
ಮಾಡಿ ಮಿಕ್ಕಿದ ಪ್ರಸಾದವನ್ನು ಈ ನಾಯಿಗಳು ಸೇವಿಸಿದ ಕಾರಣದಿಂದಾ - ಈ ನಾಯಿಗಳಿಗೆ ಸುಜ್ಞಾನ ಕಾರಣವಾಗಿ ಶಿವಶ
ರಣರು ಜಡುವದು ಕೇಳುತ್ತಾ ಘಟ್ಟಮಾಡಿ ಇರುವವು - ಈ ಪ್ರಕಾರವಾದ ಶರಣರ ಮಹತ್ವವನ್ನು ಅರಸನು ನೋಡಿ
ಯೆಂದು ಬಹು ಆಶ್ಚರ್ಯವೆಂದು ಅರಮನೆಗೆ ನಡೆದನು - ಬಸವೇಶ್ವರನು ಇನ್ನು ಮಾಡಿದ ಮಹಿಮೆ ಯೇನೆಂ
ದರೆ - ಊರು ಬಾಜಾರದಲ್ಲಿ ಒಬ್ಬ ಸ್ತ್ರೀಯಳು ಗೋವಳಗಿತ್ತಿಯಳು ಹಾಲು ಮೊಸರು ಮಾರುತ್ತಾ ಮನೆಗೆ ಹಿಡಿದು ಬರಲಾಗಿ ಕೆಸ
ರಿನಲ್ಲಿ ಕಾಲುಜಾರಿ ಬೀಳುವವಳಾದಳು ಆ ಸಮಯದಲ್ಲಿ ಬಸವಾ ನನ್ನ ರಕ್ಷಿಸು ಯೆಂದು ಬೀಳುತ್ತಿರಲಾಗಿ ಅವಳ ಹಿಡಿಗೆ
ಯನು ಅಂತರದಲ್ಲಿ ನಿಂತಿತು ಅವಳು ಬೀಳಲಿಲ್ಲವು - ಆ ಬಸವೇಶ್ವರನು ಸಭಾಮಂತ್ರದಲ್ಲಿ ತನ್ನ ಹಸ್ತವನ್ನು ಮೇಲಕ್ಕೆ ಯತ್ತಿದ
ನು - ಅದನ್ನು ಚಾರ್ವಾಕಮಂಚಣ್ಣನು ನೋಡಿ ಅರಸನಿಗೆ ಹೇಳಿದನು - ಬಸವಣ್ಣನು ನಿಮಗೆ ಕೋಪವಮಾಡಿ ತನ್ನ ಕೈಯನ್ನು
ಯತ್ತುತ್ತಾನೆ - ನೀವು ಅದನ್ನು ವಿಚಾರಿಸುವ ಹಾಗೆ ನೋಡಿ ಯೆಂದು ಅರಿಕೆಮಾಡಿಕೊಳ್ಳಲಾಗಿ ಅರಸು ಅದನ್ನು ನೋಡಿ ಬಸವೇ
ಶ್ವರನೇ ನೀನು ನಿನ್ನ ಕೈಯನ್ನು ಯಾಕೆ ಮೇಲಕ್ಕೆ ಯತ್ತಿದ್ದೆ ಯೆಂದು ಕೇಳಲಾಗಿ ಆತನು ಹೇಳುತ್ತಾನೆ - ಈ ಪೂರವಳಿಗೆ ಒಬ್ಬ
ಗೊಲ್ಲತಿಯು ಹಾಲು ಮಾರುವ ಸಮಯದಲ್ಲಿ ನನ್ನ ಹೆಸರಿನಲ್ಲಿ ಬೀಳುತ್ತಿದ್ದಳು - ಆದಕಾರಣ ಆಕೆಯನ್ನು ಹಿಡಿದಿದ್ದೇನೆ
ಯೆಂದು ಹೇಳಲಾಗಿ ಅದಕ್ಕೆ ಜನರೆಲ್ಲಾ ಹಾಸ್ಯಮಾಡಿದರು ಮತ್ತು ಹೇಳಿದರು - ಇಂಥಾ ಸುಳ್ಳುಮಾತು ನೀನು ಹೇಳಬಾರದು - ಗೊಲ್ಲ
ತಿಯು ಎಲ್ಲಿ ನೀವು ಯಾವಲ್ಲಿ ಯೆಂದು ಹೇಳಿ ಈ ಮಾತು ನಮಗೆ ನಿಜವಾಗುವ ಹಾಗೆ ಆಕೆಯನ್ನು ತೋರಿಸಿದರೆ ನೀನು ಹೇಳಿದ್ದು
ಖರೆಯಿದ್ದೀತೆಂದು ತಿಳಿದೇವು ಯೆನ್ನಲಾಗಿ ಪೂರವಳಿಗಿನ ವಿರತ ಜನರನ್ನು ಕರತರಿಯೆಂದು ಹೇಳಿದನು ಆ ಕ್ಷಣದಲ್ಲಿ - ೧೦೦ -
ಮಂದಿ ಹೆಣ್ಣುಮಕ್ಕಳನ್ನು ನೀರು ತುಂಬಿದ ಕೊಡವನ್ನು ಹೊರಿಸಿ ಅರಸನ ಸಭೆಗೆ ತಂದರು ಬಸವೇಶ್ವರನು ಅವರಿಗೆ ಹೇಳಿದ
ನು - ನೀವು ಒಂದೇ ಮನಸ್ಸಿನಲ್ಲಿ ದೇವರ ಹೆಸರಿನಿಂದಾ ನಿಮ್ಮ ಕೊಡಗಳನ್ನು ಭೂಮಿಗೆ ಚಲ್ಲಿರಿ ಯೆಂದು ಅಪ್ಪಣೆ ಕೊಟ್ಟು ತನ್ನ ದೇ
ವರನ್ನು ನೆನಸಿದನು - ಆ ಸಮಯದಲ್ಲಿ ಒಂದು ಬೆರಳನ್ನು ನೆಗವಿ ಮೇಲಕ್ಕೆ ತೋರಿಸಿದನು ಆ ಕ್ಷಣದಲ್ಲಿ ಆ ಸ್ತ್ರೀಯರು ತಮ್ಮ ತಲೆ
ಯ ಮೇಲಿನ ಕೊಡಗಳನ್ನು ಭೂಮಿಗೆ ಚಲ್ಲಿದರು ಅವೆಲ್ಲಾ ಕೊಡಗಳು ಅಂತರದಲ್ಲಿ ನಿಂತವು - ಬಹಳವಾಗಿ ಪುರದ ಜನರು ಇ
ಂಥಾ ಆಶ್ಚರ್ಯವನ್ನು ನೋಡಿ ಹರುಷದಲ್ಲಿ ಬಸವೇಶ್ವರನ ಕೊಂಡಾಡಿದರು - ೬ - ನೀಲಾಂಬಿಕೆಯೂ ನಾಗಲಾಂಬಿಕೆಯೂ
ಕೂಡಿರುವ ಸಮಯದಲ್ಲಿ ಒಂದು ದಿವಸ ನಾಗಲಾಂಬಿಕೆಯು ಅಂದಳು ನಿನಗೆ ಒಬ್ಬ ಮಗನು ಇರಬೇಕು ದೇವರು ಒ
ಬ್ಬ ಪುತ್ರನನ್ನು ಕೊಟ್ಟರೆ ನಮಗೆ ಬಹಳ ಸಂತೋಷವಾಗಿರುವದೆಂದು ಮಾತಾಡುವ ವ್ಯಾಳ್ಯದಲ್ಲಿ ಬಸವೇಶ್ವರನು ತನ್ನ ಅಕ್ಕ
ನ ಸಂಗಡ ನೀವು ಚಿಂತಿಸುವ ಕೆಲಸವೇನು ಯೆಂದು ಕೇಳಲು ಅಕ್ಕನು ಹೇಳಿದಳು - ನನ್ನ ತಮ್ಮನೇ ನಿನಗೆ ದೇವರು ದಯಮಾಡಿ ಒ
ಬ್ಬ ಮಗನನ್ನು ಕೊಡಬೇಕೆಂಬುವ ಚಿಂತೆ ಬಹಳ ನಮಗುಂಟೆಂದು ಹೇಳಿದಳು ಆ ಕ್ಷಣದಲ್ಲಿ ಬಸವೇಶ್ವರನು ದೇವರಿಗೆ ಚಿತ್ತಮಾ
ಡಿ ಮಂಚದಲ್ಲಿ ಮಲಗಿದ್ದನು - ಆ ವೇಳೆಯಲ್ಲಿ ದೇವದೂತನು ಬಂದು ಹೇಳಿದನು - ಬಸವೇಶ್ವರನೇ ನೀನು ಚಿಂತಿಸಿದ ಕಾರ್ಯವು ದೇವ
ರಿಗೆ ಅರಿಕೆಯಾಗಿ ನಮಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿದನು - ಅದೇನಂದರೆ - ನೀವು ಷೋಡಶ ಕಾರ್ಯಗಳ ಮನೆಯಲ್ಲಿ ನಿಮ
ಗೆ ಪ್ರಸಾದ ಯಾವ ವ್ಯಾಳ್ಯದಲ್ಲಿದ್ದರೆ ಮತ್ತಿದ ಪ್ರಸಾದವನ್ನು ಚೆನ್ನಯ್ಯನವರ ಅಪ್ಪಣೆಯಿಂದಾ ನೀವು ನಡಿಯುವದು ನಿಮ್ಮ ಶರಣರ ನಾ
ಂಗಳ ರಕ್ಷಿಸುವಿಕೆ ಒಬ್ಬ ಪುತ್ರನು ಹುಟ್ಟುವನು ಯಾಕೆಂದರೆ ನಾಗಲಾಂಬಿಕೆಯಲ್ಲಿ ಜನಿಸುವನು - ನಾವು ಹೇಳಿದ ಪ್ರಕಾರ ನೀ
ವು ನಡೆಸುವದೆಂದು ಹೇಳಿ ಅದೃಶ್ಯವಾದರು ಬಸವೇಶ್ವರನು ಈ ಪ್ರಕಾರ ತನ್ನ ಅಕ್ಕ ನಾಗಲಾಂಬಿಕೆಗೂ ದೇವದೂತರು ಈ ಮಾ

ತುಗಳನ್ನು ಹೇಳಿದರು - ಬಸವೇಶ್ವರನೇ ನೀನು ಕಾಶ್ಯಪನವರಮನೆಗೆ ಹೋಗಿ ಅವರಲ್ಲಿ ಪ್ರಸಾದವನ್ನು ಬೇಡಿಕೊಂಬುವರೆಂದು ಹೇಳಲಾಗಿ ಬಸ
ವೇಶ್ವರನು ಕಾಶ್ಯಪನವರಮನೆಗೆ ಹೋಗಿ ಅವರಿಗೆ ನಮಸ್ಕರಿಸಿದನು - ನೀವು ದಯಮಾಡಿ ನನಗೆ ಪ್ರಸಾದವನ್ನು ಕೊಡಬೇಕೆಂದು ಕೇಳಲಾಗಿ ಆ ಶರಣರು
ಹೇಳಿದರು - ನಿನಗೆ ಪರಮೇಶ್ವರನು ನಿಮಗೆ ಹೇಳಿದ ಪ್ರಕಾರ ಹೇಳಿದರೆ ಆ ದೇವ ಪ್ರಕಾರ ಕೊಟ್ಟೇವು ಎಂದು ಹೇಳಿದರು - ಆ ಕಾರಣ ಬಸವೇಶ್ವ
ರನು - ೧೨ - ಮಾಸಗಳ ತನಕ ಅವರ ಸೇವೆಯನ್ನು ಮಾಡಿದನು ಅವರು ಕೊಡಲಿಲ್ಲವು ಬಂದು ದಿವಸ ಅವರು ಉಂಡು ಅನ್ನವನ್ನು ನೀರಿನಿಂದ ತೊಳೆದು ಚಲ್ಲಿ
ದನು ಅದರಲ್ಲಿ ಬಂದು ಅಗುಳು ಇರುವೆಯು ತಕ್ಕೊಂಡು ಹೋಗುತ್ತಿತ್ತು ಆ ಇರುವೆಗೆ ಸಕ್ಕರೆಯನ್ನು ಹಾಕಿ ಆ ಅನ್ನದ ಅಗುಳನ್ನು ತಕ್ಕೊಂಡು ತನ್ನ ವಸ್ತ್ರ
ದಲ್ಲಿ ಕಟ್ಟಿಕೊಂಡು ಅರಮನೆಗೆ ಬಂದನು ಆ ವೇಳೆ ಸಂತೋಷದಿಂದ ಬಸವೇಶ್ವರನು ಸ್ನಾನವನ್ನು ಮಾಡುವದಕ್ಕೆ ವಸ್ತ್ರಗಳ ಕಳೆದಿಟ್ಟು ಹೋಗಲಾ
ಗಿ ಆ ಸಮಯದಲ್ಲಿ ನಾಗಲಾಂಬಿಕೆಯು ತಮ್ಮನ ವಸ್ತ್ರಗಳನ್ನು ನೋಡಲಾಗಿ ಬಂದು ಗಂಟನ್ನು ಕಂಡಳು ಅದನ್ನು ಬಿಚ್ಚಿ ನೋಡಲಾಗಿ ಬಂದು ಅನ್ನದ ಅಗು
ಳು ಇತ್ತು ಅದನ್ನು ತಕ್ಕೊಂಡು ತನ್ನ ಏಕಾಂತ ಕೋಣೆಯಲ್ಲಿ ದೇವರ ಧ್ಯಾನವ ಮಾಡಿದಳು - ಆ ಸಮಯದಲ್ಲಿ ಆ ಪ್ರಸಾದವನ್ನು ಅರಿಯದೆ ತಕ್ಕೊಂಡಳು.
ಆ ವೇಳೆ ಬಸವಣ್ಣನು ಸ್ನಾನವ ಮಾಡಿ ತನ್ನ ಹಿಂದಕ್ಕೆ ಬಂದು ಅಕ್ಕನ ಕರದು ನನ್ನ ವಸ್ತ್ರದಲ್ಲಿ ಬಿನ್ನ ಪ್ರಸಾದವು ಇರುತ್ತದೆ ಅದನ್ನು ನೀನು ತಕ್ಕೊಳ್ಳಬೇ
ಕೆನ್ನಲಾಗಿ ನಾಗಲಾಂಬಿಕೆಯು ಹಾಗೆ ಆಗಲಿ ವಸ್ತ್ರವನ್ನು ತಂದು ಬಸವೇಶ್ವರಗೆ ಕೊಟ್ಟಳು ಅದನ್ನು ನೋಡಲಾಗಿ ಗಂಟು ಬಿಚ್ಚಿ ಇತ್ತು -
ಅದರ ಕಾರಣ ಸಾಬರಿಯಾಗಿ ಭಯದಿಂದ ಕುಳಿತನು ಆ ಕ್ಷಣದಲ್ಲಿ ನಾಗಲಾಂಬಿಕೆಯು ಬಂದು ತಮ್ಮನೇ ನನ್ನ ಮೇಲೆ ದೋಷಗಳಿಗೆ ಇಷ್ಟಿಲ್ಲವು ನಿನ್ನ
ವಸ್ತ್ರದೊಳಗಿನ ಬಂದು ಅನ್ನದ ಅಗುಳು ಇತ್ತು ಅದು ಗುರುಪ್ರಸಾದವೆಂದು ತಕ್ಕೊಂಡೆನು ಎಂದು ಹೇಳಿದ ಮೇಲೆ ಆತನು ಬಹಳ ಸಂತೋಷವಾಯಿ
ತು ದೇವದೂತನು ಹೇಳಿದ ಮಾತು ಸತ್ಯವಾಯಿತು ಎಂದು ಎಲ್ಲಾ ಶರಣರನ್ನು ಕೂಡಿ ಆ ದಮಾತುಗಳೆಲ್ಲವನ್ನು ವಿಸ್ತಾರವಾಗಿ ಹೇಳಿದನು - ಸಕಲ
ಗಣಂಗಳು ಕೇಳಿ ಬಹಳ ಹರುಷರಾಗಿ ದೇವರಿಗೆ ಸ್ತುತಿ ಮಾಡಿದರು - ನಾಗಲಾಂಬಿಕೆಗೆ ದಿನ ದಿನಕ್ಕೆ ಗರ್ಭವು ಸ್ಥಾಪಿತವಾಗಿತು - ೫ ತಿಂಗಳು ಆ
ದ ಮೇಲೆ ಪುರದವಳಗಿನ ಜನರು ಬಹಳ ಅಪಹಾಸ್ಯ ಮಾಡಿದರು - ಹ್ಯಾಗಂದರೆ - ಬಸವೇಶ್ವರನ ಅಕ್ಕನು ಗಂಡ ಇಲ್ಲದೆ ಬಸುರು ಆಗಿದ್ದಾಳೆ ಯಿಂ
ಥಾ ಮಹಿಮೆ ಪುರುಷರಲ್ಲಿ ವ್ಯಭಿಚಾರದ ನಾವು ಯಿರಬಾರದು ಈ ಪರಿಯಾಗಿ ಜನರು ನಿಂದೆ ಮಾಡುತ್ತಿದ್ದರು ಈ ಸುದ್ದಿಯನ್ನು ಮಂಚ
ಣ್ಣನು ಚಾರಕರು ಅರಸಗೆ ಹೇಳಿದರು ಆಗಲು ಅರಸು ಚಿಂತಿಸಿ ತನ್ನ ಮಂತ್ರಿ ಸಮೂಹವನ್ನು ಕರಕೊಂಡು ಬಸವೇಶ್ವರನ ಅರಮನೆಗೆ ಬಂ
ದನು - ಅನುಭವ ಆರಂಭದ ಮಂಟಪದಲ್ಲಿ ಅಕ್ಕನಾಗಲಾಂಬಿಕೆಯೂ ಬಸವೇಶ್ವರನೂ ಶರಣಗಣಂಗಳು ಸಹವಾಗಿ ಕುಳಿತಿದ್ದರು - ಆ
ಸಮಯದಲ್ಲಿ ಅರಸನು ಅಲ್ಲಿಗೆ ಬಂದು ಮೂರ್ತಿ ಮಾಡಿದನು, ಆಗಲು ಬಸವೇಶ್ವರನು ಬಹಳ ಸಂತೋಷನಾಗಿ ಅರಸನಿಗೆ ಉಪಚಾ
ರವನ್ನು ಮಾಡಿ ಮಾತಾಡಿದನು - ತಾವು ದಯಮಾಡಿ ಬಂದದ್ದು ನಮಗೆ ಬಹಳ ಸಂತೋಷವಾಯಿತು - ಮತ್ತು ತಮ್ಮ ಮುಖಗಳು ಸಪ್ಪಗಾಗಿ
ತೋರುತ್ತವೆ ನಮ್ಮ ರಾಜ್ಯಕ್ಕೆ ಮತ್ತೆ ಬ್ಯಾರೆ ಅರಸನು ಬಂದನೋ ಅಥವಾ ಅರಮನೆಯಲ್ಲಿ ಏನಾದರೂ ಭಯವಾಯಿತೋ ಎಂದು ಕೇಳಲಾ
ಗಿ ಅರಸನು ಅಕ್ಕನಾಗಲಾಂಬಿಕೆಯ ಮುಖವನ್ನು ನೋಡಿ ಬಸವನ ಅಕ್ಕನಾದ ಎಲೆ ತಾಯಿಯೇ, ನಿಮ್ಮ ಮುಖವು ಬಸುರಿನ ಚಿನ್ಹವು ತೋ
ರುತ್ತದೆ ಅದರ ದೆಸೆಯಿಂದ ನಮಗೆ ಬಹಳ ಚಿಂತೆ ಪ್ರಾಪ್ತವಾಯಿತು ಎನ್ನಲಾಗಿ ನಾಗಲಾಂಬಿಕೆ ಹೇಳಿದಳು - ಎಲೋ ಅರಸನೇ ಕೇಳು
ನಾನು ಗರ್ಭವತಿಯಾಗಿರುವದು ಸಟಿಯಲ್ಲವು - ನನ್ನ ತಮ್ಮನು ನಿಮ್ಮ ಅರಮನೆಗೆ ಬರುವ ದಾರಿಯಲ್ಲಿ ಡೋಹರ ಕಕ್ಕಯ್ಯನೆಂಬ ಶಿವಶರ
ಣನು ಸಕಲಗಣಂಗಳನ್ನು ಉಣಲಿಕ್ಕೆ ಕರೆದ ಕಾರಣ ಬಸವೇಶ್ವರನು ಮೊದಲಾಗಿ ಹೋಗಬೇಕಾಗಿ ನಿಮ್ಮ ಬಿಜ್ಜಳದಿಂದ ಬಂದು ಕಾಶ್ಯಪ
ನವರ ಸದರಿಗೆ ಹೋಗಲಾಗಿ ಅವರು ಕದವನ್ನು ಮುಚ್ಚಿದ್ದರು - ೧೨ ಮಾಸಗಳ ಪರಿಯಂತರ ಅನ್ನಪ್ರಸಾದಕ್ಕೆ ಸೇವೆಯನ್ನು ಮಾಡಿದನು -
ಈತಗೆ ಅನ್ನಪ್ರಸಾದವನ್ನು ಅವರು ಕೊಡಲಿಲ್ಲವು - ಮುಂಚೆ ಈತಗೆ ದೇವದೂತನು ಹೇಳಿದ ಮಾತನ್ನು ನೆಪ್ಪಿಗೆ ತಂದು ಅವರ ಮನೆ ಬಾ
ಗಿಲನ್ನು ಕಾಯ್ದನು - ಆ ಕಾಲದಲ್ಲಿ ಬಂದು ಇರುವೆಯು ಬಂದು ಅನ್ನದ ಅಗುಳನ್ನು ತರುತ್ತಿತ್ತು ಆ ಇರುವೆಗೆ ಚೀನಿ ಸಕ್ಕರೆ ಹಾಕಿ ಆ ಅನ್ನ
ದ ಅಗುಳನ್ನು ತನ್ನ ವಸ್ತ್ರದಲ್ಲಿ ಕಟ್ಟಿಕೊಂಡು ನಮ್ಮ ಅರಮನೆಗೆ ಬಂದನು - ಆವಾಗ ನಾನು ಆ ವಸ್ತ್ರದಲ್ಲಿ ಕಟ್ಟಿರುವದೇನೆಂದು ಬಿಚ್ಚಿ ಅಗುಳನ್ನು
ತಕ್ಕೊಂಡು ನನ್ನ ಏಕಾಂತದ ಮನೆಯಲ್ಲಿ ದೇವರಿಗೆ ಸ್ತುತಿಯನ್ನು ಮಾಡಿ ಆ ಅನ್ನದ ಅಗುಳನ್ನು ಸೇವಿಸಿದೆನು ಆ ದಿನ ಮೊದಲು ಯಿಂದಿನ
ತನಕ ನನಗೆ ಶರೀರವು ಈ ದವಾಯಿತು ಎಂದು ಹೇಳಿದಳು - ಅದಕ್ಕೆ ಅರಸು ಹೇಳಿದನು - ನೀವು ಹೇಳಿದ ಮಾತಿಗೆ ಜನರು ನಂಬ

ರು ಪುರುಷನಿಲ್ಲದೆ ಗರ್ಭವಾಗುವದು ಸಹಿಮಾತುಯಂದು ನುಡಿಯುತ್ತಾರೆ ನೀವು ವಲ್ಲದೃಷ್ಟಾಂತವನ್ನು ತೋರುವದು ನಿಮ್ಮ ಉದರದಲ್ಲಿರು
ವಂಥಾ ಶಿಶುವು ನುಡಿದರೆ ನಮ್ಮ ಜನ ನಂಬುವದು - ಹೀಗೆಂದು ಅರಸು ನುಡಿಯಲಿಕ್ಕೆ ಉದರದಿಂದಾ ಶಿಶುವು ಧ್ವನಿಗೈದಿತು - ಧ್ವನಿಗೈಯ್ಯ
ಲಿಕ್ಕೆ ನಿಮ್ಮ ಅರಮನೆಯಲ್ಲಿ ಬಹು ಜನರು ಉಂಟು ಯನ್ನಲಾಗಿ - ನಾಗಲಾಂಬಿಕೆಯು ತನ್ನ ಹೊಟ್ಟೆಯನ್ನು ಚಪ್ಪರಿಸಿ ಇಂದಾ ಕೇಳಿ ಚ-
ನ್ನಪ್ರಿಯವನ್ನು ತೋರಿಸಿದಳು - ಕೋಟಿಸೂರ್ಯರ ಪ್ರಭೆಯಂತೆ ಅರಮನೆಯಲ್ಲಾ ಬೆಳಕಾಯಿತು - ಆ ಶಿಶುವು ನುಡಿಯಿತು -
ಅರಸನೇ ನೀನು ಕೇಳು ನಿನ್ನ ಸಲುವಾಗಿ ನಮ್ಮ ಶರಣರು ನಿನ್ನ ನಗರದಲ್ಲಿ ಬಂದಿಹರು ನಿನ್ನ ಮತವನ್ನು ಅಳಿಯಲಿಕ್ಕೆ ಮುಂದೆ ನೀನು
ಯಚ್ಚರಿಕೆಯಲ್ಲಿ ಇರುವದು ಯಂದು ನುಡಿಯಿತು - ಮತ್ತು ನಾಗಲಾಂಬಿಕೆಯು ಉದರವ ಮುಚ್ಚಿದಳು ಮೊದಲು ಇದ್ದ ಹಾಗೆ ಉ
ದರ ನೆಟ್ಟದಾಯಿತು - ಇದು ಕಂಡು ಅರಸನು ನಾಗಲಾಂಬಿಕೆಗೆ ನಮಿಸಿದನು - ನಾನು ನನ್ನ ನಾಲಿಗೆಯಿಂದಾ ದುಷ್ಟ ನುಡಿಗಳನ್ನು ನುಡಿದೆನು
ಆದರೆ ನನ್ನ ತಪ್ಪುಗಳನ್ನು ನೀನು ಕ್ಷಮಿಸಬೇಕೆಂದು ನುಡಿದನು - ಮತ್ತು ಅರಸನು ಸಂತೋಷದಿಂದಾ ಹೇಳಿದನು - ಕಿನ್ನರಿ ಬ್ರಹ್ಮಯ್ಯ
ನೆಂಬ ಶರಣನು ಮೊನ್ನೆ ತ್ರಿಪುರಾಂತಕನೆಂಬುವ ಲಿಂಗನ ಪೂಜಿಸಿದಂಥಾಯಿತು, ಅದು ಯೇನಂದರೆ - ಒಬ್ಬ ನೂಲೆಯು ತನ್ನ
ವಿಟಗಾರಗೆ ಬಂದು ಕುರಿಯನ್ನು ಕೊಂಡು ತಾಯೆಂದು ಹೇಳಿ ಕಳುಹಿಸಿದಳು - ಅವನು ಕುರಿಯನ್ನು ಕೊಂಡು ಕೊಲ್ಲಬೇ
ಕೆಂತಿರುತಿದ್ದನು - ಆ ಕುರಿಯು ಕಿನ್ನರಿಯ ಬ್ರಹ್ಮಯ್ಯನವರ ಬೆನ್ನು ಬಿದ್ದಿತು - ವಿಟಗಾರನು ಬಂದು ನನ್ನ ಕುರಿಯನ್ನು ನೀನು ಕೊಡು
ವದೆಂದು ಕೇಳಿದನು - ಈ ಕುರಿಯನ್ನು ನೀನು ಯನ್ನ ಪ್ರಿಯಕ್ಕೆ ತಂದಿದ್ದೆಯಂದು ಕೇಳಲು ಆತನು ಒಂದು ವರಹಕ್ಕೆ ತಂದಿ
ದ್ದೇನೆಯಂದು ಹೇಳಿದನು - ನಾನು ನಿನಗೆ ಸಾವಿರ ಹೊನ್ನುಗಳ ಕೊಡುವೆನು ನನಗಿದ ಕೊಡುಯಂದು ಕೇಳಲು ವಿಟನು ತನ್ನ ಮ
ನಸ್ಸಿನಲ್ಲಿ ಹರುಷಿತನಾಗಿ ಹೊನ್ನನ್ನು ತಕ್ಕೊಂಡು ಕುರಿಯನ್ನು ಕೊಟ್ಟು ತನ್ನ ನೂಲೆಯ ಮನೆಗೆ ಹೋದನು. ಕುರಿಯು ಯಲ್ಲಿ
ಹದೆಂದು ಸೂಳೆ ಕೇಳಲು - ಕಿನ್ನರಿ ಬ್ರಹ್ಮಯ್ಯನವರು ತಂದ ಕುರಿಯನ್ನು ತಾವು ತಕ್ಕೊಂಡು ಹೊನ್ನ ಸಾವಿರ ಕೊಟ್ಟರುಯಂದು
ಹೇಳಿದನು - ಅವರ ಹೊನ್ನು ಅವರಿಗೆ ಕೊಟ್ಟು ನಮ್ಮ ಕುರಿಯನ್ನು ತರುವದೆಂದು ತಿರಿಗಿ ಕಳುಹಿಸಿದಳು ಆತನು ಬಂ
ದು ನಿಮ್ಮ ಹೊನ್ನನ್ನು ತಕ್ಕೊಳ್ಳಿ ನಮ್ಮ ಕುರಿಯನ್ನು ಬಿಡಿರಿ ಯಂದು ಕೇಳಲು ಶರಣನು ಹೇಳಿದನು - ಯಲೋ ನೀನು ಮೊ
ದಲು ರಾಜಿಯಿಂದಾ ಹೊನ್ನ ತಕ್ಕೊಂಡು ಹೋದಿ ಆದಕಾರಣ ನಾವು ಬಿಡುವದಿಲ್ಲವು ಯಂದು ಹೇಳಲು ವಿಟನು ಸಿಟ್ಟಿಗೆ ಬಂದು
ಆತನನ್ನು ಬಡಿದನು - ಆ ಕ್ಷಣದಲ್ಲಿ ಆತನ ಕೈಯಲ್ಲಿದ್ದ ಆಯುಧವು ಅವನಿಗೆ ತಾಕಿ ವಿಟನ ಶಿರ ಹರಿಯಿತು. ನಾವು ಆತನ ಸನಿ
ಯಕ್ಕೆ ಹೋಗಿ ವಿಚಾರಿಸಿದೆವು ಅದಕ್ಕೆ ಸಾಕ್ಷಿಯು ಬೇಕು. ನೀವು ಯಿಬ್ಬರೇ ಇದ್ದಿರಾ ಯಂದು ಕೇಳಿದೆವು - ಅದಕ್ಕೆ ಶರಣರು
ಅಂದರು - ನಮಗೆ ಸಾಕ್ಷಿಯು ಗುಡಿಯಲ್ಲಿರುವ ಲಿಂಗವೇ ಸಾಕ್ಷಿಯಂದು ಹೇಳಲಿಕ್ಕೆ ಲಿಂಗವು ಧ್ವನಿಗೈದಿತು ಶರಣನು ವಿಟನ ಶಿ
ರವನ್ನು ತಂದು ಕೂಡಿಸಿ ಮಾತಾಡಿಸಿದನು - ವಿಟನು ಜೀವಿಸಿ ನನ್ನದೆ ತಪ್ಪಾಯಿತು ಯಿವರ ಕಡೆ ಯೇನು ಇಲ್ಲವೆಂದು ನುಡಿ
ದನು ಇದನ್ನು ಕಂಡ ನಾವು ಬಹಳ ಸೋಜಿಗಪಟ್ಟೆವು - ಅದಕ್ಕಿಂತ ನಾಗಲಾಂಬಿಕೆಯರು ದೊಡ್ಡವರೆಂದು ಅರಸು ಕ
ಕಥೆಯ ಹೇಳಿದನು - ॥— ॥೧॥ ಸೊನ್ನಲಾಪುರದ ಸಿದ್ಧರಾಮೇಶ್ವರನು ಯಂಬ ಶರ
ಣನು ಮಾಡಿದ್ದನ್ನು ಕೇಳು - ಅವನನ್ನು ಎಲ್ಲಾ ಜನ ಚಾರ್ವಾಕರು ಕೂಡಿ ಶರಣರ ಮಠಕ್ಕೆ ಬಂದು ಕೇಳಿದರು - ಬಸವಣ್ಣನು ಬಹಳ
ದೊಡ್ಡವನು ಲೋಕರಕ್ಷಣೆ ಮಾಡುವ ದೇವರ ಸನ್ನಿಧಿಯಲ್ಲಿ ಇರುವನು ಗಣಂಗಳ ಸನ್ನಿಧಿಯಲ್ಲಿ ಇರುತ್ತಾನೆಂದು ನೀವು ಹೇಳು
ತ್ತೀರಿ - ಈ ವೇಳೆಯಲ್ಲಿ ನಮಗೆ ತೋರಿಯಂದು ಕೇಳಿದರು - ಆ ಕ್ಷಣದಲ್ಲಿ ಬಸವೇಶ್ವರನು ತೋರಿಸುತ್ತೇನೆಂದು ತನ್ನ ಹೊಟ್ಟೆ
ಯನ್ನು ಸೀಳಿ ತೋರಿಸಿದಾಗ ಸರ್ವಜನರು ನೋಡಿ ಬಹಳ ಸಂತೋಷವಾದರು - ಈಗ ನಾವು ನಾಗಲಾಂಬಿಕೆಯನ್ನು ನೋಡಿ
ಬಹಳ ಸಂತೋಷವಾದೆವು ಯಂದು ಪಾದಕ್ಕೆ ನಮಿಸಿ ಅರಸು ತನ್ನ ಸ್ಥಳಕ್ಕೆ ನಡೆದನು - ಇತ್ತಲಾಗಿ ನಾಗಲಾಂಬಿಕೆಯು
ಕೆಲವು ದಿವಸಕ್ಕೆ ಮಗನನ್ನು ಹೆತ್ತಳು ಆತಗೆ ಚನ್ನಬಸವನೆಂದು ಹೆಸರಿಟ್ಟು ಕೊಂಡಾಡಿದರು - ಕೆಲವು ದಿವಸದ ಮೇಲೆ ಆ ನಗರದ
ಲ್ಲಿ ಬೆಂಕಿ ಮಳೆ ಸುರಿದುದು - ಆ ಪ್ರಳಯದಲ್ಲಿ ಮಠದ ಜನರು ಕಿಬಸವೇಶ್ವರಗೆ ಮೊರೆಯಿಟ್ಟರು ಆ ಕ್ಷಣದಲ್ಲಿ ಚನ್ನಬಸವೇಶ್ವರ

ನು ಎಲ್ಲ ನಗರದಲ್ಲಿದ್ದ ಜನರನ್ನು ಕರೆದು ಪಂಚಾಕ್ಷರಿಯನ್ನು ಹಾಕಿ ಮಂದಿಸಿದನು - ಅದರಿಂದ ಜನರನ್ನೆಲ್ಲಾ ಹಿಂಡೆನಂ ಮಂತ್ರ
ಸರ್ವಜನರಿಗೆ ಲಿಂಗವನ್ನಿಟ್ಟು ಗುರುತಂ ಮಾಡಿದನು - ॥೧॥

ಬಸವೇಶ್ವರನ ಮಹತ್ವ - ॥ ವಾಕರಣನೂ ಜಂಗಮನೂ ಖೋಜಾಡಿ - ಮಾಂಸವನ್ನು ಸಾತನು - ಅನ್ಯಾಯವು ಅರಸನ ಬಳಿಗೆ ಬಂದಕಾ
ರಣ ವಿಚಾರ ಮಾಡಿ ಅಷ್ಟ ಜಂಗಮನ ಅಬರು ಅರಸು ತಕ್ಕೊಳ್ಳುತ್ತಿರಲಾಗಿ ಬಸವಣ್ಣನು ತೂಗಿ ಕಾಳುಗಳ ತರಿಸಿ ಆಸ್ಥಾನದಲ್ಲಿ -
೧೦೦ ಮಾಂಸವನ್ನು ಮುಡಿ ಕೊಟ್ಟನು. ಅರಸು ಬಹಳ ಸಂತೋಷವಾದನು - ೨

ತೊಡ್ಡಾಳಯ್ಯ ಎಂಬುವ ಒಬ್ಬ ಶರಣನು ಅರಸನ ಕೋಟೆಯ ಮಾಳಿಗೆಯಲ್ಲಿ ಲೆಖ್ಖವ ಬರೆಯುತ್ತಿದ್ದನು - ಆತನು ಯೇನು ಬರೆಯುತ್ತಿದ್ದನಂ
ದರೆ - ಜಮೆ ಬಂದದ್ದು ಶಿವಃ ಕರ್ಚಾದದ್ದು ಶಿವಃ ಯೆಂದು ಯೆರಡು ಅಕ್ಷರವನ್ನು ಬರೆಯುತ್ತಿದ್ದನು - ಅದನ್ನು ಚಾಡಿಕೋರರು ನೋ
ಡಿ ಅರಸನಿಗೆ ಹೇಳಿದರು - ತೊಡ್ಡಾಳ ದೇವನು ಲಕ್ಷ ರೂಪಾಯಿ ಬಂದರೂ - ಶಿವಃ ಕರ್ಚಾದರೂ ಶಿವಃ ಯೆಂದೇ ಬರೆಯುತ್ತಾ
ನೇ ಹೊರತು ಮತ್ತೇನು ಲೆಖ್ಖ ಬರೆಯುವದಿಲ್ಲ ಆದಕಾರಣ ಅವನು ಬಹು ಹಣಗಳು ಕರ್ಚುಮಾಡಿ ಯಿದ್ದಾನೇವು ಆತನನ್ನು ವಿ
ಚಾರಿಸಬೇಕೆಂದು ಹೇಳಿದರು - ಅರಸನು ಅವನನ್ನು ಕರೆತರಿಸಿ ನನ್ನ ಲೆಖ್ಖವನ್ನು ಕಾಣಿಯೆಂದು ಹೇಳಿದನು ಆತನು ಲೆಖ್ಖದ ಪುಸ್ತಕ
ವನ್ನು ತಂದು ತೋರಿಸಲಾಗಿ ಅರಸನದನ್ನು ನೋಡಿ ಯಿದೇನು ನೀನು ಬರೆದದ್ದು ಯೆನ್ನಲಾಗಿ ಅದಕ್ಕೆ ಶರಣನು ಅಂದನು ನೀ
ನು ನನಗೆ ಹತ್ತು ಲಕ್ಷ ವರಹಗಳನ್ನು ಕೊಟ್ಟಿದ್ದೀ ನಿನ್ನ ದ್ರವ್ಯವ ನೋಡಿಕೋ ತಾಡು ಯೆನ್ನಲಾಗಿ ಅರಸನು ತನ್ನ ಸಕಲ ಮಂತ್ರಿಗಳನ್ನು
ಕರಕೊಂಡು ಹೋಗಿ ಕೋಣೆಯಲ್ಲಿ ಯಿಪ್ಪತ್ತು ಲಕ್ಷ ಹೊನ್ನುಗಳ ಲೆಖ್ಖವ ಮಾಡಲಾಗಿ ಅರಸನಿಗೆ ಕೋಪನಾದಿಂದಾ ಬಹಳ ಹ
ರುಷವಾಗಿ ಬಸವೇಶ್ವರನಿಗೆ ಅಂದನು - ಬಸವೇಶ್ವರನೇ ನಿಮ್ಮ ಶಿವಶರಣರು ದೊಡ್ಡ ಮಹಿಮೆಯುಳ್ಳವರೆಂದು ಸಭೆಯ
ಲ್ಲಿ ಕೊಂಡಾಡಿದನು - ೩ - ಶಂಕರದಾಸ್ಸಿಮಯ್ಯನೆಂಬುವ ಶರಣನು ದೇವರಿಗೆ ಸ್ತುತಿಯನ್ನು ಮಾಡಲು ದೇವರು ಪ್ರತ್ಯಕ್ಷವಾದ
ನು ಆಗ ದೇವರು ಅವನ ಸಂಗಡ ಹೇಳಿದನು. ಯೆಲೋ ಭಕ್ತ ನಿನ್ನ ಭಕ್ತಿಗೆ ಮೆಚ್ಚಿದೆನು ನಿನಗೇನು ಬೇಕು ಯೆಂದು ಕೇಳಿದ
ನು ಅದಕ್ಕೆ ಅವನು ಬೇಡಿದನು - ನಾನು ಅರುವೆಯನ್ನು ಹೊಲಿಯಬೇಕು ವ ತೊಂದು ಕಣ್ಣು ನನಗೆ ದಯಮಾಡು ಯೆನ್ನಲಾಗಿ ಪರ
ಮೇಶ್ವರನು ನಕ್ಕು ಮೊದಲಿದ್ದ ಯೆರಡು ಕಣ್ಣುಗಳ ಹೊರತು ಮತ್ತೊಂದು ಕಣ್ಣು ನಿನಗೆ ಕೊಟ್ಟೆನು ಯೆಂದು ಹೇಳಿ ಅದೃಶ್ಯವಾದನು - ಆತನಿ
ಗೆ - ೩ ಕಣ್ಣುಗಳಿದ್ದಕಾರಣ ಜೈನ ಚಾವಾಕರು ಬಲು ಹಾಸ್ಯಮಾಡಿ ಕೇಳಿದರು ನಿಮಗೆ - ೩ ಕಣ್ಣುಗಳುಂಟು. ಮೂರರಲ್ಲಿ ಒಂದಕ್ಕೆ ಅಗ್ನಿ ಕಣ್ಣೆ
ಯೆಂದು ಹೆಸರಾಗಿಯದೆ ಅದಕ್ಕೆ ಯೇನಾದರೂ ಮಹಿಮೆ ವುಂಟೇ ಯೆಂದು ಕೇಳಿದಾಕ್ಷಣಕ್ಕೆ ಯೆಲ್ಲಾ ಜೈನರನ್ನು ಕೂಡಿಸಿಕೊಂಡು
ತನ್ನ ಅಗ್ನಿ ಕಣ್ಣನ್ನು ತೆರೆದು ನೋಡಲಾಗಿ ಪೂರಲ್ಲಾ ಬೆಂಕಿ ಹತ್ತಿ ಸುಟ್ಟು ಹೋಯಿತು ಬಹಳ ಜೈನರು ಶರಣಾಗಿ ನಮಿಸಿ ಬೇಡಿಕೊ
ಂಡರು - ಓ ಶರಣನೇ ನೀನೇ ನಮ್ಮನ್ನು ಸಂರಕ್ಷಿಸಬೇಕೆಂದು ಬಂದವರನ್ನು ಬಸವೇಶ್ವರನ ಆಲಯಕ್ಕೆ ತಂದು ಲಿಂಗವ ಧರಿಸಿ
ಗುರುತಂ ಮಾಡಿ ತನ್ನ ಮಂದಿಗಳೊಳಗೆ ಯಿಟ್ಟುಕೊಂಡನು - ೪ - ಈ ಪ್ರಕಾರ ಶಂಕರದಾಸ್ಸಿಮಯ್ಯಗಳು ಮಹಿಮೆಯ ಮಾ
ಡಿದರು - ಇದಲ್ಲದೆ ದೇವರದಾಸ್ಸಿಮಯ್ಯನವರು ಮಾಡಿದ್ದೇನಂದರೆ ಯಿವರು ವಸ್ತ್ರಗಳನ್ನು ನೆಯ್ಯುತ್ತಿದ್ದರು - ಅವನು ದೇವರನ್ನು
ಬಹಳವಾಗಿ ಬೇಡಿಕೊಳ್ಳಲಾಗಿ ಪರಮೇಶ್ವರನು ಅವನಿಗೆ ಪ್ರತ್ಯಕ್ಷವಾಗಿ - ನೀ ಬೇಡುವದನ್ನು ಬೇಡು ಅದನ್ನು ನಾನು ಕೊಡು
ವೆನೆಂದು ಹೇಳಲಾಗಿ. ತಾವು ನಿಧಿಯನ್ನು ನನಗೆ ಕೊಡುವದೆಂದು ಕೇಳಿದನು - ಅಷ್ಟಕ್ಕೆ ದೇವರು ದಯಮಾಡಿದನು. ಮೇಲಾ
ಗಿ ದೇವರು ಅವನ ಸಂಗಡ ಹೇಳಿದ್ದೇನಂದರೆ - ನೀನು ನಂದೀ ಧ್ವಜವನ್ನು ನೇದು ಅದರಲ್ಲಿ ಪ್ರಣವದ ಅಕ್ಷರಗಳನ್ನು ಬರೆಸಬೇಕು ಅ
ದು ಬಸವನ ಶರಣರ ಮುಂದೆ ನಡಿಯಬೇಕು ಮುಂದೆ ಶರಣರೆಲ್ಲರು ಕಲ್ಯಾಣವನ್ನು ಬಿಟ್ಟು ಅದರ ಮೇಲೆ ಯೇಳು ನೂ
ರಾ ಯೆಂಬತ್ತು ವರುಷದಲ್ಲಿ ನನ್ನ ಮಕ್ಕಳು ಬಂದು ಧ್ವಜವನ್ನು ಗ್ರಾಮ ಗ್ರಾಮಕ್ಕೆ ಮೆರೆಸಿ ಸತ್ಯಮಾರ್ಗವನ್ನು ನೆಲೆಗೊಳಿಸಿ ಯೆಲ್ಲಾ
ಶಾಸ್ತ್ರಗಳನ್ನು ಗಾಳಿಗೆ ತೂರಿ ಧ್ವಜವನ್ನು ತಮ್ಮ ಸ್ಥಳದಲ್ಲಿ ನಿಲ್ಲಿಸಿ ಪಾಪವೆಲ್ಲವೂ ಹೋಗಿ ಪುಣ್ಯವು ಬೆಳದು ಕುಲವನ್ನೆಲ್ಲಾ ಧ್ವಜದ ಸಮೀ
ಪದಲ್ಲಿ ಕಲ್ಲಿಸಿ ಜ್ಞಾನಮಾರ್ಗ ತೋರಿಸಿ ಒಂದೇ ದೊಡ್ಡ ಮಾರ್ಗವಾಗಿ ನಡಿಸುವರು - ನೀನು ಈ ಸೂಚನೆಯನ್ನು ಅದರಲ್ಲಿ ಬ
ರದು ನೇಯ್ಯಬೇಕು ಯೆಂದು ವಿಸ್ತಾರವಾಗಿ ಬರದು ತೋರಿಸಿ ಅದೃಶ್ಯವಾದನು - ಇವನು ಬಹು ಬಡವನಾಗಿದ್ದರೂ ಬಸವೇ

ಕ್ಷೇತ್ರನ ಮಠಕ್ಕೆ ಬಂದು ನನ್ನಲ್ಲಿ ಊಟಕ್ಕೆ ಎಲ್ಲಾ ಗಣಂಗಳು ಬರಬೇಕೆಂದು ಹೇಳಿದನು - ಅದಕ್ಕೆ ಬಸವಣ್ಣನು ಅಂದನು - ನೀನು ಬರುವನು ನಮ್ಮಲ್ಲಿರುವ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಯಿದ್ದಾರೆ - ಇವರೆಲ್ಲರಿಗೂ ನೀಡಿಲು ನಿನಗೆ ಸಾಧ್ಯವಾಗುವದೋ ಯೆಂದು ಕೇಳಲಿಕ್ಕೆ ಆತನು ನೀವು ಮೊದಲಾಗಿ ಸರ್ವಗಣಂಗಳು ಬರಬೇಕೆಂದು ಕರದೊಯ್ದನು ಮನೆಯಲ್ಲಿ ಒಂದು ಪಾವಿನ ಅನ್ನವೂ ಒಂದು ಪಾವಿನ ಕೂಟನ್ನೂ ಮಾಡಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆ ನೀಡಿ ಮಿಕ್ಕಾದ ಅನ್ನವನ್ನು ಪೂರ ದನಗಳಿಗೆ ಹಾಕಿದನು - ಇನ್ನು ಅನ್ನವು ಮಿಕ್ಕಿತು - ಈ ಪ್ರಕಾರದಲ್ಲಿ ಗಣಂಗಳು ಉಂಡರು ಮೂರು ದಿವಸದ ಮೇಲೆ ದೇವರು ಹೇಳಿದ ಪ್ರಕಾರ ನಂದೀಧ್ವಜವನ್ನು ನೆಯ್ಯಲಿಕ್ಕೆ ಆರಂಭ ಮಾಡಿದನು - ಮೂರುವರುಷದತನಕಾ ನೆಯ್ದು ತಯಾರು ಮಾಡಿ ಬಸವಾದಿ ಪ್ರಮಥಗಣಂಗಳಿಗೆ ತೋರಿಸಿದನು - ಆ ಧ್ವಜವು ಯಿಂದಿನ ತನಕಾ ಆ ಕ್ಷೇತ್ರದಲ್ಲಿ ನೆಂಬಣ್ಣನವರ ಮಠದಲ್ಲಿ ಇರುವದು - ಅದು ಯಾವ ಪ್ರಕಾರವೆಂದರೆ ಅದರ ರೂಪವನ್ನು ಸ್ಪಷ್ಟವಾಗಿ ತೋರ ಬರೆಯುತ್ತೇನೆ ನೋಡುವದು -



ಈ ಪ್ರಕಾರ ದೇವರ ದಾಸಿಮಯ್ಯನು ಮಾಡಿ ಇಟ್ಟಿದ್ದಾನೆ - ಮುಂದೆ ಕರ್ತನ ಮಕ್ಕಳು ಬಂದು ಈ ಧ್ವಜವನ್ನು ಯೆತ್ತಿ ಮೆರಸುವರು ಯೆಂದು ಕಾಲಜ್ಞಾನದಲ್ಲಿ ಬರದು ಯಿಟ್ಟಿತು - ೧ — ಘಟ್ಟಿವಾಳಯ್ಯನೆಂಬ ಶರಣನು ಸತ್ಯಸದಾಚಾರನು - ಅವರ ಹೆಂಡತಿಯು ಕೆಲವು ದಿವಸ ಯಿವರ ಸಂಗಡ ಸಾಗಿ ನಡಕೊಳ್ಳುತ್ತಾ ಬಂದಳು - ಮತ್ತ ಕೆಲವು ದಿವಸದ ಮೇಲೆ ವ್ಯಭಿಚಾರ ಮಾಡಲಿಕೆ ಕಲಿತಳು - ಒಂದು ದಿವಸದಲ್ಲಿ ತನ್ನ ವಿಟಗಾರಗೆ ಹೇಳಿದಳು - ಯೆಲಾ ನನ್ನ ಗಂಡನ ಕೊಂದು ನಾನು ನೀನು ಮತ್ತೊಂದು ಊರಲ್ಲಿ ಯಿರಬೇಕೆಂದು ಆಲೋಚನೆ ಮಾಡಿದಳು - ಆ ವಿಟಗಾರನು ಅದಕ್ಕೆ ಆತನನ್ನು ಹ್ಯಾಗೆ ಕೊಲ್ಲಬೇಕೆಂದು ಕೇಳಿದನು - ಅದಕ್ಕವಳು ಹೇಳಿದಳು - ನಾನು ನನ್ನ ತಾರುಮನೆಗೆ ಹೋಗುತ್ತೇನೆ ನೀನು ಸಹ ನನ್ನ ಸಂಗಡ ಬಾ ಯೆಂದು ಎತ್ತು ಬಾಡಿಗೆ ಮಾಡಿ ಕರಕೊಂಡು ಬರುತ್ತೇನೆ ನಾನು ಅವನು ಕೂಡಿಕೊಂಡು ಹೋಗುವ ಸಮಯದಲ್ಲಿ ನೀನು ನನ್ನ ಬಾಡಿಗೆಯತ್ತಿನ ಸಂಗಡ ಬರಬೇಕು-

ಆವಾಗ ಅರಣ್ಯಮಾರ್ಗವಾಗಿ ನಡದು ಹೋಗುತ್ತಾ ದಾರಿಯಲ್ಲಿ ಬಂದು ಬಾವಿಯದೆ ಆ ಬಾವಿಯಲ್ಲಿ ಅವನನ್ನನೂ ಕೆಡಹುವೆನು
ಯಂದು ಕೆಟ್ಟಬುದ್ಧಿಯನ್ನು ಹೇಳಿದಳು- ಅದಕ್ಕೆ ವಿಟಗಾರನು ಒಡಂಬಟ್ಟನು- ಆಮೇಲೆ ತನ್ನ ಗಂಡಗೆ ಹೇಳಿದಳು- ನಾನು
ನನ್ನ ತಂದೆ ತಾಯಿಗಳನ್ನು ನೋಡದೆ ಬಹಳ ದಿವಸವಾಯಿತು- ನೀವು ನಾನು ಹೋಗುವ ನಡಿಯಿರಿಯಂದಳು- ಆ ಶರಣನು ಹೋ
ಗುವೆವೆಂತ ಸಂತೋಷದಿಂದಾ ಹೋಗುವಾಯಿತು ಹೇಳಲು ಹಾಗಾದರೆ ಬಂದು ಬಾಡಿಗೆಯೆತ್ತು ಮಾಡಿರಿಯೆಂದು ಹೇಳಿ
ದಳು ಅದಕ್ಕೆ ಗಂಡನು ನೀನೇ ಮಾಡುವದು ಯಂದು ಹೇಳಿದನು- ಅದೇ ಸಮಯದಲ್ಲಿ ಆಕೆಯ ವಿಟಗಾರನು ಮನೆಯ ಸಮೀ
ಪಕ್ಕೆ ಬಂದು ಯಿದ್ದನು ಅವನನ್ನು ಆಕೆಯು ಕಂಡು ಗಂಡನಿಗೆ ಹೇಳಿ ಬಾಡಿಗೆ ಹೊರಡಲಿಕ್ಕೆ ಯತ್ತನ್ನು ಗೊತ್ತುಮಾಡಿದರು- ಮರು
ದಿವಸ ಮೂವ್ವರು ಕೂಡಿ ಹೋದರು- ಈ ಪ್ರಕಾರ ಅವರು ಮುಂದೆ ಹೇಳಿದ ಅರಣ್ಯದ ಬಾವಿಯ ಸಮೀಪಕ್ಕೆ ಹೋದರು ಆಗಲು
ತನ್ನ ಗಂಡನಿಗೆ ಹೇಳಿದಳು- ಈ ಬಾವಿಯಲ್ಲಿ ನೀರು ತುಂಬಿಕೊಂಡು ಬಾಯೆಂದು ಹೇಳಲಾಗಿ ಹಾಗೆಯೇ ನೀರು ತುಂಬಿಕೊಂ
ಡು ಬರಲಿಕ್ಕೆ ಈತನು ಹೋದನು- ಈಕೆ ತನ್ನ ವಿಟಗಾರನಿಗೆ ಸೂಚನೆ ಮಾಡಿ ಹೇಳಿದಳು- ನೀನು ಆತನನ್ನು ಬಾವಿಯಲ್ಲಿ ನೂಕಿ
ಬಿಟ್ಟು ಬಾಯೆಂದು ಕಳುಹಿದಳು- ಹಾಗೆಯೇ ಆತನು ಹೋಗಿ ನೀರು ತುಂಬುವ ಅವಳ ಗಂಡನನ್ನು ನೀರಿನಲ್ಲಿ ನೂಕಿದನು-
ಆ ಶರಣನು ನೀರಿನಲ್ಲಿ ಮುಳುಗಿ ಕುಂತನು- ಅದರ ಮೇಲೆ ದಾರಿಯಲ್ಲಿ ಬಹಳ ಸಂತೋಷದಿಂದಾ ಮಾತಾಡುತ್ತಾ ತನ್ನ ತಾ
ಮನೆಗೆ ಹೋದಳು ಅಲ್ಲಿ ಮತ್ತೊಬ್ಬ ವಿಟಗಾರನಿದ್ದನು- ಆತನೂ ಈತನೂ ಬಹಳ ಕಲಹ ಮಾಡಿದರು- ಆ ಸಮಯದಲ್ಲಿ ನೀ
ರೊಳಗೆ ಬಿದ್ದ ಶರಣನು ಅದರಿಂದ ಯೆದ್ದು ಬಂದು ಯಿಬ್ಬರ ಪಂಚಾಯತಿಯನ್ನು ನೋಡಿ ವಿಟಗಾರರಿಬ್ಬರಿಗೆ ನೀವು ಸುಮ್ಮನೆ
ಯಿರಿಯೆಂದು ಹೇಳಿ ತನ್ನ ಹೆಂಡತಿಯನ್ನು ಕೈ ಹಿಡಿದು ಬಂದು ಕಾಲನ್ನು ಮೆಟ್ಟಿಕೊಂಡು ಬಂದು ಕಾಲು ಮೇಲಕ್ಕೆ ನಗಹಿ
ಸೀಳಿ- ೨ ಭಾಗ ಮಾಡಿ ಆಮೇಲೆ ಶರಣನು ದೇವರ ಬೇಡಿಕೊಂಡು- ೨ ಹೋಳುಗಳು ಇಬ್ಬರು ಹೆಂಗಸರಾಗ ಮಾಡಿ ಇಬ್ಬರು
ವಿಟಗಾರರಿಗೆ ಕೊಟ್ಟು ಕಲ್ಯಾಣನಗರಕ್ಕೆ ಬಂದನು. ಈ ಮಾತು ಅರಸನು ಕೇಳಿ ಹರುಷಿತನಾದನು- ಮತ್ತು ಸಭೆಯಲ್ಲಾ ಕೊಂಡಾ
ಡಿದವರಾದರು- ಆ ಶರಣರು ಸಾರುತ್ತಿದ್ದರು ಅದೇನಂದರೆ- ಸತ್ತ ಹುಗಿಬಿಕೊಳ್ಳಲಿಕ್ಕಿಲ್ಲ ಸ್ವರ್ಗಕ್ಕೆ ಹೋಗಲಿಕ್ಕಿಲ್ಲ ಯಂಬುವದೇ —
ಆ ಮಾತನ್ನು ಚಾಡಿಕಾರರು ಕೇಳಿ ಅರಸನಿಗೆ ಹೇಳಿದರು- ಅರಸು ಶರಣನ ಕರಸಿ ನೀನು ಸಾರುವ ಮಾತು ನಿನಗೆ ತರವಲ್ಲ- ಯಾಕಂದರೆ-
ನೀನು ಮನುಷ್ಯರ ಶರೀರದವನೇಯನ್ನಲಾಗಿ ತಮ್ಮ ಮನಿಗೆ ಬಂದು ಪ್ರಾಣವನ್ನು ಬಿಟ್ಟನು ಅರಸನಿಗೆ ಯಿದರ ಸುದ್ದಿ ಮುಟ್ಟಿ ಬಸವೇಶ್ವರ ಸಹಿತ
ವಾಗಿ ಬಂದು ಈತನನ್ನು ನೋಡಲು ಜೀವಯಿದ್ದುದಿಲ್ಲವು ಬಂದು ತಾಸು ತನಕಾ ಕುಳಿತರು ಆತ್ಮವು ದೀಪಜ್ಯೋತಿ ಹುಂಡೆ ಆಯಿತು- ಆ ದೀ
ಪಜ್ಯೋತಿ ಹುಂಡೆಯನ್ನು ಬಸವೇಶ್ವರನು ತನ್ನ ಅರಮನೆಗೆ ಒಯಿದನು- ಎಲ್ಲಾ ಗಣಂಗಳು ಧರಿಸಿಕೊಂಡರು ಆ ಹುಂಡೆಯು ಸಹ ಬದು ಹೋಯಿ
ತು- ೧ — ಬಸವೇಶ್ವರನು ಬಂದು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಬಂದೇ ಪಙ್ಕ್ತಿಯಲ್ಲಿ ಉಣ್ಣುವದಕ್ಕೆ ಕುಳಿತಿರಲು
ಆ ಸಮಯದಲ್ಲಿ ಪರಮೇಶ್ವರನು ಹೆಂಡದಗಡಿಗೆ ತೊಗಲಿನ ಪಬ್ಬಿ ಸತ್ತ ನಾಯಿಯನ್ನು ಕೈಯಲ್ಲಿ ಹಿಡಿಕೊಂಡು ಪಙ್ಕ್ತಿ ಒಳಗೆ ಬರಲಾಗಿ ಸ
ಕಲರೂ ಯಿವನನ್ನು ನೋಡಿ ಬಹಳ ಕೋಪದಿಂದಾ ಬಸವೇಶ್ವರಗೆ ಹೇಳಲಾಗಿ ಆತನು ಬಂದು ಈ ಮೂರ್ತಿಯನ್ನು ನೋಡಿ ನಮಸ್ಕಾರ
ಮಾಡಿದನು- ಅದನ್ನು ಕಂಡು ಸಕಲರೂ ಪಙ್ಕ್ತಿಯನ್ನು ಬಿಟ್ಟು ಹೋದರು ಆ ಸಮಯದಲ್ಲಿ ತ್ರಿಪುರಾಂತಕ ಕೆರಿಯಲ್ಲಿ ಹೋಗಿ ತಮ್ಮ ಲಿಂ
ಗಗಳನ್ನು ನೋಡಿಕೊಳ್ಳಲಿಕ್ಕೆ ಒಬ್ಬರಿಗೂ ಲಿಂಗವಿದ್ದಿಲ್ಲವು- ಅವರು ಭಯಪಟ್ಟು ಬಸವೇಶ್ವರನ ಬಳಿಗೆ ಬಂದರು- ತಮ್ಮಲ್ಲಿ ಆದ ವರ್ತಮಾ
ನವೆಲ್ಲಾ ಹೇಳಲು ಬಸವೇಶ್ವರನು ಹೇಳಿದನು- ನೀವು ನಿಮ್ಮ ನಿಜವನ್ನು ಬಿಟ್ಟರಿ ನಿಮಗೆ ಲಿಂಗ ದೊರಿಯಲಿಕ್ಕಿಲ್ಲಾ ನೀವು ಮಠದಲ್ಲಿ
ಅರಸತ್ವವನ್ನು ಮಾಡಿಕೊಂಡು ನಿಮ್ಮ ನೀತಿ ಪ್ರಮಾಣವಾಗಿಯಿರಬೇಕು ಯಂದು ಬಹಳ ಪ್ರಕಾರ ಹೇಳಿದನು. ಮತ್ತು ಹೇಳಿದನು-
ನಾವು ಯೋಳನೂರಾಯಂಬತ್ತಕ್ಕೆ ಬರುವೆವು- ನೀವು ನೋಡಿಕೊಂಡು ಯಿರುವದೆಂದು ಅಪ್ಪಣೆ ಕೊಟ್ಟು ಕಳುಹಿದನು. ಅವರು
ಆ ದೇಶದಲ್ಲಿ ಇಂದಿನವರೆಗೂ ಸೇವೆಮಾಡುತ್ತಾಯಿರುವರು- ೧ — ॥ ಹರಳಯ್ಯನವರ ಮಹಿಮೆಯೇನಂದರೆ- ಹರಳಯ್ಯ
ನವರು ತಮ್ಮ ಚಕ್ರಿಯಿಂದಾ ತಮ್ಮ ತೊಡೆಯ ತೊಗಲನ್ನು ಕೊಯಿದು ಬಸವೇಶ್ವರಗೆ ಪಾದರಕ್ಷೆಯನ್ನು ನಿಯಮಿಸಿ ಬಸವೇಶ್ವರನ ಆ
ಲಯಕ್ಕೆ ತರುತ್ತಾ ಇರಲಾಗಿ ದಾರಿಯಲ್ಲಿ ಮಾದು ಪ್ರಧಾನಿಯು ಹರಳಯ್ಯನವರನ್ನು ಕಂಡು ಶರಣಾಂ ಮಾಡಿ ನಿಮ್ಮ ಕೈಯಲ್ಲಿರುವ.

ಪಾದರಕ್ಷೆಯು ಬಹಳ ಚಂದವಾಗಿ ಕಾಣುತ್ತವೆ ಅವನ್ನು ನಾವು ನೋಡುತ್ತೇವೆ ಕೊಡಿಯೆಂದು ಕೇಳಲು ಅದಕ್ಕೆ ಶರಣನು ಅಂದನು- ಇ
ವು ನಿನಗೆ ಸಲ್ಲುವಂತಾವಲ್ಲ- ನೀನು ನೋಡಿ ಮಾಡುವದೇನು ಯೆಂದು ಹೇಳಲಾಗಿ ಪ್ರಧಾನಿಯು ಸಿಟ್ಟಿಗೆ ಬಂದು ತನ್ನ ಆಳುಗಳ ಕೈಯಿ
ಂದ ಕಸುಕೊಂಡು ತನ್ನ ಕಾಲಲ್ಲಿ ಮೆಟ್ಟಿ ನೋಡಲು ಆತಗೆ ಆ ಕ್ಷಣದಲ್ಲಿ ಮೈವಳಗೆ ಜ್ವಾಲೆ ಹತ್ತಿ ನೆಲಕ್ಕೆ ಬಿದ್ದನು- ಅದರ ಮೇಲೆ ಪಾದರ
ಕ್ಷೆಯನ್ನು ಹರಳೈಯನವರು ತೆಕ್ಕೊಂಡು ಬಸವೇಶ್ವರನ ಅರಮನೆಗೆ ಬಂದು ಕೊಡಲಾಗಿ- ಶರಣನು ತಂದ ಪಾದರಕ್ಷೆಯನ್ನು
ಪರೀಕ್ಷೆ ನೋಡಬೇಕಾಗಿ ಬಸವನಿಂದಾ ಕೇಳಿದನು- ನಿಮ್ಮ ಚರ್ಮವನ್ನು ನನ್ನ ಪಾದದಲ್ಲಿ ಮೆಟ್ಟಸಬೇಕೆಂದು ತಂದು ಇಟ್ಟೀರಿ- ನಾನು
ಮೆಟ್ಟಿಕೆ ಬಂದವನಲ್ಲಾ ಪರಲೋಕದರಸು ನನಗೆ ಹೇಳಿರುವದೇನಂದರೆ ಸಮಸ್ತ ಗಣಂಗಳು ಶಿವಶರಣರನು ಸೇವಿಸುವದಕ್ಕೆ
ನನ್ನನ್ನು ಕಳುಹಿಸಿದನು. ಆದರೆ ನೀವು ನನ್ನ ಮೇಲೆ ಭಾರ ಹಾಕುವದಕ್ಕೆ ತಂದಿದ್ದೀರಿ ಪರಮೇಶ್ವರನು ಯೇನು ತಂತ್ರ ಮಾಡುತ್ತಾನೋ
ಅದು ನನಗೆ ತಿಳಿಯುವದಿಲ್ಲಾ ಎಂದು ಆ ಪಾದರಕ್ಷೆಯನ್ನು ತೆಕ್ಕೊಂಡು ತನ್ನ ಸಿಂಹಾಸನದಲ್ಲಿ ಇಟ್ಟುಕೊಂಡನು- ಅದರ ತರು
ವಾಯ ಶರಣನು ತನ್ನ ಗೃಹಕ್ಕೆ ಹೋದನು- ಇತ್ತಲಾಗಿ ಮಾದುವ ಪ್ರಧಾನನ ಮೈಯಿಗೆ ಜ್ವಾಲೆ ಹತ್ತಿ ಕೆಟ್ಟ ಹುಣ್ಣುಗಳು ಆಗಿ ಅವು
ಗಳಲ್ಲಿ ಹುಳುವುಗಳು ಬಿದ್ದು ಬಹು ದುರ್ಗಂಧವಾಗಿ ಸಾಯುವದಕ್ಕೆ ಪ್ರಾಪ್ತವಾಗಿ ಅದರಿಂದ ಅರಮನೆ ಬಿಟ್ಟು ಹೊರಗೊಂದು ಕೋಣೆ
ಯಲ್ಲಿ ಹಾಕಿದರು ಆತಗೇನು ಸ್ಮರಣೆಯು ಇಲ್ಲದೆ ದಿನದಿನಕ್ಕೆ ಶರೀರ ನಾಶನವಾಗುತ್ತಾ ಬರಲಾಗಿ ಎಲ್ಲರೂ ಆತನ ಸಮೀಪಕ್ಕೆ ಬ
ರಲಾರದೆ ಹೋದರು- ಒಬ್ಬ ತೊತ್ತನ್ನು ಮಾತ್ರ ಆ ವೇಳೆಯಲ್ಲಿ ಅವನ ಬಳಿಗೆ ಇಟ್ಟರು- ಆಕೆಯು ನೀರು ತರುವದಕ್ಕೆ ಹೋಗುವದಾ
ರಿಯಲ್ಲಿರುವ ಹರಳೈಯನವರ ಮನೆಯಲ್ಲಿ ದೇವರ ಶಾಸ್ತ್ರವನ್ನು ಕೇಳುತ್ತಾ ನಿಂತಳು- ಆ ದಕಾರಣ ನೀರಿನ ಹಂಬಲ ಮರ
ತಳು- ಸಾಯಂಕಾಲದಲ್ಲಿ ಕತ್ತಲಾದ ಕಾರಣ ಆಕೆಯು ಬಹಳ ಚಿಂತೆಯ ಮಾಡಲು ಆ ಶರಣನ ಮನೆಯಲ್ಲಿ ತೊಗಲು ನೆನೆ
ಹಾಕಿದ್ದ ನೀರು ನಿಂತಿದ್ದದ್ದು ಆ ನೀರನ್ನು ತುಂಬಿಕೊಂಡು ಬಂದಳು- ಅದೇ ಸಮಯದಲ್ಲಿ ಪ್ರಧಾನನಿಗೆ ಹೊಟ್ಟೆಯೊಳಗೆ ದಾಹವಾಗಿ
ಶ್ವಾಸವು ನಿಂತಿತು ಆಗ ಆ ತೊತ್ತು ತಾನು ತಂದ ನೀರನ್ನು ಆತನ ಆತನ ಬಾಯಲ್ಲಿ ಹನಿಸಿದಳು- ಮತ್ತು ಅದೇ ನೀರಿನಿಂದಾ ಅವ
ನ ಮೈಯನೆಲ್ಲಾ ತೊಳೆದಳು ಅದರ ಮೇಲೆ ಅವನು ಎಚ್ಚತ್ತಾಗಿ ನಿದ್ರೆ ಹೋಗಿ ಉದಯದಲ್ಲಿ ಪ್ರಧಾನಿಯು ಎದ್ದು ನೋಡಲಾಗಿ ತ
ನ್ನ ಶರೀರವು ಪೂರ್ವಕ್ಕಿಂತ ಶುದ್ಧ ಪ್ರಕಾರ ಸ್ವಸ್ಥವಾದೆನೆಂದು ತಿಳಕೊಂಡನು- ಆ ಮೇಲೆ ಜನರು ಮಂತ್ರಿಯು ಸತ್ತನೋ ಬದ್ದಾನೋ
ಯೆಂದು ಕೋಣೆಯ ಕದವ ತೆಗೆದು ನೋಡಲಾಗಿ ಪ್ರಧಾನಿ ಸ್ವಸ್ಥವಾಗಿರುವದನ್ನು ಕಂಡು ಬಹಳ ಆಶ್ಚರ್ಯವಾದರೂ- ಆ ಮೇ
ಲೆ ತನ್ನ ತೊತ್ತನ್ನು ಏಕಾಂತವಾಗಿ ಕೇಳಿದ ಮೇಲೆ ವರ್ತಮಾನ ತಿಳಕೊಂಡು ಪ್ರಧಾನನು ಸಂತೋಷವಾಗಿ ಹರಳೈಯ್ಯನಿಗೆ ಕೊಂ
ಡಾಡುತ್ತಾ ಆತನ ಮನೆಗೆ ಹೋದನು- ಆ ಕ್ಷಣದಲ್ಲಿ ಹರಳೈಯ್ಯನು ಪ್ರಧಾನನನ್ನು ಕಂಡು ಶರಣು ಮಾಡಿ ನೀವು ದೊಡ್ಡವರು ಬ
ಡವನ ಮನೆಗೆ ಬಂದ ಕಾರಣವೇನೆಂದು ಕೇಳಲಾಗಿ ಪ್ರಧಾನನು ಹೇಳಿದನು- ನೀವೇ ದೊಡ್ಡವರು ನಾನು ಅರಿಯದೆ ನೀವು ತಂದ
ಪಾದರಕ್ಷೆಯನ್ನು ಮೆಟ್ಟಿದ ಕಾರಣ ನನಗೆ ದೇವರು ರೋಗವನ್ನು ತಂದಿಟ್ಟನು- ನಮ್ಮ ಮನೆಯ ತೊತ್ತು ನಿನ್ನೆ ದಿವಸದಲ್ಲಿ ತಮ್ಮ
ಮನೆಯ ನೀರನ್ನು ತಂದು ನನಗೆ ಅಭಿಷೇಕ ಮಾಡಿದ ಕಾರಣ ನಾನು ಸ್ವಸ್ಥವಾದೆನು ತಮ್ಮ ಮನೆಯ ನೀರು ನನ್ನನ್ನು ಪಾವ
ನ ಮಾಡಿತು ಈಗ ತಾವು ತಮ್ಮ ಮನೆಯ ಅನ್ನವನ್ನು ನನಗೆ ದಯಮಾಡಿ ನೀಡುವದೆಂದು ಬಿನ್ನಹ ಮಾಡಿಕೊಂಡನು- ಮೇಲಾಗಿ
ನನ್ನ ಮಗಳನ್ನು ತಮ್ಮ ಮಗನಿಗೆ ಕೊಡುವೆನೆಂದು ಹೇಳಿದನು- ಅದಕ್ಕೆ ಶರಣನಂದನು- ನಾವು ಹೊರಗಿನವರು ತಾವು ಒಳಗಿನವ
ರು ನಿಮ್ಮ ಮನೆಯ ಹೆಣ್ಣುಗಳು ನಮಗೆ ಸಲ್ಲುವವೇ ಯೆಂದು ಬಹಳ ಪ್ರಕಾರ ಶರಣನು ಬೇಡಾ ಎನ್ನಲು ಕೇಳದೆ ತನ್ನ ಮ
ಗಳನ್ನು ತಂದು ಶರಣನ ಮಗನಿಗೆ ಮದುವೆ ಮಾಡಿಕೊಟ್ಟನು- ಅವರಿಬ್ಬರು ಒಂದಾಗಿರಲಿಕ್ಕೆ- ಈ ಸುದ್ದಿಯನ್ನು ಚಾಡಿಕಾರರು
ಅರಸನಿಗೆ ಹೇಳಿದರು- ಹರಳೈಯನೆಂಬವನಿಗೆ ನಿಮ್ಮ ಕುಲದ ಹೆಣ್ಣನ್ನು ಪ್ರಧಾನನು ಕೊಟ್ಟು ಲಗ್ನ ಮಾಡಿದನು- ನೀವು ಹಾ
ಯಿರಾದಿರಿ- ಈ ಬಸವೇಶ್ವರನು ಎಲ್ಲರನ್ನು ಕುಲಗೆಡಿಸಿದನು- ಎಂದು ಹೇಳಿದ್ದನ್ನು ಅರಸನು ಕೇಳಿ ಕೋಪಿಸಿಕೊಂಡು
ಬಸವಣ್ಣನನ್ನು ಕೇಳಿದನು- ನೀವು ನಿಮ್ಮ ಶರಣರು ನಮ್ಮ ಕುಲವನ್ನೆಲ್ಲಾ ಕೆಡಿಸಿದಿರಿ ನೀವು ಬಹು ನೀಚರು ನಿಮ್ಮ ಶರಣರು ಅನ್ಯಾ
ಯ ಮಾಡುವಿಕ್ಕಿಲ್ಲವೇ ಯೆಂದು ಹೇಳಿ ಬಹು ಕೋಪಿತನಾಗಿ ಹರಳೈಯನನ್ನೂ ಮಧುವೈಯನನ್ನೂ ತರಿಸಿ ಇವರಿಬ್ಬರನ್ನು

ಆನೆಯ ಕಾಲಿಗೆ ಕಟ್ಟಿಸಿ ಊರ ಸುತ್ತಾ ಎಳಸಿದನು- ಅದರಿಂದ ಅವರಿಬ್ಬರು ಸತ್ತು ಹೋದರು- ಬಸವೇಶ್ವರನು ಸಂತವಾಗಿಯು
ಲ್ಲಾ ಶರಣರು ಕೂಡಿ ದೇವರಿಗೆ ಸ್ತೋತ್ರ ಮಾಡುವ ಸಮಯದಲ್ಲಿ ಪರಮೇಶ್ವರನು ಬಂದು ಹೇಳಿದನು- ಸತ್ತು ಹೋದ ಶರಣರಿಬ್ಬ
ರು ತಿರಿಗಿ ಏಳಲಿ ನೂರಾಯಂ ಶತ್ರುಕ್ಕೆ ಹುಟ್ಟಿಸ ನೊಂದವರಿಗೆ ಲಿಂಗವು ಬೆಂದವರಿಗೆ ಪಟ್ಟವು ಭೂಲೋಕವೆಲ್ಲಾ ಯಿವರಿಗೆ ಕೊ
ಡುವೆನು- ಇದನ್ನು ನೀವು ಸಮಸ್ತರು ತಿಳಿದಿರಬೇಕು- ಇನ್ನು ಹೇಳುವದೇನಂದರೆ- ಇನ್ನು ಮೇಲೆ ನೀವು ಯಿಲ್ಲಿರಲಾರದೆಂದು
ಹೇಳಿ ಅದೃಶ್ಯವಾದನು- ಆ ಸಮಯದಲ್ಲಿ ಸಕಲ ದೇಶವೆಲ್ಲಾ ಜೈನಮತವ ಬಿಟ್ಟವು- ಸಕಲ ಜೈನರೆಲ್ಲಾ ಬಸವೇಶ್ವರನ ಆಲಯದ
ಲ್ಲಿ ಬಂದು ಏಕನಿಷ್ಠೆಯಾಗಿ ಲಿಂಗಧಾರಣೆ ಮಾಡಿದರು- ॥೩॥ ಮಾದಿಗರ ಚನ್ನಯ್ಯನೆಂಬ ಶರಣನು ದೇವರ ಮೇಲೆ ಬಹಳ ವಿಶ್ವಾಸಿಯು-
ಬಸವೇಶ್ವರನ ಅರಮನೆಯಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಉಣುವ ಸಮಯದಲ್ಲಿ ಮುಸಲಮಾನರ ರೂ
ಪದಲ್ಲಿ ಪರಮೇಶ್ವರನು ಪಙ್ಕ್ತಿಯಲ್ಲಿ ಬರಲಾಗಿ ಗಣಂಗಳು ಉಣ್ಣುತಿದ್ದರು ಆ ಕ್ಷಣದಲ್ಲಿ ಬಸವೇಶ್ವರನ ಹೆಂಡತಿ ನೀಲಾಂಬಿಕೆಯು
ಪರಮೇಶ್ವರನ ಗುರುತು ಹಿಡಿದು ನಮಸ್ಕಾರವ ಮಾಡಿದಳು- ಪರಮೇಶ್ವರನು ಅವಳ ಸಂಗಡ ಅವಳಿಗೆ ಹೋಗಲು ಸ್ಥಾನವ ದಕ್ಕಿಸ
ಲಿತನು- ಇತ್ತಲಾಗಿ ಚನ್ನಯ್ಯನು ತನ್ನ ಮನೆಯಲ್ಲಿ ಇರಲಾಗಿ ಅವನು ಅಂಬಲಿಯನ್ನು ಉಣ್ಣುವ ಸಮಯದಲ್ಲಿ ತಾನುಂಡ ಅಂಬ
ಲಿ ಬಹಳ ರುಚಿಯಿತ್ತು ಅದು ಕಾರಣ ತನ್ನ ಮನಸ್ಸಿನಲ್ಲಿ ದೇವರಿಗೆ ಉಣಿಸಬೇಕೆಂದು ಆಲೋಚಿಸಿಕೊಂಡಿರಲಾಗಿ ಇದು ದೇವ
ರಿಗೆ ಅರಿಕೆಯಾಗಿ ಉಣ್ಣುವದು ಬಿಟ್ಟು ಓಡಿ ಹೋಗಿ ಚನ್ನಯ್ಯನ ಹತ್ತಿರ ಕ್ಷಣದಲ್ಲಿ ಉಣಲಿಕ್ಕೆ ಕುಳಿತನು- ಅದರ ತರುವಾ
ಯ ಬಸವೇಶ್ವರನೂ ನೀಲಾಂಬಿಕೆಯೂ ಸಕಲ ಗಣಂಗಳೂ ಹಿಂದೆ ಹೋಗಿ ಚನ್ನನ ಮನೆಯಲ್ಲಿ ಅವನ ಸಂಗಡ ಉಣ್ಣುವದ
ನ್ನು ನೋಡಿ ಗಣಂಗಳು ಹಿಂದಕ್ಕೆ ನಿಂತರು- ಆದರೆ ಬಸವೇಶ್ವರನು ಮುಂದಕ್ಕೆ ಬಂದು ಕೈಮುಗಿದು ನಿಂತಿದ್ದನು- ಆಗಲು ಅವನು
ಬಸವೇಶ್ವರನಿಗೆ ಹೇಳಿದನು- ನೀನು ಈ ಅಂಬಲಿ ಉಣ್ಣಬೇಕೆಂದು ಹೇಳಲು ಬಸವೇಶ್ವರನು ಅವರು ಉಂಡು ಮಿಕ್ಕಿ
ದ ಪ್ರಸಾದವನ್ನು ಉಣಲಿಕ್ಕೆ ಕುಳಿತನು- ನೀಲಾಂಬಿಕೆ ಸಹ ಹಾಗೆ ಕುಳಿತಳು- ಇದನ್ನು ನೋಡಿ ಎಲ್ಲಾ ಗಣಂಗಳು ಚನ್ನಬ
ಸವೇಶ್ವರನಿಗೆ ಈ ವರ್ತಮಾನವೆಲ್ಲವನ್ನು ಹೇಳಿದರು- ಆಗಲು ಚನ್ನಬಸವೇಶ್ವರನು ಬಂದು ಆತನು ದೇವರೆಂದು ತಿಳಿಯದೆ ಆ
ತನ ಸಂಗಡ ಮಾತಾಡುತ್ತಾಯಿರುವದನ್ನು ನೀಲಾಂಬಿಕೆ ಕಂಡು ಅಂದಳು- ನಿನ್ನ ಮಾವ ದೇವರುಚ್ಚರ ಮರತು ಬಿಟ್ಟು ನೀನು ನಿನ್ನ ಆತ್ಮ
ದಲ್ಲಿ ವಿಚಾರ ಮಾಡುತ್ತಲಾಗಿ ಆತನು ಎರಗಿ ನಮಸ್ಕಾರ ಮಾಡಿ ಮುಂದಿನ ಕಾರ್ಯಕ್ಕೆ ಅಪ್ಪಣೆಯನ್ನು ಬೇಡಲು ದೇವರು ಸಕ
ಲ ಜನರು ಚನ್ನನಲ್ಲಿ ಅನ್ನವ ಉಣಬೇಕೆಂದು ಕಾಲಜ್ಞಾನವನ್ನು ಬರೆದು ಹೇಳಿದನು- —॥೧ ಬಳ್ಳೇಶನೆಂಬ ಭಕ್ತನು- ಇದ್ದನು-
ಆತನು ನಿತ್ಯದಲ್ಲಿ ಬಸವೇಶ್ವರನ ಆಲಯಕ್ಕೆ ಹೋಗುತ್ತಿದನು- ಆತನು ದೇವರಲ್ಲಿ ಬಹಳ ವಿಶ್ವಾಸವುಳ್ಳವನಾಗಿದ್ದನು- ಒಂದು ದಿವಸ ತನ್ನ ಹೆಂ
ಡತಿ ತವರಿಗೆ ಹೋಗಿದ್ದಲ್ಲಿ ಈತನು ಕಣ್ಣು ಬೇನೆಯಿಂದ ಪತ್ರದಿಂದಾ ಮಲಗಿಕೊಂಡನು- ಆ ಪುರದಲ್ಲಿ ಜೈನರು ಬಂದು ಈತನ ಕೇಳಿದರು- ನೀನು
ಉಪವಾಸದಿಂದಾ ಮಲಗುವ ಕಾರಣವೇನೆಂದು ಕೇಳಲು ಈತನು ಅಂದನು- ನಾನು ಪಾರ್ವತೀಶನ ಪೂಜೆ ಮಾಡಲು ಆಗುತಿದ್ದೆನು- ಈಗ
ಪೂಜಿಸಲಿಕ್ಕೆ ಏನೂ ಅನುಕೂಲವಿಲ್ಲದ ಕಾರಣ ನಾನು ಮಲಗಿದ್ದೇನೆಯೆಂದು ಹೇಳಲು ಅವರು ಹಾಸ್ಯ ಮಾಡಿ ಕಾಳು ಅಳೆಯುವಂತಾ ಬ
ಳ್ಳವನ್ನು ತಂದು ಮುಂದಿಟ್ಟರು ಆ ಮೇಲೆ ಈತನನ್ನು ಎಬ್ಬಿಸಿ ನಿನ್ನ ಪಾರ್ವತೀಶನು ಯಿಲ್ಲಿ ಬಂದು ಕುತಿದ್ದಾನೆ ನೀನು ಪೂಜೆ ಮಾಡು ಎಂ
ದು ಹೇಳಲು ಅವನು ದೇವರನ್ನು ಸ್ತುತಿ ಮಾಡಿದನು- ಆ ಕ್ಷಣದಲ್ಲಿ ದೇವರು ಪ್ರತ್ಯಕ್ಷವಾದನು- ಅದೇ ಕ್ಷಣದಲ್ಲಿ ಯಿವನ ಕಣ್ಣು ರೋ
ಗ ನಷ್ಟವಾಯಿತು ಬಹು ಜನರು ಆಶ್ಚರ್ಯವಾಗಿ ಬಸವೇಶ್ವರನ ಅರಮನೆಗೆ ಬಂದರು- ೧ —
ಮರುಳು ಶಂಕರದೇವನೆಂಬ ಒಬ್ಬ ಶರಣನ ಮಹಿಮೆಯೇನಂದರೆ- ಈತನು ಕಲ್ಯಾಣಪಟ್ಟಣದ ಹೊರಗಿನ ಅರಣ್ಯದಲ್ಲಿ ಕುರಿ
ಹಿಂಡುಗಳನ್ನು ಕಾದುಯಿರುತಿದ್ದನು- ಅವನು ಒಂದು ದಿವಸದಲ್ಲಿ ಚನ್ನಬಸವೇಶ್ವರನು ಮೊದಲಾಗಿ- ೬೦ ಮೂರು ಪುರಾತರು
ಕೂಡಿಕೊಳ್ಳುತಿರುವ ಸಮಯದಲ್ಲಿ ಯಿವನು ಅವರ ಹತ್ತರ ಬಂದು ಶರಣು ಮಾಡಿ ಸಕಲ ಗಣಂಗಳಿಗೆ ನಮಿಸಿ ಕೂತು ಕೇಳಿದನು-
ನನ್ನ ಅರಸೇಯಲ್ಲಿ ಕೇಳು ಚನ್ನಬಸವೇಶ್ವರನೇ ನೀವು ನಿಮ್ಮ ಗಣಂಗಳಿಗೆ ಛತ್ರ ಚಾಮರ ಹಿಡಿಸಿದಿರಲ್ಲಾ ಅದು ಯೇನು ಕಾರಣವು

ವರುವೂ ಇದ್ದಂಥವರಿಕ್ಕೆ ಮೆಚ್ಚಿ ಕೊಟ್ಟಿದ್ದೇನೆಯೆಂದು ಕೇಳಿದನು - ಈ ಪುರಾತರು ಕೇಳಿ ಅವನ ಬಳಿಗೆ ಬಂದು ನೀನು
ಯೇನು ಮಾಡಬೇಕೆಂದು ಉಬ್ಬೇಸುತ್ತಿಯನ್ನಲು ಅದಕ್ಕೆ ಅರಸು ಒಂದು ಕುಳಿಯನ್ನ ತೆಗೆಸಿ ಕಡಿದು ಅದನ್ನ ತುಂಡು ಮಾಡಿ
ನೀವು ಪುರಾತರು ಅದನ್ನ ಉಬ್ಬಿಸಬೇಕೆನ್ನಲಾಗಿ ಅದು ನಮ್ಮ ಕೈಯಿಂದ ಆಗದು ಅದನ್ನ ಮರುಳು ಶಂಕರನು ಉಬ್ಬಿಸಿದ್ದ
ಉಂಟಾದರೆ - ನಾವು ಪುರಾತರೆಲ್ಲರು ಕೂಡಿ ನಮ್ಮ ಛತ್ರ ಚಾಮರಗಳೆಲ್ಲವನ್ನ ಕೊಡುವೆವೆಂದು ಹೇಳಿದರು ಆಗಲು ಅರಸನು
ಮರುಳು ಶಂಕರನಿಗೆ ನೀನೀ ತುಂಡು ಮಾಡಿದ ಕುಳಿಯನ್ನ ಉಬ್ಬಿಸುಯೆಂದು ಹೇಳಿದನು - ಆಗಲು ಈ ಶಂಕರನು ತನ್ನ
ಹಿಂದಿನೊಳಗೆ ಹೋಗಿ ದೇವರನ್ನ ಸ್ತುತಿಸಲು ದೇವರು ಅವನಿಗೆ ಹೇಳಿದನು - ನಿನ್ನ ವಿಶ್ವಾಸವು ನಿನಗಾಗುವದು - ನೀ ನಂಜಬೇ
ಡವುಯೆಂದು ಹೇಳಿದನು - ಆ ಮರುಳು ಶಂಕರನು ಹೊರಪುಸಬೆಯಲ್ಲಿ ಬಂದು ತನ್ನ ಕೈಯಲ್ಲಿದ್ದ ತುಂಡಾದ ಕುಳಿಯನ್ನ ಬ
ಡದು ಉಬ್ಬಿಸಿದನು - ಆ ವಾಗ ಪುರಾತರ ಛತ್ರ ಚಾಮರಗಳು ಈ ಶಂಕರನಿಗೆ ಸಿಕ್ಕಿದವು - ಅವು ಇಂದಿನ ತನಕ ಶಂಕರನ
ಮನೆಯಲ್ಲಿ ಇರುವವು - ೧ — ॥ಊರಲಿಂಗನೆಂಬ ಒಬ್ಬ ಶರಣನು ಬಸವಣ್ಣನ ಆಲಯದಲ್ಲಿ ನಿತ್ಯಾನುಕಾಲದ
ಲ್ಲಿ ದೇವರ ಶಾಸ್ತ್ರವನ್ನ ಕೇಳುತ್ತಾಯಿದ್ದನು - ಅವನಿಗೆ ಒಬ್ಬ ಜಂಗಮನು ಹೇಳಿದನು - ಯಲೋ ನಿನಗೆ ಶಾಸ್ತ್ರ ತಿಳಿಯುವ
ದಿಲ್ಲ ಆದಕಾರಣ ನಾನು ಹೇಳುವದನ್ನ ಕೇಳು ಅದೇನೆಂದರೆ ನೀನು ದಿನದಿನಕ್ಕೆ ಒಂದು ಹೊರೆ ಕಟ್ಟಿಗೆಯನ್ನ ನಮ್ಮ ಮಠಕ್ಕೆ
ತಾಯೆಂದು ಹೇಳಲು ಈತನು ಬಹಳ ಸಂತೋಷದಿಂದಾ ದಿನ ಒಂದು ಕಟ್ಟಿಗೆ ಹೊರೆಯನ್ನ ತಂದು ಹಾಕುತ್ತಿದ್ದನು - ಇವ
ನು ಆರು ತಿಂಗಳು ತನಕ ಹಾಕಿದ ಮೇಲೆ ಅವನ ಕೈಯಲ್ಲಿ ಒಂದು ಕಲ್ಲನ್ನ ಕೊಟ್ಟು ಅವನಿಗೆ ಹೇಳಿದನು - ಬಾ ಯೆಂಬ
ಮಂತ್ರವನುಚ್ಚರಿಸಲು ಬರುವದು - ಹೋಗು ಯೆಂಬ ಮಂತ್ರವನುಚ್ಚರಿಸಲು ಹೋಗುವದೆಂದು ಹೇಳಿ ಕಳುಹಿಸಿದನು - ಆ
ಗವನು ಆ ಕಲ್ಲನ್ನ ತೆಕೊಂಡು ತನ್ನ ಮನಿಗೆ ಹೋಗಿ ಆ ಕಲ್ಲಿನ ಮೇಲೆ ಬಹಳ ವಿಶ್ವಾಸವನ್ನ ಯಿಟ್ಟುಕೊಳ್ಳಲು ಆ ಕಲ್ಲು ಸಮೀ
ಪಕ್ಕೆ ಬಂದಿತು - ಹೋಗು ಯನ್ನಲು ಹೋಯಿತು - ಈ ಪ್ರಕಾರದಲ್ಲಿ ದಿನದಿನಕ್ಕೆ ಮಹಾ ಪೂಜೆ ಮಾಡುತ್ತಾಯಿದ್ದನು - ಒ
ಂದು ದಿವಸದಲ್ಲಿ ಆ ಪೂರ ಅರಸು ಒಂದು ಬಾವಿಯನ್ನ ತೆಗಿಸುತಿದ್ದನು - ಅದರಲ್ಲಿ ಒಂದು ಬಂಡೆಕಲ್ಲು ಬಿತ್ತು - ಅ
ದನ್ನ ಯಾರ ಕೈಯಿಂದಲೂ ತೆಗಿಯೋಣಾಗಲಿಲ್ಲ ಅರಸು ಬಹಳ ಸಿಟ್ಟಿನಿಂದಾ ಪೂರೊಳಗಿನ ಜನರೆಲ್ಲರನ್ನ ತರಿಸಿ
ಬಂಡೆಯನ್ನ ತೆಗಿಯಲಿಕ್ಕೆ ಹಚ್ಚಿದನು - ಅವರೆಲ್ಲರು ಆರು ತಾಸಿನ ಪರ್ಯಂತರ ಕಡಿದರು - ಯಾರಿಂದಲೂ ಆಗಲಿಲ್ಲ -
ಅದರ ಮೇಲೆ ಪೂರಕ್ಕೆ ಸರ್ವರು ಹೋದರು ಆ ಸಮಯದಲ್ಲಿ ಪೂರಲಿಂಗಪ್ಪನ ಹೆಂಡತಿಯು ಪ್ರಸಾದಕ್ಕೆ ಗಂಡನಿಗೆ ಆಹಾರವನ್ನ
ಬಾವಿಗೆ ತಂದಳು ಅವನು ಜಳಕವ ಮಾಡಿ ತನ್ನ ಕಲ್ಲಿಗೆ ನೀರು ತೋಯಿಸಿ ಆ ಬಂಡೆಯ ಮೇಲೆ ಯಿಟ್ಟನು - ಅರಸನು ಅದನ್ನ
ನೋಡಿ ಅಂದನು - ನಿನ್ನ ಕಲ್ಲಿನಲ್ಲಿ ಯೇನುಂಟು ಯೆಂದು ಕೇಳಿದನು - ಅದಕ್ಕವನು ಹೇಳಿದನು - ನಮ್ಮ ಮಠದ ಅಯ್ಯನವರು
ಕೊಟ್ಟ ಕಲ್ಲು ಇದ್ದೀತು ಯೆಂದು ಹೇಳಿದನು - ಅದಕ್ಕವನು ಹೇಳಿದನು - ಬಾವಿಯೊಳಗಣ ಬಂಡೆ ಕಲ್ಲನ್ನ ತೆಗೆದರೆ
ಬಹಳ ಸಂತೋಷವಾದೀತು - ಯೇನೆಂದರೆ - ಪೂರಜನರು ನೀರು ಕುಡಿಯಲಿಕ್ಕೆ ಬೇಕಾಗಿಯದೆಯೆಂದು ಹೇಳ
ಲು ಅಷ್ಟರಲ್ಲಿ ಪೂರಲಿಂಗನು - ಆ ಕಲ್ಲಿಗೆ ಹೇಳಿದನು - ನೀನು ಕಲ್ಲು ಬಂಡೆಯನ್ನ ತೆಕ್ಕೊಂಡು ಮೇಲಕ್ಕೆ ಬರಬೇಕೆಂದು
ಹೇಳಿದಷ್ಟರಲ್ಲೇ ಆ ಕಲ್ಲು ಕಲ್ಲು ಬಂಡೆಯನ್ನ ಕಿತ್ತುಕೊಂಡು ಮೇಲಕ್ಕೆ ಬಂದಿತು - ನೀರು ಬಹಳ ಬರಲು ಈತನಿಗೆ
ಅರಸನು ಮೆಚ್ಚಿ ಬಹುಮಾನವ ಮಾಡಿದನು - ಈ ಪ್ರಕಾರ ಈತನು ತನ್ನ ಮಹಿಮೆಯನ್ನ ನಡಿಸಿದನು - ೧ —
ಕಲಿಕಾಳನೆಂಬ ಅರಸನೊಬ್ಬನು - ಒಂದು ಕೆರೆಯನ್ನ ಕಟ್ಟಿಸುತಿದ್ದನು - ಅವನ ಪಟ್ಟಣದಲ್ಲಿ ಪೀತವಿಯೆಂಬ ಶರ
ಣೆಯಿದ್ದಳು - ಅರಸನು ಆಕೆಯನ್ನ ಕೆರೆಯನ್ನ ತೋಡಲಿಕ್ಕೆ ಬಿಟ್ಟು ಹಿಡಕೊಂಡು ಹೋದನು - ಆಕೆಗೆ ಜನರು ಅಂ
ದರು - ನೀನು ದೇವರ ಭಕ್ತಳು ನೀನು ನಮ್ಮ ಸಂಗಡ ಮಣ್ಣು ಹೊರಲಿಕ್ಕೆ ಬರುವದುಂಟೇ ಯೆಂದು ಹಾಸ್ಯಮಾಡಿದರು-

ಆಸಮಯದಲ್ಲಿ ಕೇಶರಸೆಯು ದೇವರಿಗೆ ಸ್ತೋತ್ರಮಾಡಿದಳು ಆಕ್ಷಣದಲ್ಲಿ ದೇವರು ಬಂದು ಆಕೆ ಹೊರುವಂಥಾ ಮಣ್ಣಿನ ಮಡಿಗೆಯನ್ನು ಹೊತ್ತುಕೊಂಡು ಹೋಗಿ ಚಲ್ಲುತ್ತಾಯಿದ್ದನು ಆಕೆಯು ಸುಮ್ಮನೇ ಕೂತಿದ್ದಳು ಆವೇಳೆಯಲ್ಲಿ ದೇವರು ಜನರ ಕಣ್ಣಿಗೆ ಕಾಣಿಸಲಿಲ್ಲ - ಈ ಅರಸು ಆಶ್ಚರ್ಯವನ್ನು ನೋಡಿ ಸಂತೋಷವಾಗಿ ಆಕೆಯನ್ನು ತನ್ನ ಮನೆಗೆ ಕರಕೊಂಡು ಹೋಗಿ ತನ್ನ ರಾಣಿಯಷ್ಟು ಸಂರಕ್ಷಣೆಮಾಡುತಿದ್ದನು - ೧ - ॥ ಬಳಿಯೂರ ಶೆಟ್ಟಿ ಬಳಿಯೂರ ಜಂಗುಳಿಯೆಂಬುವರು ದೇವರಿಗೆ ವಿಶ್ವಾಸಬದಿಂಯುತ್ತಾಯಿದ್ದರು ಗಂಡನಾದ ಕಿರಿಯೂರ ಶೆಟ್ಟಿ ತನ್ನ ವ್ಯವಹಾರಕ್ಕೆ ಪರದೇಶವು ಹೋಗಿದ್ದನು - ಆಸಮಯದಲ್ಲಿ ದೇವರೊಬ್ಬ ಜಂಗಮನರೂಪವಾಗಿ ಮನೆಗೆ ಬಂದು ಯಲೋವತ್ತಳೇ ನಿನ್ನ ಮಗನನ್ನು ಕೊಯಿದು ನನಗೆ ಪಾಕಮಾಡಿ ನೀಡೆಂದು ಕೇಳಿದನು - ಆಕ್ಷಣದಲ್ಲಿ ಜಂಗುಳಿ ತನ್ನ ಮಗನನ್ನು ಕರದು ಮಲಗಿಸಿ ಕೊಯಿದು ಅಡಿಗೆಮಾಡಿ ಆಮುದು ಮಗನ ತಲೆಯನ್ನು ನೆಲವಿನಮೇಲೆ ಇಟ್ಟಿದ್ದಳು - ತರುವಾಯ ಬಂದಂಥಾ ಜಂಗಮನನ್ನು ಕರದು ಊಟಕ್ಕೆ ನೀಡಿದಳು - ಅವನು ಉಣ್ಣುತ್ತಾಯಿರುವಾಗ ನೆಲವಿನ ಮೇಲೆಯಿರುವ ಮಂಡು ಮಗನ ತಲೆಯನ್ನು ಕಂಡು ಆಕೆಗೆ ಹೇಳಿದ್ದು - ನಿನ್ನ ಮಗನ ತಲೆಯ ನೋಡಲಿಕ್ಕೆ ಯಿಟ್ಟಿದ್ದಿಯೋ ಯೆಂದು ಸಿಟ್ಟುಮಾಡಿದನು - ಆಕೆಯು ಆ ತಲೆಯನ್ನು ತೆಗದು ವರಳಿನಲ್ಲಿ ಕುಟ್ಟಪುಡಿಮಾಡಲಿಕ್ಕೆ ಆರಂಭಮಾಡಿದಳು ಆಕ್ಷಣದಲ್ಲಿ ದೇವರು ಆಕೆಯ ಭಕ್ತಿಯನ್ನು ಕಂಡು ಸಂತೃಪ್ತವಾಗಿ ಆಕೆಯ ಮಗನನ್ನು ಯದುರಿಗೆ ತಂದು ನಿಲ್ಲಿಸಿದನು - ಆಕೆಗೆ ಹೇಳಿದನು - ನಿನ್ನನ್ನು ಮೋಕ್ಷಕ್ಕೆ ವೈಯುವೆನು - ನೀನು ಬರಬೇಕೆಂದು ಕೇಳಿದನು - ಅದಕ್ಕಾಗಿ ಜಂಗುಳಿಯು ಅಂದಳು - ನನ್ನ ಗಂಡನನ್ನು ನನ್ನ ಮಕ್ಕಳನ್ನು ಈ ಪುರದ ಸರ್ವಜನರನ್ನು ಮೋಕ್ಷಕ್ಕೆ ವೈಯ್ಯಬೇಕೆಂದು ಬೇಡಿಕೊಂಡಳು - ದೇವರು ಬಹಳ ಸಂತೋಷವಾಗಿ ಆಕೆಯ ಸಂಗಾತ ಬಂದ ಜನರನೆಲ್ಲಾ ಮೋಕ್ಷಕ್ಕೆ ವೈದನು - ॥೧ ನೀಲನೂರ ನಿಂಬಾಕೆಯೆಂಬುವ ಶರಣೆಯು ದೇವರಿಗೆ ಬಹಳ ಭಕ್ತಳಾಗಿ ಅನಂತ್ರತಿಂಯಲ್ಲು ಸ್ತೋತ್ರಮಾಡುತಿದ್ದಳು - ದೇವರು ಒಂದು ದಿವಸದಲ್ಲಿ ಜಂಗಮರೂಪವಾಗಿ ಆಕೆಯ ಮನೆಗೆ ಬಂದು ನನಗೆ ಬಹು ಹಸುವಾಗಿದೆ ನಿನ್ನ ಶರೀರವನ್ನು ಕೊಯಿದು ಕೊಡು ಯೆಂದು ಕೇಳಲು - ಆಕ್ಷಣದಲ್ಲು ನಿಂಬಾಕೆಯು ತನ್ನ ಗಂಡನನ್ನು ಕರದು ನನ್ನ ಶರೀರವನ್ನು ಕೊಯಿದು ಜಂಗಮನಿಗೆ ಕೊಡಬೇಕೆಂದು ಧೃಢದಿಂದಆಲೋಚನೆಮಾಡಿ ತನ್ನ ಶರೀರವನ್ನು ಕೊಯಲಿಕ್ಕೆ ಆರಂಭವಮಾಡಿದನು ಆಕ್ಷಣದಲ್ಲಿ ದೇವರು ಆತನ ಕರವನ್ನು ಹಿಡಿದು - ನಿಂಬಾಕೆಯನ್ನು ಜೀವಂತಳ ಮಾಡಿ ನಿಮ್ಮನ್ನು ಮೋಕ್ಷಕ್ಕೆ ವೈಯುವೆನೆಂದು ಹೇಳಿದನು - ಆಸಮಯದಲ್ಲಿ ಅವರು ತಮ್ಮ ಸಂಗಡ ಬರುವವರನ್ನು ಕೂಡಿಕೊಂಡು ದೇವರ ಸಂಗಡ ಮೋಕ್ಷಕ್ಕೆ ಹೋದರು - ೧ - ॥ ವೀರಗಂಟಿ ಮಡಿವಾಳಪ್ಪನವರ ಮಹತ್ವವೇನಂದರೆ ಬಸವೇಶ್ವರ ಮೊದಲಾದ ಗಣಂಗಳ ವಸ್ತ್ರಗಳನ್ನು ವಗವ ಒಂದು ದಿವಸದಲ್ಲಿ ಅರಬನಸಬೆಯು ಚಾವಾರ್ಕರು ಅರಬಗೆ ಹೇಳಿದರು - ಬಸವೇಶ್ವರನಲ್ಲಿಯಿರುವ ಅಗಸರು ತಮ್ಮ ವಸ್ತ್ರಗಳನ್ನು ಬಹಳ ಚಂದಾಗಿ ವಗಯುತ್ತಾರೆ - ನಮ್ಮ ವಸ್ತ್ರಗಳು ವಗಿಯಲಿಕ್ಕೆ ಆ ಅಗಸನಿಗೆ ಕೊಡಬೇಕೆಂದು ಹೇಳಿದರು - ಆಮಾತಿಗೆ ಅರಸು ಮನಸ್ಸುಕೊಟ್ಟು ತನ್ನ ವಸ್ತ್ರಗಳನ್ನು ತನ್ನ ಆಳುಗಳ ಕೈಲಿ ಕೊಟ್ಟು ಕಳುಹಿಸಲು ಆಳುಗಳು ಮಡಿವಾಳಪ್ಪನವರಿಗೆ ಕೊಡಲಾಗಿ ಆತನು ಆ ವಸ್ತ್ರಗಳನ್ನು ಹಿಡಿಯದೆ ಹೇಳಿದನು - ನಿಮ್ಮ ಅರಸನ ವಸ್ತ್ರಗಳನ್ನು ನಾವು ವಗಿಯಲಿಕ್ಕೆ ಬಾರದು ಯೆಂದು ಹೇಳಲು - ಆಮಾತನ್ನು ಆಳುಗಳು ಅರಸನ ಮುಂದೆ ಹೇಳಲು ಅದಕ್ಕೆ ಅರಸು ಮಹಾಕೋಪತನಾಗಿ ಆ ಅಗಸನನ್ನು ಹಿಡಿತರಿಯೆಂದು ನಾಲ್ಕು ಆಳುಗಳನ್ನು ಕಳುಹಿಸಿದನು - ಅವರು ಹೋಗಿ ಆತನ ಕೈಯನ್ನು ಹಿಡಿದು ಯಳೆಯಲು ಆ ಆಳುಗಳಲ್ಲಿ ಮೂವರು ಸತ್ತರು - ಒಬ್ಬನು ಓಡಿಹೋಗಿ ಅರಸನಿಗೆ ವರ್ತಮಾನವನ್ನು ತಿಳಿಸಿದನು - ಅರಸು ಬಹಳ ಸಿಟ್ಟಿಗೆ ಬಂದು ಸಾವಿರ ಸಿಪಾಯರನ್ನು ಕಳುಹಿಸಿದನು - ಅವರು ಹೋಗಿ ಅವನನ್ನು ಹಿಡಿಯಲಾಗಿ ಅವನು ತನ್ನ ತೋಯಿದ ಅರಿವೆ ನೀರನ್ನು ಅವರ ಮೇಲೆ ಚಲ್ಲಲು ಅವರೆಲ್ಲರು ಸತ್ತರು - ಈ ಸುದ್ದಿಯ

ಯನ್ನು ಅರಸು ಕೇಳಿ ಬಸವೇಶ್ವರನ ಕೂಡಕೊಂಡು ಬಂದು ಅರಸನು ಕೇಳಿದನು- ಈತನು ಯಾರು ನನ್ನ ಜನರೆಲ್ಲರನ್ನು ಕೊಂದನೆಂದು ಕೇಳಲಿಕ್ಕೆ ಬಸವೇಶ್ವರನು ಹೇಳಿದನು- ಇವನು ಶಿವಶರಣನು ಮಹಿಮೆಯುಳ್ಳವನು ಇವನನ್ನು ಸನ್ಮಾನಿಸಿ ಕೇಳಬೇಕು- ನೀವು ಕೋಪ ಮಾಡುವದು ವ್ಯರ್ಥವೆಂದು ಹೇಳಲು ಅರಸನು ತನ್ನೊಳಗೆ ವಿಚಾರಿಸಿ ಬಸವೇಶ್ವರನಿಗೆ ಹೇಳಿದನು- ನೀ ಮಾಡಿದ ಮಾತು ಸತ್ಯವು- ಈತನು ಮಹಿಮೆಯುಳ್ಳವನು. ಆದರೆ ಸತ್ತವರನ್ನು ಎಬ್ಬಿಸಿದರೆ ನಿನ್ನ ಮಾತು ನಿಜವು ಎಂದು ಅರಸನು ಹೇಳಿದ ಮಾತನ್ನು ಬಸವೇಶ್ವರನು ಕೇಳಿ ಆ ಮಾತನ್ನು ಆ ಶರಣನಿಗೆ ಹೇಳಿ ವಿಜ್ಞಾಪನೆ ಮಾಡಿಕೊಳ್ಳಲು ಆತನು ದೇವರಿಗೆ ಸ್ತೋತ್ರ ಮಾಡಿ ಸತ್ತವರನೆಲ್ಲಾ ಎಬ್ಬಿಸಿದನು. ಈ ಆಶ್ಚರ್ಯ ಮಹಿಮೆಯ ಮಾಡಿದನ್ನು ಕಂಡು ಕೈಮುಗಿದು ಆತನನ್ನು ಉಚಿತದಿಂದಾ ಪೂಜಿಸಿ ಕರೆತಂದನು- ॥-

೧ ಬೇಡರ ಕಣ್ಣಪ್ಪನೆಂಬ ಬಿಲ್ಲು ಭಕ್ತನು- ಈತನು ಒಂದು ಈಶ್ವರಗೆ ಪೂಜಿಸುತ್ತಿದ್ದನು. ಇದಲ್ಲದೆ- ಮತ್ತೊಬ್ಬ ಬ್ರಾಹ್ಮಣನು ಅದೇ ಈಶ್ವರಗೆ ಗಂಧ ಅಕ್ಷತೆಯಿಂದಾ ಪೂಜೆ ಮಾಡುತ್ತಾಯಿದ್ದನು- ಕಣ್ಣಪ್ಪನು ಬರುವ ಹಾದಿಯಲ್ಲಾ ಬಾಯೊಳಗೆ ನೀರು ಪುಷ್ಪ ಕೈಯಲ್ಲಿ ಕಂಡವನ್ನು ಇಟ್ಟು ಬಿನ ಪ್ರತಿ ಈತನು ಈ ಪ್ರಕಾರವಾಗಿ ಪೂಜಿಸುತ್ತಾಯಿದ್ದನು- ಅದಕ್ಕಾಗಿ ಬ್ರಾಹ್ಮಣನು ಬಹಳ ಚಿಂತಿಸುತ್ತಾಯಿದ್ದನು- ಒಂದು ದಿವಸದಲ್ಲಿ ದೇವರು ಬ್ರಾಹ್ಮಣನ ನಿಜವನ್ನು ನೋಡಬೇಕೆಂದು ಅವನು ಪೂಜಿಸುವೇಳೆಯಲ್ಲಿ ಗುಡಿಯು ಗದ್ದರಿಸಿತು ಆತನು ಹೆದರಿ ಹೋದನು- ಆ ಮೇಲೆ ಕಣ್ಣಪ್ಪನು ಬಂದು ಬಾಯಿಯಲ್ಲಿ ಗುಳ್ಳಿ ಕಂಡವನ್ನು ಮುಂದಿಟ್ಟನು- ಮತ್ತ ದೇವರು ಇವನ ನಿಜವನ್ನು ಸಹ ನೋಡಬೇಕೆಂದು ಗುಡಿ ಬೀಳುವ ಹಾಗೆ ಮಾಡಿದನು- ಆದರೆ ಈತನು ನನ್ನ ದೇವರ ಮೇಲೆ ಗುಡಿ ಬಿದ್ದೀತೆಂದು ಅದರ ಮೇಲೆ ಬಾಗಿನಿಂತನು- ಆ ಕಾರಣದಿಂದಾ ದೇವರು ಈತನ ಭಕ್ತಿಯನ್ನು ನೋಡಿ ಮೋಕ್ಷಕ್ಕೆ ಕರಕೊಂಡನು- ॥

೧- ಒಂದು ದಿವಸ ಜೈನರೆಲ್ಲಾ ಕೂಡಿ ಅರಸನಿಗೆ ಆಲೋಚನೆ ಮಾಡಿ ಹೇಳಿದರು- ಬಸವೇಶ್ವರನು ಬಹಳ ಮಹಿಮೆಯನ್ನು ಮಾಡುತ್ತಾನೆ- ಆದರೆ ನಾವು ಕಾಳಕೂಟ ವಿಷವನ್ನು ಮಾಡುತ್ತೇವೆ- ಅದನ್ನು ಆತನ ಶರಣರೆಲ್ಲರು ತಿನ್ನಲಿಬೇಕೆಂದು ಹೇಳಿದರು- ಈ ಮಾತಿನ ವಿಷಯ ಅರಸನು ಬಸವೇಶ್ವರನಿಗೆ ಕೇಳಲು ಅದಕ್ಕೆ ನಮ್ಮ ಶರಣರು ದೊಡ್ಡವರು ನೀವು ಮಾಡಿದ ವಿಷವನ್ನು ತಿನ್ನೆಂದಾರೆಂದು ಹೇಳಿದನು. ಆ ಕ್ಷಣದಲ್ಲಿ ಅವರ ಸರ್ವ ಚಾರ್ವಾಕರೆಲ್ಲಾ ಕೂಡಿಕೊಂಡು ದೊಡ್ಡದೊಂದು ಕಬ್ಬಿಣದ ಕಡಾಯಿಯೊಳಗೆ ಇಪ್ಪತ್ತ ಮಣ ಕಾಡು- ಹತ್ತು ಮಣ ಪಾಷಾಣ ವೈ ಇದು ಮಣ ರಕ್ತ ಸಿಂಗಿಯೂ ಇನ್ನು ಕೆಲವು ವಿಷ ಪದಾರ್ಥವನ್ನು ಹಾಕಿದರು ಅವೆಲ್ಲವನ್ನು ಅಗ್ನಿಯಿಂದಾ ಕರಗಿಸಿ ರಸ ಪಾಕ ಮಾಡಿದರು ತರುವಾಯ ಅರಸನು ತನ್ನ ಸಮಾಂತ್ರ ಜನರನ್ನು ಕರತರಿಸಿದನು- ಬಸವೇಶ್ವರನು ಸಹಾ ತನ್ನ ಗಣಂಗಳನ್ನು ಶಿವಶರಣರನ್ನು ಕರಿಸಿದನು- ಅದರ ಮೇಲೆ ಅರಸು ತನ್ನ ಜೈನರಿಗೆ ಹೇಳಿದ್ದು- ಈ ರಸವನ್ನು ನೀವು ಭಕ್ಷಿಸುವರೆಂದು ಹೇಳಲು. ಜೈನ ಚಾರ್ವಾಕರು ಅಂದರು- ಈ ಶಿವಶರಣರೆಂಬುವರು ಭಕ್ಷಿಸಿದರೆ ನಾವು ಇವರಲ್ಲಿ ಕೂಡಿಯಿರುವೆವೆಂದು ಹೇಳಿದ್ದನ್ನು ಬಸವೇಶ್ವರನು ಕೇಳಿ ಆ ಕ್ಷಣದಲ್ಲಿ ಆ ಕಡಾಯಿ ಸಮೀಪಕ್ಕೆ ಬಂದು ದಾಸಕ್ಕೈಯ್ಯಗಳೆಂಬ ಶಿವಶರಣರನ್ನು ಕರದು ನೀವು ಈ ರಸವನ್ನು ಭಕ್ಷಿಸುವುದೆಂದು ಹೇಳಲು. ಅವರು ತಮ್ಮ ಜನರನೆಲ್ಲಾ ಕರಕೊಂಡು ಕೊಡಲಿಕ್ಕೆ ಆರಂಭ ಮಾಡಿದರು. ಮತ್ತ ಒಂದು ದೊಡ್ಡ ಚಪ್ಪಟು ಆ ಕಡಾಯಿಯಲ್ಲಿಟ್ಟು ಬಸವೇಶ್ವರನು ದೇವರಿಗೆ ಸ್ತೋತ್ರ ಮಾಡಿ ದಾಸಕ್ಕೈಯ್ಯಗಳಿಗೆ ಕೊಟ್ಟನು- ಅವರು ಹತ್ತು ಬಗಸಿ ಕುಡಿದರು ಉಳಿದಾದವರು ಎಲ್ಲಾ ತಿನ್ನೆಂದರು ಮಿಕ್ಕಾದವರಿಗೆ ಬಂದಿಷ್ಟಾದರು ಸಿಗಲಿಲ್ಲವು- ಈ ಪ್ರಕಾರದಲ್ಲಿ ಶಿವಶರಣರು ಸಲ್ಲಿಸಿದರು- ಅರಸು ಆಶ್ಚರ್ಯವಾಗಿ ಶರಣರು ದೊಡ್ಡವರೆಂದು ಅರಮನೆಗೆ ನಡದನು ಸಕಲ ಜನರು ಕೂಡಿ ಬಸವ ಆಲಯಕ್ಕೆ ಬಂದು ಕೂಡಿದರು- ॥

೧ ಮಾದರ ಕೇತಯ್ಯನೆಂಬ ಶರಣನು ಒಂದು ದಿವಸ ಮಲಗಿದ್ದ ಹಾಸಿಗೆಯಲ್ಲಿ ಪ್ರಾಣ ಹೋಗಿ ಸತ್ತಿದ್ದನು. ಸಮಸ್ತ ಗಣಂಗಳು ಅವನ ಬಳಿಯಲ್ಲಿ ಕೂಡಿದರು ಅವರಲ್ಲಿ ಮಡಿವಾಳಯ್ಯನು ಬಾರದ ಕಾರಣ ಅವನನ್ನು ಕರೆಯಲಿಕ್ಕೆ ಕಳುಹಿದರು- ಅವರು ಮಾದರ ಕೇತಯ್ಯನು ಸತ್ತಿದ್ದಾನೆಂದು ಹೇಳಿದ ಮಾತನ್ನು ಕೇಳಿದಾಕ್ಷಣ ಅವನು ಮಹಾ ಕೋಪದಿಂದಾ ಬಂದನು- ಮೇಕೆ ಹಿಂಡ ದೇವರು ಇವನನ್ನು ಕರಿಸಿ ಹೇಳಿದ್ದೀವೆಂದರೆ- ಶರಣರಿಗೆ ಮರಣವೇ ಇಲ್ಲವು. ಪರಲೋಕದಲ್ಲಿಪ್ಪ ದೇವರಿಗೆ ಏನಾದರೂ ಮಾಡಿ ಹೇಳುಯೆಂದರು

ಯೋಪರಮಾತ್ಮನೇ ನೀನು ಮೂರು ಲೋಕಕ್ಕೆ ಹಿತಾರ್ಥವನೆಂದು ಕೂಗಿ ಹೇಳಿಕೆಕ್ಕೆ ಮಹಾಸಂತೋಷವಾಗಿ ದೇವರು ಮಾದರಕೇತ್ತೆ
ಯನವರ ಪ್ರಾಣವನ್ನು ತಿರಿಗಿ ಕಳುಹಿಸಿದನು- ಆ ಗತ ಶರಣನು ಎದ್ದು ಸಕಲ ಶರಣರಿಗೆ ನಮಸ್ಕಾರವಮಾಡಿ ಕುಳಿತನು- ಈ ವೃತ್ತಾ
ಂತವನ್ನು ಅರಸನು ನೋಡಿ ಶರಣರ ಕೊಂಡಾಡಿ ತನ್ನ ಅರಮನೆಗೆ ಹೋದನು- ॥ ೧ ಚನ್ನಮ್ಮನೆಂಬ ಭಕ್ತಳು ಒಂದು ಬಸವೇ
ಶ್ವರನೆಂಬ ಲಿಂಗಕ್ಕೆ ತನಗೆ ರುಚಿಯಾದ ಪದಾರ್ಥವನ್ನು ಕೊಡುತ್ತಿದ್ದಳು- ಒಂದು ದಿವಸ ಒಂದು ಪಲ್ಲೆಯು ಬಹಳ ರುಚಿಯಾ
ಗಿದ್ದ ಕಾರಣದಿಂದಾ ತನ್ನ ತೊತ್ತಿನ ಸಂಗಡ ಕಳುಹಿ ಕೊಟ್ಟಳು- ಗುಡಿಯ ಬಾಗಲು ಮುಚ್ಚಿದ್ದ ಕಾರಣ ಆ ತೊತ್ತು ಜಾಲಹರಿಯ
ಲ್ಲಿ ನಿಂತು ಧ್ವನಿಮಾಡಿ ಆ ಪದಾರ್ಥವನ್ನು ತಳಿಗೆಯಿಂದ ಕೊಟ್ಟಳು ಅದನ್ನು ಲಿಂಗವು ತೆಕ್ಕೊಂಡು- ಅರಸನು ತಂದಿದ್ದ ಹರಿವಾಣವ ಕೊಟ್ಟ
ನು ಅದು ಬಂಗಾರದ್ದಾಯಿತು- ಅದನ್ನು ತಂದು ದೇವರ ಕೋಣೆಯಲ್ಲಿ ಇಟ್ಟಳು- ಗುಡಿಯ ಪೂಜಾರಿಯು ಹರಿವಾಣವು ಇಲ್ಲ
ದ್ದನ್ನು ಕಂಡು ಅರಸನಿಗೆ ಹೇಳಿದನು- ಅರಸನು ವೂರೊಳಗೆ ಮನೆಮನೆಗೆ ಹುಡುಕಲಾಗಿ ಇವಳ ಮನೆಯಲ್ಲಿ ಸಿಕ್ಕಿತು- ಚನ್ನಮ್ಮ
ನನ್ನು ವೈದು ಶಿಕ್ಷೆ ಮಾಡಲಿಕ್ಕೆ ಆರಂಭಿಸಿದರು- ಆಕೆ ಅಂದಳು- ನಾನು ಅನ್ಯಾಯ ಮಾಡಲಿಲ್ಲವು ನನಗೆ ಕೊಟ್ಟಂಥಾ ಬಸವೇ
ಶ್ವರನ ಸಾಕ್ಷಿ ಹೇಳಿಸುತ್ತೇನೆಯೆಂದು ಹೇಳಲಾಗಿ ಯೆಲ್ಲರು ಹಾಸ್ಯಮಾಡಿದರು- ಆಕೆಯು ಸತ್ಯವಾಗಿ ಹೇಳುತ್ತೇನೆಂದು ಹೇ
ಳಿಕ್ಕೆ ಪಲ್ಲೆಯ ದಾಗರಿ ನೋಡುವಾಯೆಂದು ಅರಸು ಸಕಲ ಜನರನ್ನು ಕರಕೊಂಡು ದೇವಾಲಯಕ್ಕೆ ಬಂದನು- ಆ ಚನ್ನಮ್ಮ
ಯು ದುಃಖಿಸಿ ನಿಂತು ಅಂದಳು- ಎಲೋ ದೇವರೇ ನೀನು ಅನ್ಯಾಯ ಮಾಡಿ ನನ್ನ ತಳಿಗೆಯನ್ನು ಇಟ್ಟುಕೊಂಡು ಅರಸನ
ಹರಿವಾಣವನ್ನು ನನಗೆ ಕಳುಹಿದಿಯೆಂದು ಕೂಗಲಾಗಿ ಆ ಬಸವೇಶ್ವರ ಲಿಂಗವು ತನ್ನ ಬಾಯಿಂದ ತಳಿಗೆಯನ್ನು ಉಗುಳಿತು
ಅರಸು ಅದನ್ನು ನೋಡಿ ತನ್ನರಮನೆಗೆ ಹೋದನು- ॥— ೧ ಅದಕಿ ಮಾರೈಯನವರು ಬಜಾರದಲ್ಲಿ ಬಿದ್ದಂಥಾ ಕಾಳನ್ನು ತಂ
ದು ಅಡಿಗೆಮಾಡಿ ವುಣುತಿದ್ದರು- ಒಂದು ದಿವಸದಲ್ಲಿ ಬಸವೇಶ್ವರನ ಅರಮನೆಗೆ ಹೋಗಿಯಿರಲಾಗಿ ನೀವು ಸರ್ವಗಣಂಗಳು
ನನ್ನ ಮನೆಗೆ ವುಣಲಿಕ್ಕೆ ಬರಬೇಕೆಂದು ಬೇಡಿಕೊಂಡನು- ಅವರು ಅಂದರು- ನೀನು ಒಂದು ಹಿಡಿಕುಂಬ ಕಾಳು ಆರಿಸಿಕೊ
ಂಡು ನಿನ್ನ ಹೆಂಡತಿಗೂ ನಿನಗೂ ಸಾಲದು ನಾವು ಲಕ್ಷದ ಮೇಲೆ ತೊಂಬತ್ತು ಆರು ಸಾವಿರ ಜನರು ಯಿದ್ದೇವೆ- ನಿನ್ನ ಕೈಯಿಂದ
ಆಗದು ಎಂದು ಹೇಳಿದರು- ಅದಕ್ಕೆ ಯೇನು ಚಿಂತೆಯಿಲ್ಲಾ ನೀವು ಸರ್ವರು ಬರಬೇಕೆಂದು ಆಗ್ರಹಮಾಡಿದನು- ಬಸ
ವೇಶ್ವರನು ಗಣಂಗಳಿಗೆ ಹೇಳಿದನು- ನೀವು ಈತನು ಬಡವನೆಂದು ಹಾಸ್ಯಮಾಡಬೇಡಿರಿ ನೀವು ಹೋಗಬೇಕೆಂದು ಹೇಳಿದನು-
ಮತ್ತು ಬಸವೇಶ್ವರನು ಒಂದು ಮುಷ್ಟಿ ಅಕ್ಕಿಯನ್ನು ಕೊಟ್ಟನು ಆತನು ವೈದು ಮನೆಯಲ್ಲಿ ಅಡಿಗೆಮಾಡಿ ದೇವರಿಗೆ ಬೇಡಿಕೊಂಡ
ನು ಆತನ ಭಕ್ತಿಗೆ ಮೆಚ್ಚಿ ತಾನೇ ಆತನ ಮನೆಯಲ್ಲಿ ಬಂದು ಎಲ್ಲಾ ಗಣಂಗಳಿಗೆ ವುಣಿಸಿದನು- ಮತ್ತು ವುಡಲಿಕ್ಕೆ ಪೀತಾಂಬ
ರ ಮಡಿಯನ್ನು ಕೊಟ್ಟು ಕಳುಹಿಸಿದನು- ಈ ವರ್ತಮಾನವ ಅರಸು ಕೇಳಿ ಸಂತೋಷವಾದನು- ॥
೧— ಒಂದು ದಿವಸ ವೇಶ್ವರನ ಮನಸ್ಸಿನಲ್ಲಿ ಸ್ವಲ್ಪ ಅಹಂಕಾರವು ಬಂತು- ಅದೇನಂದರೆ- ನಾನು ಮಾಡುವ ಕಾರ್ಯವು ದಿನದಿನಕ್ಕೆ ಲಕ್ಷದ
ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆ ನೀಡುತ್ತೇನೆಂದು ನೆನಸಲು ಆ ಕ್ಷಣದಲ್ಲಿ ದೇವರು ಒಬ್ಬ ಬಡವನ ರೂಪವನ್ನು
ಧರಿಸಿ ಬಸವೇಶ್ವರನ ಬಳಿಗೆ ಬಂದು ಹೇಳಿದ್ದೇನಂದರೆ ನಾವು ಉಪವಾಸಮಾಡಿ ಇಂದಿಗೆ ಮೂರು ದಿವಸವಾಯಿತು ಆದಕಾರ
ಣದಿಂದಾ ನೀನೇ ನನಗೆ ವುಣಲಿಕ್ಕೆ ನೀಡಬೇಕೆಂದು ಕೇಳಿದನು- ಆತನು ಸಂತೋಷವಾಗಿ ನೀಡುವೆನೆಂದು ಅವನನ್ನು ಕುಂ
ಡ್ರಿಸಿ ವುಣಲಿಕ್ಕೆ ನೀಡಿದನು- ನೀಡಲಾಗಿ ಅವನು ಅಷ್ಟು ಗಣಂಗಳಿಗೆ ಮಾಡಿದ ಪದಾರ್ಥವನ್ನೆಲ್ಲಾ ವುಂಡು ಬಿಟ್ಟು ಮತ್ತು ಸಾಲದು ನೀ
ಡುಯೆಂದು ಕೇಳಲು ಸಕಲ ಗಣಂಗಳು ಹಸಿದು ಬಂದರು ಈ ಬಡವನು ನನಗೆ ಪೂರ್ಣವಾಗಿ ನೀಡು ಎಂದನು ಈಗ ನಾನೇ
ನು ಮಾಡಲೆಂದು ಹುಚ್ಚನಾಗಿ ಕುಂತನು- ಗಣಂಗಳು ಬಹು ಹಸಿವಿನಿಂದಾ ಬಸವಣ್ಣಗೆ ಬೈದರು- ಈ ಸುದ್ದಿಯನ್ನು ಚನ್ನ
ಬಸವೇಶ್ವರ ಕೇಳಿ ಆತ್ಮದಲ್ಲಿ ತಿಳಿದು ಬಸವಣ್ಣಗೆ ಅಂದನು- ನಿನಗೆ ಎಂಥ ಜ್ವರ ತಪ್ಪಿತು ಆ ಬಡವನ ರೂಪು ಯೇನೆಂದು ತಿಳಿಸಿ-

ನನ್ನನ್ನು ರಕ್ಷಿಸಬೇಕೆಂದು ಅಡ್ಡಬಿದ್ದರು ಆಗ ದೇವರು ಅದೃಶ್ಯವಾದನು ಮಾಡಿದ ಅಗ್ನಿಯಲ್ಲವು ಯಿದ್ದಹಾಗೆ ಯಿತ್ತು
ಅದರ ಮೇಲೆ ಗಣಂಗಳು ಪುಂಡು ಸಂತೋಷವಾದರು ಈ ಸುದ್ದಿಯನ್ನು ಅರಸು ಕೇಳಿ ಬಹಳ ಆಶ್ಚರ್ಯವಾದ
ನು-॥ ೧ ಮುಗ್ಧಸಂಗಪ್ಪಯ್ಯ ಎಂಬ ಶರಣನು ದೇವರಲ್ಲಿ ಬಹಳ ವಿಶ್ವಾಸಯುಕ್ತನಾಗಿ ಒಬ್ಬರ ಸಂಗಡವಾದರು ಮಾತಾ
ಡನು - ಈ ಶರಣನು ದಾರಿಯಲ್ಲಿ ಬರುತ್ತಿರಲಾಗಿ ಜೈನ ಚಾರ್ವಾಕರು ಈತನನ್ನು ತರುಬಿ ನಾವು ನಿನಗೆ ಹೇಳಿದ
ಮಾತು ಕೇಳಬೇಕೆಂದು ಕರೆದುಯ್ದು ಅಡವಿಯೊಳಗೆ ಹೂಳಿಟ್ಟರು - ಸಕಲ ಗಣಂಗಳು ವಿಚಾರ ಮಾಡಿದ ಮೇಲೆ
ಮುಗ್ಧಸಂಗಯ್ಯನನ್ನು ಕಾಣಲಿಲ್ಲವು ಆದಕಾರಣ ಬಸವಣ್ಣನು ಬಹಳ ಚಿಂತೆಯಿಂದಿರಲು ಹೂಗಿನ ಮಾರ್ಯೆಯನೆಂಬುವ
ಶರಣನು ತನ್ನ ಬಾಯಿಂದ ಕೂಗುವಾಗ ವನ ಶಬ್ದವನ್ನು ಮುಗ್ಧಸಂಗಯ್ಯನು ಕೇಳಿ ತಾನು ಕುಳಿತ ಕುಣಿಯೊಳ
ಗಿಂದ ಹೊರಟು ಬಂದನು - ಹೊರಟು ಬರುವದನ್ನು ಬಹು ಜನರು ಕಂಡು ಬೆರಗಾಗಿ ನಮಸ್ಕಾರವ ಮಾಡಿದರು -
ಬಸವೇಶ್ವರನು ಹರುಷವಾದನು ಯೆರಡನೆ ದಿವಸದಲ್ಲಿ ಇದೇ ಸಂಗಯ್ಯನು ಪೂಜಿಸಿ ನ ಬಜಾರಿನಿಂದ ಬರಲಾ
ಗಿ ಜೈನರು ಕಂಡು ಯಿವನನ್ನು ಕರದೊಯ್ದು ಒಬ್ಬ ಪಾತ್ರದವಳ ಮನೆಯಲ್ಲಿ ಕುಳ್ಳಿರಿಸಿ ಆ ಪಾತ್ರದವಳಿಗೆ ನೀನು ಈತ
ನನ್ನು ಮೋಹಿಸು ಅದಕ್ಕಾಗಿ ನಿನಗೆ ಹತ್ತು ರೂಪಾಯಿಗಳನ್ನು ಕೊಡುತ್ತೇವೆಯೆಂದು ಅವನನ್ನು ಅವಳಿಗೆ ಒಪ್ಪಿಸಿ
ಹೋದರು - ಅವಳು ತನ್ನ ಮಂಚದ ಮೇಲೆ ಕುಳ್ಳಿರಿಸಿ ತಾನು ಬಹು ಶೃಂಗಾರವಾಗಿ ಮಂಚದ ಮೇಲೆ ಬಂದು ಈ
ತನನ್ನು ಕಾಮಚೇಷ್ಟೆಯಿಂದ ಕೆಡಿಸಲಿಕ್ಕೆ ಆರಂಭಿಸುವದನ್ನು ಕಂಡು ಈತನು ಅಂದನು - ನನ್ನ ತಾಯಿಯೇ ನಿನ್ನ
ಕೊರಳಲ್ಲಿಯಿರುವ ಹರಗಳು ಯೇನು ಎಂದು ಕೇಳಲು ಅದಕ್ಕೆ ಯವಳು ಓ ಮುಗ್ಧ ಜಂಗಮನೇ ನೀನು ನನ್ನ ಮೋ
ಹಿಸಬೇಕೆನ್ನಲು - ಅದಕ್ಕೆ ಮೋಹಿಸು ಅಂದರೆ ನನಗೆ ದರ ಅರ್ಥವು ತಿಳಿಯುವದಿಲ್ಲಾ ನಿನ್ನ ಯಿಚ್ಛೆಯಿದ್ದರೆ ನನಗೆ ಹೇಳು
ವಾಗಿಥೆವು ನಾಶಿಕ್ಕೆ ನೀಡು ಯೆಂದು ಕೇಳಲು ಅವಳು ನಾಚಿಕೊಂಡು ನಮಸ್ಕಾರ ಮಾಡಿ ಪೂಜಿಸಿ ಬಸವೇಶ್ವರನ ಮನೆಗೆ
ಕಳುಹಿಸಿದಳು - ಬಸವೇಶ್ವರನು ಅವನನ್ನು ಶರಣನೇ ನೀನು ಯೆಲ್ಲಿಗೆ ಹೋಗಿದ್ದಿಯೆಂದು ಕೇಳಲು - ಅದಕ್ಕೆ ನಾನು
ನಿನ್ನೆ ರಾತ್ರಿ ಒಬ್ಬ ಸೂಳೆಯ ಮನೆಗೆ ಜೈನರು ಹೋಗುವ ಹಾಗೆ ಮಾಡಿದರು - ಆದರೆ ಅವಳು ನನ್ನ ತಾಯಿಗಿಂತಾ ಹೆ
ಚ್ಚು ಪ್ರೀತಿ ಮಾಡಿ ಪೂಜಿಸಿ ನನ್ನ ಮಠದ ತನಕ ಕಳುಹಿಸಿ ಕೊಟ್ಟು ಹೋದಳು - ಯೆಂದು ಹೇಳುವದನ್ನು ಸಕಲರು ಕೇ
ಳಿ ಅವಳನ್ನು ತರಿಸಿ ನಿನ್ನೆ ಈತನು ನಿನ್ನ ಬಳಿಗೆ ಬಂದು ಏನು ಮಾಡಿದನು ಯೆನ್ನಲು - ನನ್ನ ಮನೆಗೆ ಯಿವರೇ ಬರಲಿಲ್ಲ
ಜೈನ ಚಾರ್ವಾಕರು ನನಗೆ ಹತ್ತು ರೂಪಾಯಿಗಳ ಕೊಟ್ಟು ಯಿವನನ್ನು ಮೋಹಿಸು ಯೆಂದು ಕರಕೊಂಡು
ಬಂದು ಹೇಳಿ ಒಪ್ಪಿಸಿ ಹೋದರು ನಾನು ಯಿವರನ್ನು ಮೋಹಿಸುವದಕ್ಕೆ ಸಮೀಪಕ್ಕೆ ಹೋಗಲು ನನ್ನ ತಾಯಿ
ಯೇ ನನಗೆ ಹೇಳುವಾಗಿಯಥೆವು ನಾಶಿಕ್ಕೆ ನೀಡೆಂದು ಹೇಳಲು ನಾನು ಯಿವರ ಭಾವ ನೋಡಿ ಪೂಜಿಸಿಕ್ಕೆ ನೀ
ಡಿ ನಿಮ್ಮ ಮಠದ ತನಕ ಕರತಂದೆನು - ನಿಮ್ಮ ಶರಣರು ಕೇಡು ವದುಂಟೇ ಯೆಂದು ಹೇಳಿದಳು - ಆಗಲು ಬಸ
ವೇಶ್ವರನು ಪುಡುಗರಿ ಮಾಡಿ ಕಳುಹಿದನು - ಈ ಸುದ್ದಿ ಅರಸು ಕೇಳಿ ಸಂತೋಷವಾದನು - ॥—
೧— ಚನ್ನಬಸವೇಶ್ವರನ ಮಹತ್ವವೇನಂದರೆ ಬಸವೇಶ್ವರನು ಮೊದಲಾದ ಸಕಲ ಜನರನ್ನು ಕೂಡಿಸಿ ಪೂಜಿಸುತ್ತಿದ್ದನು-
ಕುಲಭೇದವೇ ಯಿದ್ದಿಲ್ಲ ಆಗಲು ಚನ್ನಬಸವೇಶ್ವರನು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನರೊಳ

ಗೆ ಆಶಿಸ ತೆಗೆದು ಶುದ್ಧಮಾಡಿದನು ಅದು ಹ್ಯಾಗೆಂದರೆ- ಅತೀತರು ಆರು ಸಾವಿರ- ವಿರಕ್ತರು ಮೂರು ಸಾವಿರ-
೬೦೦೦ ೩೦೦೦
ಪಂಚಸಂತತಿ ಹನ್ನೆರಡು ಸಾವಿರ- ಇಂತೀ ಇಪ್ಪತ್ತೊಂದು ಸಾವಿರ ಜನಕೆ- ಕ್ರಿಯಾಸ್ಥಲವನ್ನು ಕೊಟ್ಟನು- ಉಳಿದ
೧೨೦೦೦ ೨೧೦೦೦
ಪುರಾತನ ಅರವತ್ತಮೂರು ಮಂದಿ ಪುರಾತರು- ನೂರಾ ಒಂದು ಮಂದಿ ವಿರಕ್ತರು- ಏಳ್ನೂರು ಎಪ್ಪತ್ತು ಮಂ
೬೩ ೧೦೧ ೭೭೦
ದಿ ಅಮರಗಣಂಗಳು- ಈ ಪ್ರಕಾರ ಆಶಿಸ ತೆಗೆದು ಕ್ರಿಯಾಸ್ಥಲವನ್ನು ತೋರಿಸಿ ಸ್ಥಲವನ್ನು ವಿವರಿಸಿದನು- ಅದು ಹ್ಯಾಗೆಂದ
ರೆ- ಭಕ್ತಸ್ಥಲ ೧- ಮಹೇಶಸ್ಥಲ ೨- ಪ್ರಸಾದಸ್ಥಲ ೩- ಪ್ರಾಣಲಿಂಗಸ್ಥಲ ೪- ಶರಣಸ್ಥಲ ೫- ಐಕ್ಯಸ್ಥಲ ೬- ಈ ಪ್ರಕಾ
ರ ಆರು ಸ್ಥಲಗಳನ್ನು ನಿರ್ಮಿಸಿ ಇಟ್ಟನು- ಸಕಲಗಣಂಗಳಿಗೆ ಒಂದೊಂದು ಉದ್ಯೋಗ ಮಾಡಲಿಕ್ಕೆ ಅಪ್ಪಣೆ ಮಾಡಿದನು-
೬
ಅವರವರ ತಮ್ಮ ತಮ್ಮ ಕೈಕೆಲಸಗಳಿಂದ ಬದುಕುವ ಅಪ್ಪಣೆ ಮಾಡಿ- ಉಳಿದ ಗಣಂಗಳಿಗೆ ಒಂದೊಂದು ಕಾಯಕ ಕೊಟ್ಟನು-
ಸಕಲ ಜೈನರ ಮತವನ್ನು ನಾಶಮಾಡಿದನು- ಅವನು ಬಂದು ಮುವತ್ತು ವರುಷದೊಳಗೆ ಶಿವಮತವನ್ನು ನಿರ್ಮಾಣ ಮಾಡಿದ
ನು ಸಕಲಗಣಂಗಳು ಒಂದೊಂದು ಮಹಿಮೆಯನ್ನು ಉಂಟುಮಾಡಿ ಜೈನರನ್ನು ತನ್ನ ಮತದಲ್ಲಿ ಕೂಡಿಸಿ ಲಿಂಗವನ್ನು ಕಟ್ಟಿ
ಗುರುತು ಮಾಡಿದನು- ॥ ೧ ನೂಲಿಯ ಚಂದಯ್ಯನೆಂಬುವ ಶರಣನ ಮಹತ್ವವೇನೆಂದರೆ· ಒಬ್ಬ ಜಂಗಮನು ತನ್ನ ಲಿಂ
ಗವು ಬಂದು ಬಾವಿಯಲ್ಲಿ ಬಿದ್ದ ಕಾರಣ ಅವನು ನೇಮಕ ಮಾಡಿ ಲಿಂಗವು ಸಿಕ್ಕಿದರೆ ನಾನು ಉಣ್ಣು ಬರುವೆನು- ಇಲ್ಲದಿ
ದ್ದರೆ ನಾನು ಇಲ್ಲಿ ಸಾಯುವೆನೆಂದು ಕೂತುಕೊಂಡನು- ಆಗಲು ಅವನ ಲಿಂಗವನ್ನು ತೆಗೆಯಲಿಕ್ಕೆ ಬಸವಣ್ಣನು ಬ
ಹಳ ಜನರನ್ನು ಕೂಡಿಸಿ ನೀರನು ತೆಗೆಸುತ್ತಿದ್ದನು- ಆದರೆ ಅರಸನು ಈ ಬಾವಿಯ ನೀರು ಎಂದೆಂದಿಗೂ ಸವಿಯ
ಲಿಕ್ಕಿಲ್ಲವು- ಈತಗೆ ಮತ್ತೊಂದು ಲಿಂಗವನ್ನು ಕಟ್ಟಬೇಕೆಂದು ಹೇಳಲು ಅದಕ್ಕೆ ಬಸವಣ್ಣನು ಈತನು ನೇಮಕ
ಮಾಡಿಕೊಂಡಿದ್ದಾನೆ ನಾವು ಹ್ಯಾಗೆ ಹೇಳಬೇಕು- ಅಂದನು- ಮತ್ತು ಇವನ ದೆಶೆಯಿಂದಾ ಅಷ್ಟು ಗಣಂಗಳು
ಉಪವಾಸವಾಗಿದ್ದರು- ಆ ಸಮಯದಲ್ಲಿ ನೂಲಿಯ ಚಂದಯ್ಯನು ಅಲ್ಲಿಗೆ ಬಂದು ತನ್ನ ಕೈಯೊಳಗಿನ ಮಾದಿನೂಲನ್ನು
ಬಾವಿಯೊಳಗೆ ಬಿಟ್ಟರು- ಆ ನೂಲು ಆ ಲಿಂಗದ ತುದಿಗೆ ಹತ್ತಿ ಆ ಲಿಂಗನ ಸಂಗಡ ಸಾವಿರ ಲಿಂಗವು ಹತ್ತಿಕೊಂಡು
ಬಂದವು- ಮೇಲಕ್ಕೆ ತೆಗೆದು ಕೂತಿದ್ದ ಜಂಗಮನಿಗೆ ನಿನ್ನ ಲಿಂಗವು ದಾವುದು ನೀನು ನೋಡಿ ತಕ್ಕೋಬೇಕೆಂದು ಹೇಳಲು ಆ ಜಂ
ಗಮನು ತನ್ನ ಲಿಂಗದ ಗುರುತು ಹಿಡಿದು ತಕ್ಕೊಂಡನು- ಸಕಲರು ತಮ್ಮ ಮನೆಗಳಿಗೆ ಹೋದರು ಬಸವಣ್ಣನು ಈ ಜಂಗಮ
ನನ್ನು ಕರಕೊಂಡು ತನ್ನ ಅರಮನೆಗೆ ಹೋದನು- ॥ ೧ ಪುಷ್ಪದಂತನೆಂಬ ಶರಣನು ದಿನದಿನ ತನ್ನ ತೋಟದೊಳಗಿ
ರುವ ಹೂವನ್ನು ಕೊಯಿದು ನಿತ್ಯಕಾಲವು ತ್ರಿಪುರಾಂತಕಗೆ ನೂರಾಯೆಂಟು ಹೂವುಗಳನ್ನು ಏರಿಸುತ್ತಿದ್ದನು-
ಒಂದು ದಿವಸಕ್ಕು ಗುಡಿಯಲ್ಲಿರುವ ಲಿಂಗಕ್ಕೆ ಏರಿಸುವ ಸಮಯದಲ್ಲಿ ಒಂದು ಹೂವು ಕಡಿಮೆ ಆದ ಕಾರಣ- ತನ್ನ
ಶಿರವನ್ನು ಕೊಯಿದು ಧರಿಸಿದನು- ಆತನ ಮಗನು ತಂದೆ ಬಾರದ ಕಾರಣ· ಗುಡಿಯಲ್ಲಿ ತಂದೆಯನ್ನು ನೋಡಲಿಕ್ಕೆ ಬಂ
ದು ಹೋಗಿ ನೋಡುವ ಸಮಯದಲ್ಲಿ ಸತ್ತು ಬಿದ್ದಿರುವದನ್ನು ಕಂಡು ಇವನು ಸಹ ತನ್ನ ಶಿರವನ್ನು ಕೊಯಿದು ಕೊಳ್ಳಲಿ
ಕ್ಕೆ ಆರಂಭ ಮಾಡುವದನ್ನು ದೇವರು ಕಂಡು ಇವನ ಕೈ ಹಿಡಿದು ನೀನು ಏನು ಬೇಡುತ್ತಿ ಬೇಡಿಕೊಯನ್ನಲು· ಅವನು
ನನ್ನ ತಂದೆಯನ್ನು ಎಬ್ಬಿಸಬೇಕು ಮತ್ತು ಈ ಪುರದ ಅರಸನನ್ನು ನಾಶಮಾಡಬೇಕು- ಯಾತಕ್ಕೆಂದರೆ· ನಮ್ಮ ಶ
ರಣರನ್ನು ಆನೆಕಾಲಿಗೆ ಕಟ್ಟಿ ಎಳಸುತ್ತಾನೆಂದು ಹೇಳಿದನು- ದೇವರು ಇವನ ತಂದೆಯನ್ನು ಎಬ್ಬಿಸಿ ಆ ದುಷ್ಟ

ವಾದನು- ಈ ಸುದ್ದಿಯನ್ನು ಬಸವೇಶ್ವರ ಕೇಳಿ ಗುಡಿಗೆ ಬಂದು ಯಿವರಿಬ್ಬರನ್ನು ತನ್ನ ದಂಡಿಗೆ ಯೊಳಗೆ ಕುಳ್ಳಿರಿಸಿಕೊಂಡು ತನ್ನ ಅ
ರಮನೆಗೆ ಬಂದನು. ಈ ಮಾತನ್ನು ಅರಸನು ಕೇಳಿ ಬಹು ಸಂತೋಷವಾದನು- ॥
೧೧ ಬಸವೇಶ್ವರನು ಬಹು ಕಾಲ ಯಿರಬಾರದು- ಯೇನೆಂದರೆ- ಹರಳ್ಳಯ್ಯನನ್ನೂ ಮಧುವೈಯ್ಯನನ್ನೂ ಅರಸನು ಹಿಡಿಯ
ಹೇಳಿ ಕಣ್ಣಿಯ ಕಾಲಿಗೆ ಕಟ್ಟಿಸಿ ಯೆಳಸಿದನು ಯಿನ್ನು ಮುಂದೆ ನಾವು ಯಿಲ್ಲಿರಬಾರದು ಯೆಂದು ಮನಸ್ಸಿಗೆ ತಂದು ಗಣಂಗ
ಳ ಮುಂದೆ ನೀವು ನಾವು ಯೇಳ್ನೂರಾಯೆಂಭತ್ತು (೭೮೦) ವರುಷಕ್ಕೆ ನಾವೆಲ್ಲರೂ ಬರಬೇಕು ನಮಗೆ ದೇವರ ಅಪ್ಪಣೆಯೂ ಯಿ
ತು ಮುಂದೆ ನಾವು ಬರುವದಕ್ಕೆ ದೇವರ ನಾಮವನ್ನು ಸ್ತುತಿ ಮಾಡಿ ಹನ್ನೆರಡು ಸಾವಿರ ಕಾಲಜ್ಞಾನ ಶ್ಲೋಕಗಳನ್ನು ಬರದು ತ
ಮ್ಮ ಅನುಭವ ಮಂಟಪದಲ್ಲಿ ಯಿಟ್ಟು ತಾವು ಕಪ್ಪಡಿಗೆ ಹೋಗಿ ಸಂಗಮದಲ್ಲಿ ಅದೃಶ್ಯವಾದರು- ॥
೧ ಬಸವೇಶ್ವರನು ಅದೃಶ್ಯವಾದಂಥಾ ಸುದ್ದಿಯನ್ನು ನೀಲಲೋಚನೆಯು ಕೇಳಿ ಅದೃಶ್ಯವಾದಳು ನಾಗಲಾಂಬಿಕೆಯು ಅದೃ
ಶ್ಯವಾದಳು ಈ ಸುದ್ದಿಯನ್ನು ಅರಸು ಕೇಳಿ ಬಹಳ ಚಿಂತಾಕ್ರಾಂತನಾಗಿ ಬಸವೇಶ್ವರನ ಅರಮನೆಗೆ ಬಂದು ಚನ್ನಬಸವೇ
ಶ್ವರನಿಗೆ ಬಹಳ ಸಮಾಧಾನವನ್ನು ಹೇಳಿ ಅವನ ಸಂಗಡ ನಿನ್ನ ಮಾವನವರು ಮಾಡಿದ ಪ್ರಧಾನತ್ವವನ್ನು ನೀನೇ ಮಾಡಬೇಕು
ಯೆಂದು ತನ್ನ ಅರಮನೆಗೆ ಕರದೊಯ್ದು ಸಿಂಹಾಸನದ ಮೇಲೆ ಕುಳ್ಳಿರಿಸಿ ಮುದ್ರೆಯನ್ನು ಕೊಟ್ಟು ನನ್ನ ರಾಜ್ಯಭಾರವನ್ನು
ನೀನೆ ಮಾಡಿ ಸಂರಕ್ಷಿಸುವದೆಂದು ಹೇಳಿ ಹೀಗೆ ಮೂರು ತಿಂಗಳು ನಡಿಸಿದನು- ೧ ಒಬ್ಬ ಶರಣರಾಗಿ ಅದೃಶ್ಯವಾದರು-
-ಚನ್ನಬಸವೇಶ್ವರನು ತಾನು ಮುಂದೆ ಬರುವದಕ್ಕೆಯೂ ಮತ್ತು ದೇವರ ಮುಂದೆ ಶರಣರು ಬರುವದಕ್ಕೆಯೂ ಮೂರು
ತಿಂಗಳ ತನಕ ಕಾಲಜ್ಞಾನವನ್ನು ಬರದು ಛತ್ರರಕ್ಕೆಯಲ್ಲಿ ಕೊಟ್ಟನು- ॥ ೧ ಜಗದೇವ ಬ್ರಹ್ಮಯನು ಮತ್ತು ಮಲಿಬ್ರಹ್ಮ
ಯನು ಯಿವರಿಬ್ಬರು ಶರಣರು ಕಲ್ಲೂರೆಂಬ ಗ್ರಾಮದಲ್ಲಿದ್ದರು ಇವರಿಬ್ಬರು ದೇವರಲ್ಲಿ ಬಹಳ ವಿಶ್ವಾಸಿಗಳು- ಯಿ
ವರ ತಾಯಿಯು ಬಹಳ ದಿವಸ ದಾಸಿಯಾಗಿದ್ದಳು- ಆಕೆಯ ನಾಮವು ಸತ್ಯಕ್ಕನೆಂಬ ಶರಣೆಯು. ಕಲ್ಯಾಣದಲ್ಲಿ ವರ್ತಮಾ
ನ ಕೇಳಿ ತನ್ನ ಮನೆಗೆ ಬಂದು ತನ್ನ ಮಕ್ಕಳ ಸಂಗಡ ಕಲ್ಯಾಣದಲ್ಲಿದ್ದ ಶಿವಶರಣರು ಹರಳ್ಯಯನೂ ಮಧುವೈಯನೂ
ಯೆಂಬ ಶರಣರನ್ನು ಬಿಜ್ಜಳಾಂಕನೆಂಬುವ ಅರಸನು ಯಿವರಿಬ್ಬರನ್ನು ಯಳೆಹೂಟಿ ಕಣ್ಣಿಯ ಕಾಲಿಗೆ ಕಟ್ಟಿಸಿ
ಯೆಳಸಿದನು ಅವರಿಬ್ಬರು ಸತ್ತು ಹೋದರು ಹಾಗು ಬಸವೇಶ್ವರನು ಕಲ್ಯಾಣವ ಬಿಟ್ಟು ಕಪ್ಪಡಿಗೆ ಹೋಗಿ ಸಂಗಮ
ದಲ್ಲೇ ಅದೃಶ್ಯವಾದನು ನೀಲಾಂಬಿಕೆಯೂ ನಾಗಲಾಂಬಿಕೆಯೂ ವುಳಿದ ಕೆಲವು ಶರಣರು ಅದೃಶ್ಯವಾದರು-
ಆದ ಕಾರಣ ನಿಮ್ಮ ಮಹದೇವನಾಣೆ ನೀವು ಯಿಲ್ಲಿಂದಾ ಕಲ್ಯಾಣಕ್ಕೆ ಹೋಗಿ ಬಿಜ್ಜಳರಾಯನನ್ನು ಕೊಂದು
ಬರಬೇಕೆಂದು ಹರಸಿ ಅಪ್ಪಣೆ ಕೊಟ್ಟಳು ಹಿದಳು. ತಾಯಿಯ ಅಪ್ಪಣೆ ಕೊಂಡು ತಾವಿಬ್ಬರು ಕೂಡಿ
ಮಾರ್ಗವ ಹಿಡಿದು ಪ್ರಯಾಣವಾಗಿ ಬಂದು ಕಲ್ಯಾಣದಲ್ಲಿರುವ ಬಸವನ ಅರಮನೆಯನ್ನು ಮುಟ್ಟಿದರು- ಆಗಲು ಚನ್ನ
ಬಸವೇಶ್ವರನನ್ನು ಶರಣು ಮಾಡಿ ನಮಸ್ಕರಿಸಲು. ಚನ್ನಬಸವನು ತನ್ನ ಜ್ಞಾನದಲ್ಲಿ ಯಿವರಿಬ್ಬರು ಬಂದಿರುವ ಕಾರ್ಯ
ವನ್ನು ತಿಳಿದು ನಮ್ಮ ತಂದೆಗಳಿರಾ ನೀವು ಬಂದದ್ದು ಯೇನೆಂದು ಸನ್ಮಾನಿಸಿ ಕೇಳಿದನು ನಾವು ಬಂದದ್ದು ತಾವು
ಶರಣರು ಬಲ್ಲಿರಿ ನಮ್ಮ ಶರಣರನ್ನು ಅರಸು ಯಳೆಸಿದ್ದ ಕಾರಣಕ್ಕೆ ನಾವು ಬಂದೆವು ಸ್ವಾಮಿ. ನಿಮಗೆ ಅರಿಕೆಯು ರಬೇ
ಕೆಂದು ಇವರಿಬ್ಬರು ಹೇಳಲು ಸರ್ವಗಣಂಗಳು ಕೇಳಿ ಹರುಷವಾದರು. ಇವರಿಬ್ಬರು ಚನ್ನಬಸವೇಶ್ವರನ ದಂಡಿಗೆ
ಯ ಮುಂದೆ ಹಿಲ್ಲಾಲ ಹಿಡಿದು ಜಲಗಕ್ಕೆ ಬಂದರು. ಈ ಪ್ರಕಾರ ಯಿರಕ್ಕೆ ಬಂದು ದಿನ ಅರಸು ಸ್ವಾರಿಯ ಹೊರಟು.

ಹೋಗಿಬರುವ ವೇಳೆಯಲ್ಲಿ ಹೊತ್ತುಮುಳುಗಿದ ಕಾರಣ ಬಂದು ಸಾವಿರ ದೀವಟಿಗೆಗಳು ಅರಸನ ಮುಂದೆ ಹಿಡಿದಿದ್ದ
ರು - ಚನ್ನಬಸವೇಶ್ವರನ ಮುಂದೆ ಯರಡು ಹಿಲ್ಲಾಲುಗಳು ಯಿವರಿಬ್ಬರು ಶರಣರು ಹಿಡಿದಿದ್ದರು - ಯಿವರ ಹಿಲ್ಲಾಲುಗಳ
ಬೆಳಕು ಬಹಳ ಪ್ರಕಾಶ ಕಾಂತಿ ಕಾಣುತ್ತಾಯಿದ್ದವು - ಜಾವಾಗರು ಹೇಳಿದರು - ನಿಮ್ಮ ಮುಂದೆ ಸಾವಿರ ದೀವಟಿಗೆಗಳು ಹಿಡಿದ
ವೆ ಆದರೆ ಚನ್ನಬಸವನಲ್ಲಿ ಯಿಬ್ಬರು ಮಾತ್ರವೆ ಹಿಲ್ಲಾಲುಗಳು ಯಿರುತ್ತವೆ - ಅವು ಬಹಳ ಪ್ರಕಾಶವಾಗಿಯಿವೆ - ಅವರಿ
ಬ್ಬರನ್ನು ಕರಿಯಬೇಕೆಂದು ಹೇಳಿದರು - ಹಾಗೆಯೇ ಅರಸನು ಅವರಿಬ್ಬರನ್ನು ಕರಿಸಿ ನೀವು ನನ್ನ ಮುಂದೆ ಹಿಲ್ಲಾಲುಗ
ಳನ್ನು ಹಿಡಿಯಬೇಕು ಯಂದು ಹೇಳಲು - ಅವರಿಬ್ಬರು ನಿನ್ನ ಮುಂದೆ ಹಿಡಿಯಲಿಕ್ಕಿಲ್ಲವೆಂದು ಹೇಳಿದರು - ಅದಕ್ಕೆ ಅ
ರಸನು ಸಿಟ್ಟಿಗೆ ಬಂದು ಯಿವರನ್ನು ಸೆರೆಯಲ್ಲಿಡಿರೆಂದು ಹೇಳಲು - ಅದಕ್ಕವರು ನಾವು ನಿನ್ನ ವೂರಲ್ಲಿ ತಪ್ಪು ಮಾಡಲಿಲ್ಲವೆ
ಂದು ಹೇಳಿದರು - ಅದಕ್ಕೆ ಅರಸನು ಯಿವರನ್ನು ಹಿಡಮುರಿ ಕಟ್ಟಿರಿಯೆಂದು ಅಪ್ಪಣೆ ಕೊಟ್ಟನು - ಅದಕ್ಕವರು ನೀನು
ನಮಗೆ ಈ ಅಪ್ಪಣೆಯನು ಕೊಡಬಾರದೆಂದು ಹೇಳಲು - ಯಿವರನ್ನು ಕಡಿದು ಹಾಕಿರೆಂದು ಅಪ್ಪಣೆ ಮಾಡಿದನು - ಆಳುಗ
ಳು ಕಡಿಯಲಿಕ್ಕೆ ಬರಲು ಯಿವರು ಕೋಪವಾಗಿ ಹೋಗಿ ಅರಸನ್ನು ಖಜಿರಿಯಿಂದಾ ಚುಚ್ಚಿ ಕೊಂದರು - ಇವರ
ನ್ನು ಕೊಲ್ಲುವದಕ್ಕೆ ಬಹು ಜನರು ಬೆನ್ನು ಹತ್ತಿದರು - ಯೆಲ್ಲ ಜನರನ್ನು ಕೊಂದು ಹಾಕಿದರು - ಅರಸನು ಸತ್ತು ಹೋದನು -
ಚನ್ನಬಸವನು ಯಿನ್ನು ಮುಂದೆ ಯಿಲ್ಲಿ ಯಿರಬಾರದೆಂದು ಯೆಲ್ಲಾ ಗಣಂಗಳನ್ನು ಕೂಡಿಕೊಂಡು ತಾವು ಮುಂದೆ
ಬರುವದನ್ನು ದೇವರು ಶಿಕ್ಷೆ ಮಾಡುವದಕ್ಕೆ ಬರುವನೆಂದು ಕಾಲಜ್ಞಾನವನ್ನು ಮಾಡಿ ಖತ್ರರಾದ ಕೆಲವು ಗಣಂಗ
ಳಿಗೆ ಹೇಳಿ ಸಾವಿರ ಕಾಲಜ್ಞಾನ ಶ್ಲೋಕವನ್ನು ಕೊಟ್ಟು ಅತೀತರಿಗೂ ಖತ್ರರಿಗೂ ಹೇಳಿದನು - ಯೇಳುನೂರಾ
ಯೆಂಭತ್ತು ವರುಷಕ್ಕೆ ದೇವರು ಜಗತ್ತಿಗೆ ಬರುವನು ಆವಾಗ ನಾವು ಬರುವೆವು - ನೀವು ವುಳಿದಾದ ಜನರಂತೆ ನ
ಡತೆಯಲ್ಲಿ ಚಂದಾಗಿರುವದೆಂದು ಹೇಳಿ ಸಕಲ ಗಣಂಗಳ ಕರಕೊಂಡು ಪ್ರಯಾಣ ಹೊರಟನು - ಪ್ರಯಾಣದಿಂದಾ
ವಸ್ತಿಯನ್ನು ಯಿಳಿದು ವುಳವಿ ಯೆಂಬ ಗ್ರಾಮಕ್ಕೆ ಹೋಗಿ ಅಲ್ಲಿ ಕೆಲವು ದಿವಸ ನಿಂತು ದೇವರಿಗೆ ಸ್ತೋತ್ರವನ್ನು ಮಾಡಿ ಅ
ಲ್ಲಿ ಮಾನಿಯೆಂಬ ಗವಿಯಲ್ಲಿ ಗಣಂಗಳು ಕೆಲವರು ಅದೃಶ್ಯವಾದರು - ವುಳಿದ ಗಣಂಗಳು ಅರಳಿಯ ಮರ
ಕ್ಕೆ ತೊಟ್ಟಿಲನ್ನು ಕಟ್ಟಿ ಆಡುತ್ತಾ ಬೈಲಾದರು - ಚನ್ನಬಸವೇಶ್ವರನು ಬೈಲಾದನು - ವುಳವಿಯಲ್ಲಿ ಗಣಂಗಳ ಗುರುತು
ಯಿನ್ನು ಯಿರುವದು - ಇಂದಿನ ಪರಿಯಂತರವು ಯಿನ್ನು ಕೆಲವು ಗಣಂಗಳ ಮಹಿಮೆಯು ಬರೆದದ್ದು ವುಳಿದ ಹುದು
ನನ್ನ ಬಾಯಲ್ಲಿ ನೆನಪು ಯಿದ್ದಷ್ಟು ಬರೆದು ಯಿರುತ್ತೇನೆ - ಯಿದರೊಳಗೆ ಅಕ್ಷರಗಳು ಬಿದ್ದು ಯಿದ್ದರೆ ನೆಟ್ಟಗೆ ಮಾ
ಡಿ ಓದುವದು ಬುದ್ಧಿವಂತರು — ॥ ಸಮಾಪ್ತವು —

వసంతతిలకెకథె-

శ్రీవిబుధేంద్రవంధితచంద్రప్రభ-దేవనవదపద్మక్కెరగి ॥ బావెవసంతతిలకెయకథనదప్ప
ఖావవన్నుసువేసంక్షేపదిం ॥౧॥ భరతవిషయదసురమ్యదేశదబిష్ణు మరదబిష్ణుధ్వజ
నరబ॥ ధరనిసాంధశిగూడిసత్తాలపదిసుబ శరధియోళ్గాలాదుత్తమరు-॥౨॥ ఇంతిర
లామురవరధిమనోజనకాంతెయాకమలసంభవను॥౩॥ అంతామణివిజ్ఞాపరూపినినగెదవస
ంతతిలకెయుపతిపుల్లు-॥౪॥ నారిరత్నెయరతిరోమనిగనిశానాతియపని నాయకియా-॥
వారవతెయువసంతతిలకెమనోహరదిందిరుతిరలల్లి॥౫॥ బంధకరుణదినవమాసతన్నది
యొళ్గానందనసాదుపుత్రశిశుగళా-॥ సందుపదెదెయలులరం బరతిందుసాంబసిందదసాంతిసు
వచన్నెగర॥౬॥ శరబనక్షత్రపాతకదన్యాతిశుగళు త్తరకాలగవచెనెగొళ్గలూ,॥ యిరసల్లమనె
యొళ్గాదడెయిరిసలుకూడెమరణతప్పదు బనగెందా॥౭॥ మత్తెదశేనునక్షత్రపాతకిరినలు,
త్తంగసుబెకెళ్గదకె॥ కృత్యవిల్లవు ఆరణ్యదొళ్గిరిసువుదుత్తమవెలమేనెందా-॥౮॥
కెళ్గియూవంతిగె బెల్లి శిశుగళాను ఆళ్గియరింపూవప్పెరదా॥ కాలువెతడెయ వృష్టదనెళ్గ
ఆళ్గనిష్టు ఆళ్గియరృతశిబదళు-॥౯॥ అత్రచంపాపురదరబనశ్రేష్ఠియత్తుత్తమధనదత్తనరబ॥
వృత్తపంయోధరిధనవతిగూడిసుపుత్రవన్నుబెడెందుబెవస॥౧౦॥ జలయాత్రెగస్ఫుత్తరువవూగల
దిశీశుపవుళువదొళ్గిరలదకండూ॥ నలవిలెనగెదెవరిత్తనెనుత తన్నలలనెగిత్తనుతందావని
జా॥౧౧॥ పుత్రకావృద్ధివిరబితదొళ్గితిమోహవెత్తుసలహుతిరలత్తా॥ ఉత్తరమధురెయరబన
శ్రేష్ఠియువరదత్తనరబిగునివతియు,॥౧౨॥ యిరింతుశరథియాత్రెయమాడివరదత్త బరు
తలాశిశువనుకండు॥ స్మరనరబియసలిగెలువకూడియ విళ్ళిబిద రాశిందునెనెదా॥౧౩॥
పునదను రాగదొ ళ్గాశిశువనుతన్నవనితెగిత్తందెయ్యలవళు,॥ బనంతుబిసలపోల్గ ఘోష్యరతిగె
యపృద్ధివెరదంతెసిదళు,॥౧౪॥ మూగలదిప్రాప్తవాదుదరింద ప్రేమరుషిగే ధారుని ధారునామ-
వగలనామవనిత్తుసలహులరతివ తి యుగలతిరూబినొళ్గెసెయే॥౧౫॥ వరనసమ్మంధవనరబకా
నిదెవతా తరునియు ధారునాసుతగె॥ సిరింయూగళు బయ జనని జనకరు మెచ్చు బిరబాబిదరు
ఉద్ధూతనవా॥౧౬॥ వస్త్రవా బరణవాపూనదేనుసబిరంప్రతిప్రదొళ్గిత్తుబాళ్గుతియూ॥ పు
త్రియ వరదత్తగునివతిగూడిజామత్రవినొదన్నెబిబదరు॥౧౭॥ ఇరితిరిజెనెరవహాళిసరబ
జెత్రబాయోళ్గుపుడరవరనెనలు, బెగదొళ్గు-॥ తరుణిధారునియోళ్గాధారునానాపురవర
దొళ్గిరుతలాందుబెవసా॥౧౮॥ జలయాత్రెగ్యెదబెకెంద క్షేనూలసొళ్గిబదధనదత్తమ
గన॥ శళుపులు కెలదనపరదుగృత్యతందిల్లదనుపరిపురదెడెయూ॥౧౯॥ అల్లివెచారిబినాయకి
యరసుప్రసల్లతాంగియూదిదనె॥ పుల్లెగణ్ణబలెవసంతతిలకెయొళ్గువిళ్ళిబదన్ను నిజమనకె
వా॥౨౦॥ నొదిదరనెంపరుమూతా దిదనియరెగెడగూడిదనియరాతురదిం॥ రూఢివదెర

ಸ್ವರ ಕೇಳಿಯ ನಾಂ ಕೂಡ ನಾಡುತ ಪರುಷ್ಯವರದು ॥೧೦॥ ಉತ್ತರಕೆ ತ್ರಯಮಧುರವೆಂಬ ಮುನಿಪ ಜಂಪಾ
ಪುರಕೆ ಬರಲು ಪಾರಣೆಗೆ ॥ ತರುಣೋಧಾರು ನೋಕಂಡು ನಿಲುಹಲು ಬಾವರಿ ಮುಯ್ಯಲಿ ಕದುದನದತ್ರಾ ॥೧೧॥
ಎಲೆ ಮುನಿ ತಿಲಕ ನೀದೇನು ಕಾರಣ ಪೊಲಲನೆ ನಿಲ್ಲಿಸಲಾಲ್ಲದಿ ಪುದಾ ॥ ತಿಳಿಯ ಪೇಳೆಂದುಬಿ ತಾಪಸ ನಿತ್ತು
ಕೃಪಾಳುವಮುಂಗಿ ತೆದುರು ಕುಳ್ಳಿರಲು ॥೧೨॥ ಪುಟ್ಟಿದುದಾದಿ ಬಟ್ಟೆಯೊಳ್ ಪೆಟ್ಟವಗೇಕನ್ನೊ ಪುಟ್ಟಂ ಧೀಗಲು ನಿವ
ಪಾ ॥ ಗಟ್ಟಿ ಪರದು ಸ್ತ್ರೀಯಲ ಪಟ್ಟಲವನು ಮೋಹವಿಷ್ಟು ತಾಯೊಳ್ಗೆ ಕೂಡಿ ಪುದಾ ॥೧೩॥ ಎಲೆ ಬವ್ಯಕೇಳ್ನೊ
ತಂಗಿಯುಲ್ಲದೆ ತಾಯೊಳ್ಗೆ ಗೂಡ ವೆರೆದೊಂದು ಶಿಶುವ್ವಾ ॥ ನೆಲಬೀಪುದೀಪರಿಯನ್ನಾರಯ್ಗಕ ಸ್ತ್ರೀಯ
ಕೊಳ್ಳಲುಂಪಿ ನಿಶ್ಚ ಪೇಳೆಂದಾ ॥೧೪॥ ನುತಿಸಲಾಗದವಲ್ಲೇ ಪಾವಿ ದೇವನೆಗತಿಗೆಡಿಸುವ ಚಿಮ್ಮನಿದು ವೇ ॥ ಪಾ
ತವಾಯಿ ತೆಂದವರ್ಕತಿ ಪಾಪಕ್ಕೆ ಬಿಜೆಯ ತಿಪತಿಂದುನು ಬಿಲ್ಲೊಷ್ಟು ॥೧೫॥ ಆವುದು ಪಾಯವೆನು ತಧನವತಿ
ಗೂಡಿ ಖಾವಿ ಬಿಮನದಿನಿ ವೇಗಾ ॥ ತೀವಿದಲ್ಲದೆ ತೊಲಗದು ಪಾಪವೆನುತನು ಖಾವದಿ ದೀಕ್ಷೆವಡೆದರು ॥೧೬॥
ನೋಡಿದ ಮಾತ್ರದಿ ಘನತರ ಅಘವಡಗೂಡಿ ತೆಂದವರೈದಿದರು ॥ ಮಾಡಿದವರಿಗೇನು ಗತಿಯೆಂದು ತಲೆ
ಯೊಲೆದಾಡಿದಲ್ಲಾ ಧಾರುಣಿಯೂ ॥೧೭॥ ಯನ್ನಪುಣ್ಯದ ಕಥನದಿ ಅತ್ರೆ ಮೂವರು ಸನ್ನುತ ದೀಕ್ಷೆವಡೆ
ದರೂ ॥ ಯಿನ್ನೀ ಪರಿಕ್ಷೆಯನ್ನರಿಂತು ಬೇಕೆನು ತಲಾಕನ್ನೆ ಬಂದಳು ಬಿಷ್ಣುಪುರಕೆ ॥೧೮॥ ಆಳೀಯ
ವೇಷವಧರಿಸಿ ಕೂಪದ ತಡಿ ಬಾಲೆ ಕುಳ್ಳಿರಲತ್ತಗನಿಕಾ ॥ ಆಳಿಯರೈದಿನೀರಿಗೆ ಕಂಡು ಆಕೆಯ ಬಾಲೇ
ಯ ಕೆಲಫೆಯೂರಿದಳು ॥೧೯॥ ಕನಕಪುರದ ವಸುದತ್ತನ ಮನೆಂಯೊಳಿ ತನದೊಳ್ಗಾನಿರ್ದನೀ ವರಿಗೇ ॥ ಮು
ನಿ ದೀಕ್ಷೆಗವರೈದ ಕ್ಷತ್ರ ಬಂದೆನು ಆರ ಮನೆಯೊಳಾದರು ಯಿರಲೆಂದು ॥೨೦॥ ನಾರಿವ ಸಂತತಿಲಕಿಯ ಗ
ರ್ಭದೊಳು ಕುಮಾರನಾಗಿ ಪೊನಾಡಿಸುವರೀ ॥ ಬಾರೆಂದು ಕರದ್ವಿದಿ ಪೇಳ್ಗತಂಮ್ಮೊಡತಿಗೆ ಕೇಳಿಸಿದರು ಬಾಲಾ
ಲಯಕೆ ॥೨೧॥ ಕುಂಡಲ ನೇತ್ರ ಕಂಡಳು ತಾಂತು ಗಂಡನ ಚಂಡ ತೇಜದ ಗಂಡು ಮಗನಾ ॥ ಕೊಂ
ಡಾಡಿದಳು ಗದ್ದದಗಳ್ಳರವೆಂತು ದ್ದಂಡೆ ತೂಗಿದಳಂತು ಪಾಡಿ ॥೨೨॥ ಜೋ ಜೋ ಯನ್ನಯ ಕಂದನೆಯ
ನ್ನ ತಮ್ಮನೆ ಜೋ ಜೋಂತನ್ನಯ ಸೋದರಳಿಯಾ ॥ ಜೋ ಜೋ ಮೈದನೆ ಕಿರಿಯೈಯನೆ ಖಾರೆಂದು ರಾಜೀವ
ಮುಖಿ ತೂಗಿದಳು ॥೨೩॥ ಅಣ್ಣಗೆ ಅಳಿಯನೈಯನೆ ಪಡಪುಟ್ಟದೆನ್ನನ ಮಗ ನೆನ್ನಳಿಯನೇ ॥ ಬಣ್ಣಿಸನೋ
ಡಲು ಮಗಳ ಮಗನೆಯೆಂದು ಬಣ್ಣವಾಯ್ದರೆಯು ತೂಗಿದಳು ॥೨೪॥ ಪಿತ್ರ ತಾಯಿಗೆ ಮೊಮ್ಮಗನೆ ಮೈದುನನೆ ನಿ
ನ್ನೆತ್ರ ತಂದೆಗೆ ಖಾ ಮೈದುನನೇ ॥ ಪುತ್ರನೀ ಕಾರಣ ಕ್ಷಾದರ ಬೀಜನೆಂದು ತುಂಗಕುಚೆ ಪಾಡಲಿದು ॥೨೫॥ ಯಲೆ
ಬಾಲೆಯೇನು ಪ್ರಪಂಚದೊಳಗೆ ನೀನು ತಿಳಿಯದಲಾಪಿಪದಗಳಾ ॥ ಉಸಿವ ವಿವರವ ಪೇಳೆಂದು ಕರಪೊತ್ತಿನೊ
ಳಗೆ ಕುಳ್ಳಿರಿಸಿ ಕೇಳಿದಳು ॥೨೬॥ ನಲ್ಲನ ನೋಡಿ ತಾಯೊಳು ಮುನಿಪತಿ ಪೇಳ್ದಲ್ಲಾವನು ಸುರಿಮಾತುಳ
ರೂ ॥ ನಿಲ್ಲದೆ ದೀಕ್ಷೆವಡೆದರೇನಲು ನೆತ್ರದಲಿ ಸೂಸಿದ ವಾಸ್ತ್ರಬಿಂದು ॥೨೭॥ ಮಲಮಲ ಮರುಗಿ ವಸಂ
ತತಿಲಕೆ ಮಗನೊಳು ಕೂಡಿದುದಕತಿ ಪೇಸಿ ॥ ನಿಳೆಯವ ಬಿಟ್ಟು ಮುಗರು ಸಹ ದೀಕ್ಷೆಯ ತಳೆದಳ್ಳಳು ಕು
ತಸಂಸ್ಕೃತಿಯಾ ॥೨೮॥ ಇತ್ತಲಾನು ಡಿಗೇಳ್ವ ವರದತ್ತಸತಿಗೂಡಿ ಚಿತ್ರದಿ ಕಳ್ವಳಪಡುತಾ ॥ ಕೃತ್ಯವಿಲ್ಲದ
ನ್ಯಾಯವೆ ಥರ್ದೊಳಾದಗಿ ತೆಂದು ತ್ರಮ ಮುನಿ ದೀಕ್ಷೆವಡೆದಾ ॥೨೯॥ ಶೂರಕ ಮರ್ದಬೀರ ತಪವೆಂಬತೀ
ವ್ರಾಗ್ನಿದ್ದೊಳಿನಿರ್ಜರಿಸಿದೇಹಗಳಾ ॥ ಚಾರುಸುಖವನೀವ ಸ್ವರ್ಗದಾಲಯಗಳ ಸೇರಿದರ್ಕೆ ಲಿಖವ್ಯಕೇ
ಳೂ ॥೩೦॥ ಲಾಲಿಸಿ ಕೆಳೆವ್ಯ ಪ್ರತ್ಯಕ್ಷವಿದು ಸವಮೂಲಿಯ ಪೇಳ್ವನ್ನೆಂತ್ತೋ ॥ ಪೇಳ್ವಲಲ್ವ ವೆಸಂಸಾರಪಾಪ

ದಮೂಲಕ ಕೇಳಿಸಿಪರುಷ ಬಿಯೂದಿ ॥೪೧॥= ॥ ॥

ಕಥೆ॥ ಅತ್ತಾಂದೂರಾಗ ಒಬ್ಬ ಗೌಡನು. ಅವನಿಗೆ ಇಬ್ಬರು ಯೆಣ್ತೇರು - ಆದರೆ ದೊಡ್ಡ ಯೆಣ್ತಿ ಕೂಡೆ
ತಂಗಿ ಕೂಡಿರುವದಕ್ಕೆ ಮನಸಿಲ್ಲದೆ - ಚಿಕ್ಕ ಯೆಣ್ತಿ ಕೂಡೆ. ಬಲು ಸ್ನೇಹವಾಗಿ ಯಿದ್ದುಕೊಂಡಿದ್ದನು -
ಒಂದಾನೊಂದು ದಿನ - ಅತ್ತಾಂದೂರು ದೊರೆಗೆ ಗುತ್ತಿಗೆ ಹಣ ಕಟ್ಟಾಕೆ - ಕೆಲವರು ಗವುಡರು ಸಹಾ - ಆ ಪ್ಯಾ
ಟೆಗೆ ಹೋದ - ಅವನತ್ತ ಹೋಗಾದು - ಅವನ ಚಿಕ್ಕ ಯೆಣ್ತಿ ಯಿದ್ದಳಲ್ಲ - ಅವಳು ಯೇನು ಮಾಡಿದಳು
ಅಂದರೆ - ಅವಳ ಮನೇಗಳ - ಹಣ ಕಾಸು - ಒಪ್ಪೆ ಬರೆ - ಗಂಗಳ ಚೆಂಬು - ಯಿದ್ದದ್ದೆಲ್ಲಾನು - ತನ್ನ ತಿಂ
ಡಗಾರ್ತಿಗೆ ಕೊಟ್ಟು, ಬಕ್ರೆ ಮನೆ ಮಾಡಿಕೊಂಡು. ಇದ್ದಳು. ಇದ್ದರೆ - ಒಪ್ಪಾತ್ತಿಗೆ - ಅವಳ ಗಂಡ - ಗುತ್ತಿಗೆ
ಕಟ್ಟಿ. ತಿರಗ ಪ್ಯಾಟೆಗೆ ಬರುತ - ಒಬ್ಬ ಮನುಷ್ಯಾನ್ನ. ಬೀಕನ ಹೊರ್ಗೆ ಪನ್ನ ನೋಡಿ ಕರದು - ನೀನು - ಬೀಕೀ
ನ ಹೋಗಿ ಬಿಟ್ಟು. ನನ್ನ ಚಿಕ್ಕ ಯೆಣ್ತಿ ಕೂಡೆ. ಗೌಡನು - ಇನ್ನು ಕೆಲವು ಗೌಡರು ಸಹ - ಮಧ್ಯಾಹ್ನದ
ಹೊಂಬಾಕೆ ಇಲ್ಲಿಗೆ ಬರುತಾರವ್ವ - ಹೇಳೆಂದು - ಕಳುಹಿದನು - ಅವನು - ಅಂಗೆ ಬಂದು, ಗೌಡನ ಚಿಕ್ಕ ಯೆ
ಣ್ತಿಗೆ ಹೇಳಿದನು - ಅವಳು ಕೇಳಿ ಸುಮ್ಮನಿದ್ದು - ಅವನ್ನ ಹೋಗೆಂದು. ಆಮೇಲೆ - ತನ್ನ ಮನಸಿನಾಗೆ
ತಾನೆ ಗುಣಿಸಿಕೊಂಡು - ಇನ್ನೇನು ಮಾಡಬೇಕೆಂದು - ಬಿರಿಬಿರೀನ; ತನ್ನ - ಅಕ್ಕನ ಮನೆಗೆ ಬಂದು - ಅ
ಕ್ಕನ ಕೂಡೆ - ಇವತ್ತು; ನಮ್ಮ ಯಜಮಾನನ್ನ - ನಿನ್ನ ಮನೆಗೆ ಹೊಂಬಾಕ್ಕೆ ಕಳುಹುತೀನಿ - ಇಲ್ಲೆ. ಅಡಿಗೆ ಮಾ
ಡಿಸಕ. ಅನಲು - ಅವಳು ಅಂಗೆ ಆಗಲಂದರೆ ಕೇಳಿ - ಅಲ್ಲಿಂದ ತನ್ನ ಮನೆಗೆ. ತಿರಗ ಬಂದು - ಮಂಕಾನು
ಗಂಟಾಕಿಕೊಂಡು - ಆ ವೇಳೆ ತ್ತಿ; ಸುಮ್ಮಗೆ ಕೂತಿರುವಾಗ - ಅವಳ ಗಂಡನಾದ ಗೌಡ ಮನೆ ಅತ್ತ
ರಕೆ. ಬರುತಲು -, ಅವಳು - ಕಾಂದ್ರದಿಂದ ಯೆದ್ದು. ಯಾಲಾ ನೀನು. ವಳಗೆ. ನಿನ್ನ ದೊಡ್ಡ ಯೆಣ್ತಿ
ಯೆಂಬ ರಂಡೆ ಮನೆಗೆ ಅಡಿಗ್ಗೆ ಹೇಳಿ ಕಳುಹಿಸಿ -, ವಣಿ ಭ್ರಮೆಯಿಂದ. ಯಿಲ್ಲಿಗೆ ಬಂದ್ಯಾ - ಚೀ ಹೋ
ಗು. ಕಳ್ಳ ಮುಕ್ಕ ಇಲ್ಲಿಗೆ ಬರಬೇಡ ಅವ್ವ - ಬೈದರೆ - ಅವನು - ಇಲ್ಲವೆ - ನಿನ್ನ ಮನೆಗೆ ತಾನೆ. ಆಳು ಕಳ್ಳಿ
ಸಿ. ಅವನಿಗೆ. ತಿಳೀದೆ. ಅಲ್ಲಿ ಹೋಗಿ ಯೇಳಿದನೇನೋ - ನಾ ಕಾಣೆ - ಅದು ನನ್ನ ತಪ್ಪಲ್ಲ - ನೀನು - ಮುನಿಸಿ
ಕೋಬೇಡ - ಅಂಗವ್ವ - ಹೇಳಿದರೆ - ಅವಳು. ಇನ್ನು - ಕೋಪದಿಂದ - ಚೀ ಚೀ. ಕಳ್ಳನಾಯಿ - ನನ್ನ ಅತ್ತರ
ಯೆಜ್ಜುಮೂ ತರಬೇಡ - ಹೋಗು ಹೋಗು. ಇಲ್ಲಿರಬೇಡ - ಇಲ್ಲಿದ್ದರೆ - ನಾನು ಯೆಲ್ಲಾದರು ಹೋಗಿ ಬಾವಿ
ಕೆರೆ ವಳಗೆ ಬಿದ್ದು ಸತ್ತೀನು - ಅಂದರೆ - ಅವನು - ಬಲು ಜನ ಗೌಡರು ಸಹ - ಅಸು ಕೊಂಡು ಬಂದಿದ್ದನಲ್ಲ
ವೆ. ಅದರಿಂದ. ಅವರನು - ಕರಕೊಂಡು - ತನ್ನ ಇರೇಯೆಣ್ತಿ ಮನೆಗೆ - ಬಂದನು - ಬರಲು - ಅವಳು -
ಎಲ್ಲಾರಿಗು - ಎಣ್ಣೆ ಪೋತ್ರಿಸಿ. ನೀರೆರಸಿ, ಆಮೇಲೆ - ಯೆಲ್ಲಾರಿಗು. ಸಾಲಾಗಿ - ತಟ್ಟೆಗಳು - ಇಕ್ಕಿಸಿ - ಅವರು -
ಕೂತ ಮೇಲೆ - ತಾನು ಮಾಡಿದ್ದ - ಒಳ್ಳೆ ಊಟವನ್ನು - ತಂದು - ಹೊಂಬಾಕೆ - ಯಿಕ್ಕಿದ್ದು - ಅವರು ಯೆಲ್ಲಾ
ರು - ಸಂತೋಷವಾಗಿ ಹೊಂಬುತ್ತಿದ್ದರು - ಆ ಮನೆಯ ಗೌಡನು - ತನಗೆ. ತನ್ನ. ಕಿರಿ ಯೆಣ್ತಿಯ ಮೇ
ಲೆ - ಯಿದ್ದ ಆಶೆಯಿಂದ - ಯಿವಳು ಯಿಕ್ಕಿದ - ಊಟ. ಬಂದಾದರೂ - ಇತವಾಗಿರಲಿಲ್ಲ - ಅದಕ್ಕೆ -
ಅವನು - ಒಬ್ಬ ಆಡಿಗೆ ಮಾಡೋನ್ನ ಕರದು - ಯಾಲಾ - ನೀನು ಬೀಕೀನ ಹೋಗಿ - ನನ್ನ ಚಿಕ್ಕ ಯೆಣ್
ತಿ ಕೂಡೆ - ನನಗೆ. ನೆಂಚಾಕೆ ಕವ್ವ ಯೇಳಿ. ಯೇನಾರು. ಇಸುಕೊಂಡು ಬಾಯೆಂದು. ಕಳುಹಲು -

ಅವನು ಬಂದು - ಯಾವಳನ ಕೇಳಿದರೆ - ಅವಳು - ಮಂತ್ರ - ಮಾಡಿಕೆ ಕೆಟ್ಟು - ನನ್ನ ಮನೆಗೆ ಕಳುಹಿಸಿದನೆ - ಹೀ
ಗೆಯು ಅಮ್ಮ - ಕಳುಹಿದಳು - ಅವನು - ಬಂದು - ಅಂಗವ್ಮತಿ ಹೇಳಿದನು - ಯೇಳಿದರು - ಕೇಳಿದ -
ತಿರಗ ಕಳುಹಿದನು - ತಿರಗ ಮನುಷ್ಯ ಬಂದು - ಕೇಳುವಾಗ್ಗೆ - ಅವಳು - ಯಿಷ್ಟು ಬೇಸರದಿಂದ - ಇವತ್ತು
ನನ್ನ ಮನೆಗೆ - ಯೇನು ಮಾಡಲಿಲ್ಲ - ಅಸೆಕಲ್ಲಿ ಹಾಕಿ - ಪುಳಿಸಾರು ಮಾಡಿದ್ದೇನೆ, ಕಾಂಡಾಗೆಂದು -
ತನ್ನ ಮನೆಯ - ಮುದಿತ್ತ, ಅಸೆಕಲ್ಲಿ - ಯವುಲ್ಲ ತಂದು, ಪುಚ್ಚಿದ್ದ - ಬಾಗ್ಗದವ - ಬಳ್ಗಿಗೆ ಆಕಿ ಕಾಟ್ಟು
ಳು - ಅದು ತಕ್ಕೊಂಡಾಗ - ಸಾಡಗೆ ಕಾಟ್ಟರೆ - ಅವನು - ಅದನ್ನ - ನಾಲಿಗ್ಗೆ ಸವರಿಕೊಂಡು, ಚಪ್ಪರಿಸುತ -
ಮುಂಬುತ್ತಿದನು - ಅದರ - ಗಬ್ಬಿಗೆ - ಯಲ್ಲರು - ಮಾಕರಿಸಿಕೊಂಡು - ಮುಂಬುವದು ಬಿಟ್ಟು - ಕೈ ತೊಳಕೊ
ಂಡು - ಅವರವರ ಮಾರುಗಳಿಗೆ ಹೋದರು - ಆ ಮೇಲೆ - ಈ ಗಾಂಡನು - ಮುಂಡು - ಕೈತೊಳದು -
ಚಕ್ಕಂಯನಾತಿ ಮನೆಗೆ - ಬಾಂತೆಯಿಂದಾ ಬರುವಾಗ - ಒಬ್ಬ ಪಂಚಾಂಗದ ಬ್ರಾಹ್ಮಣನು - ಯೇಸೈಯು
ಗಾಡ - ನೀನು ಮಾರಾಗಿಲ್ಲದಾಗ - ನಿನ್ನ ಕಿಕ್ಕೆರಯನಾತಿ, ಮನೆಗೆ ಯಿದ್ದ ಅನಾಸಾಸವ - ಯಲ್ಲಾನು - ಶಿಕ್ಷಿ
ದೊ,
ಕೋರಿಗೆ ಕೊಟ್ಟು - ಮನಸು ಬಂದಂಗಿಲ್ಲಾ - ಮಾಡಿದ್ದು - ಅಮ್ಮ ಯೇಳಿದರೆ - ಆ ಗಾಂಡೀನ ಅಡ, - ಅಯ್ಯ - ಬ್ರಾ
ಹ್ಮಣರೆ - ನೀವು - ನಮ್ಮ - ಅಪ್ಪರು - ಮೇಲಾಗಿ - ಜ್ಞಾನಿಗಳು, ಶಾಸ್ತ್ರಿಗಳು - ಆಚಾರವಂತರು - ಯಿಂ
ತಾ ಮಾತು - ನೀವು ಯೇಳುವದು ನೋಡಿದರೆ - ಯಾರೋ - ಕಾರದಾರು - ಈ ಮಾತು - ನಿಮ್ಮ ಬಾಯಿಂದ
ನನಗೆ ಯೇಳಿಬ - ನನ್ನ ಚಿಮಯಯನಾತಿಗೂ ನನಗೂ - ಅಗಮಾಡಾಕೆ - ಯೇಳಿಸವರೆ -
ಆದರೂ - ಇಂತಾ ಮಾತು - ನೀ ಮಾಡುರಲ್ಲ - ಅವಳು ಅಂತಾ ಕೆಟ್ಟ ಕೆಲಸ ಮಾಡುವಳಲ್ಲ - ನೀವು ದ
ಯ ಮಾಡಿಕೊಂಡು - ಕಳುಬ - ತನ್ನ ಕಿಕೇರಯನಾತಿಯ ಮನೆಗೆ ಬಂದನು - ಯಿಂಗೆ ಕೆಲವು ಮಂದಿ,
ರು ಚಾಯಾದದ್ದು ಬಿಟ್ಟು - ಅರುಚಾಯಾದದ್ದನ್ನ - ರುಚಿಯುಂದು - ನೆನಸಿ - ಅಪ್ರಮಾದ ಮಾತನ್ನಾದರೂ
ಅನಾಪ್ರದ ಮಾತೆಂದೆನಿಸಿ - ಲೋಕಕ್ಕೆ - ಅಕೋಚಕೆಯಾದ - ವಿಷಯಗಳಲ್ಲಿ - ಅತ್ಯಾಸಕ್ತರಾಗಿನ
ಡೆಯುವರು - ॥=॥ ~~[illegible]~~ ॥

೧೧ನೆ - ॥ಅತ್ತಾಂದು - ಅಗ್ರಾರದಾಗೆ - ಒಬ್ಬ ಶಾಸ್ತ್ರಿಯಾದ ಬ್ರಾಹ್ಮಣನು - ಬವು ಶಾಸ್ತ್ರ ಚದಿ ಕೆಲವು ದಿವ್ಸದ ಮೇಗೆ
ಒಬ್ಬ ಯೆನಾತಿಯನ ಮದಿವೆ ಮಾಡಿಕೊಂಡು - ಶಾಸ್ತ್ರ ಜದಾಕೆ ಒಬ್ಬ ಶಿಷ್ಯ ಮಗನ್ನ - ಯಿರಿಸಿ
ಕೊಂಡು - ಅವನಿಗೆ ಚದು ಬರಾವು ಯೇಳಿಕೊಡುತಿರುವಾಗ - ಮತ್ತೊಂದೂರಿಂದ ಒಬ್ಬರೊರೆ
ಈ ಶಾಸ್ತ್ರೀನ ಕರೆಬಿಟ್ಟು - ಕಾಳ್ಗುವಾಗ - ಈ ಶಾಸ್ತ್ರಿ - ತನ್ನ ಯನಾತಿಯನು ತನ್ನ ಶಿಶುಮಗನ್ನ
ಯರಡಾಳನು - ಆ ಮನೆಯ ವಳಗೆ - ಯರಡು ಜಗಲಿಗಳ ಮೇಗೆ - ಯಿಬ್ಬರನು ಕುಂಡ್ರಿಸಿ - ನಾ
ನು ಬರುವ ಗಂಟ - ಮೇಕೆ ಯೇಳ ಬೇಡಿರಿ ಯೆಂದು ಯೇಳಿ - ತಾನು ಮಂಚಿಯ ಹೋದನು - ಆ ಮೇ
ಕೆ - ಅವನ ಯನಾತಿ - ಈ ಶಿಶುಮಗ ನಿದ್ದ ತಾಕೆ ಬಂದು - ಯೋ - ಶಿಶುಮಗನೇ - ಈಗ ಶಾಸ್ತ್ರಿ
ಪೂರು ಮನೇಗೆ ಯಿಲ್ಲ - ಅವ ಬರುವದಕ್ಕೆ - ಇನ್ನು ದಂಡೆ ಇಲ್ಲ - ನೀನು - ನಾನು - ಹೊಂದಾನಿ ಇರೋ
ನ - ಯೆಂನವಿ ಯೇಳು ಅಂದರೆ - ಅವನು - ನೀನು ನನ್ನ ಗುರುದೇವರ ಯನಾತಿ - ಅವರು ಮನೇ
ಗೆ ಇಲ್ಲದಿದ್ದಾಗ - ಇಂತಾ ಮಾತು ನೀವು ಯೇಳುವರೇ ಯೇಳಬಾರದು - ನಿಮ್ಮ ಮಾತಿಗೆ ನಾನು
ಒಪ್ಪಿದರೆ - ನನಗೆ - ಬಲುಪಾಪ ಬತ್ತದೆ - ನಾನು ಯಿಷ್ಟು ಮಾತ್ರ ಯಿಂತಾ ಕೆಲಸ ಮಾಡುವನಲ್ಲ - ಅಂ

ದರು- ಸುಮ್ಮನಿರದೆ- ಮತ್ತೆ ಅವನಿಗೆ- ರೋಗದ ಲಾ ರೋಗ್ರವಿದಿಕಾ - ವಿನ್ನಾಗುವ ಪ್ರಯದಾಗೆ- ನನ್ನಂತೆ.
ಯಿಂಗುಸು - ನಿನಗೆ ಬೆಮಬದರೆ- ಹೀನ- ಪಾಪ ಬತ್ರದೆ ಅವ್ವ- ಪಾಪ ಅಂಬೋದು ಯಂಗದೆ- ಅ
ದು ಯಂಗೆ ಬತ್ರದೆ- ಯೂಕೆ ಸುಮ್ಮನೆ, ಬರಿ ಮಾತಾಡುತಿ- ಸುಮ್ಮನೆ- ನನ್ನ ಸಂಗಟ ಕೂಡಿರು ಯಿಂದು
ಆವ ಚಂದಾಗಿ ಬುದ್ದಿ ಯೇಳ್ದಿ- ಬಿಟ್ಟು- ಇರೋದಾಳು- ಬಂದಾಗಿದ್ದರು- ಇಂಗಯಿರುವಾಗ- ಶಾಸ್ತ್ರಗಳು
ಬರುವ ದಿವಸ, ದಂಡಿಗೆ ಬಂತು- ಅವರು ಬಂದರೆ- ರೋಗ ನಮಗೆ ಡು ತಾರೊ- ಯೆನ್ನೇನು ಗತಿ ಯೆಂದು -
ಬಲು ಚಿಂತೆಯಿಂದಾ - ಶಿಶು ಮಗ- ಗುರು ಸಾವಿಂದ ರಂಜಿತಿ ಕೂಟಿ- ಯೇಳ್ದರೆ- ಅವಳು- ರುಲೋ
ಇದಕೆ ಚಿಂತೆ ಮಾಡೋದು ಯೂಕೆ- ನಾನೊಂದು ಮಾತು ಯೇಳುತೀನಿ- ಕೇಳು- ಶಾಸ್ತ್ರ ಬರುವದಕ್ಕೆ ಮುಂದಾಗ
ನಾವು ಯೆಲ್ಲಾದರು ವೋಗಾನ- ರೆಂದು ಯೇಳ್ದಿ- ೨ ಸತ್ತ ಕತ್ತೆಗಳ ತಂದು- ಯಕೋಡಾಳು ಕೂತಿದ್ದ- ತಾವಿನಾ
ಗೆಯಿಗಳ, ಮನೆಗೆ ಬೆಂಕಿ ಅಂಟಿಸಿ, ಮನಿಷ್ಯನೆ- ಯರಡಾಳು- ವ್ಯಾರು ಬಿಟ್ಟು ಕಡದರು- ಆ ಮೇಲೆ
ಶಾಸ್ತ್ರ ಬಂದು ತನ್ನ ಮನೆ ಬೆಂದಿದ್ದದ್ದ ಕಂಡು- ದುಕ್ಕ ಮಾಡಿ- ಅಯ್ಯೊ- ನನ್ನ ಶಿಶುಮಗನು- ನನ್ನ ಯಜಮಾನಿ
ಯು- ಯಿರುವದು ಕಂಡು- ಅಸ್ಥಿಗಳು- ತಾಳ್ಳಲಾರದೆ, ಮನೆಗೆ ಬೆಂಕಿ ಯಿಕ್ಕಿದರು- ಅವರು ಚತ್ತು
ಚಟ್ಟು ಹತ್ತೋದರು- ಯಿವರು ನನ್ನ ಮಾತಿ ಮೇಲೆ ಚತ್ತರು- ಯಿವರ ತಲೆಯಮಿಕಿನ; ತಕ್ಕೋ ವೋಗಿ- ಗಂಗ್ಯ
ಗೆ ವ್ಯಾಸಿ- ಯಿವರಿಗೆ ಪುಣ್ಯ ಮಾಡೇನು ಯೆಂದು- ಅಲ್ಲಿ ಚತ್ತ ಕತ್ತೆಗಳ ಯೆಮಿಕೆಗಳು ಯಿದ್ದರೆ- ಅ
ವನ್ನ- ೨ ಕುಗಡಿಗ್ಯಾಗೆ ತುಂಬಿ ಕೊಂಡು- ಅಡ್ಡ ಮಾಡಿ- ಯಗಲ ಮೇಲೆ ವೊತ್ತು ಕೊಂಡು ದಾರಿಯಿಂದ
ಬರುವಾಗ- ಈ ಯರಡಾಳು- ಶಾಸ್ತ್ರಿಯ ಕಂಡು ಕೊಂಡು- ಬರುವಾಗ- ಗಡಗಡನೆ ನಡುಗಿ
ಇನ್ನೇನು ಮಾಡುವರೊ- ಯಂಗೆ ಮಾಡಬೇಕಮ್ಮ- ಬಲು- ಗುಂಡಿಗೆ ಯೋಗಿ- ಯರಡಾಳು ಹ
ಡಿ ಬಂದು- ಶಾಸ್ತ್ರಿ ಕಾಲ ಮೇಲೆ ಬಿದ್ದು- ಸಾಮಿ- ನಾವು- ಕೆಟ್ಟ ಬುದ್ದಿ ಮಾಡಿ- ಓಡಿ ಬಂದವು
ನಮ್ಮನ್ನ- ಕಾಪಾಡು ಅಪ್ಪ- ಯೇಳ್ದರೆ- ಶಾಸ್ತ್ರಿಯು- ಯಿವರ ಮಕ ಚಂದಾಗಿ ನೋಡಿ- ಚೀ
ಚಿ- ನೀವು- ದೆವ್ವಗಳಾಗಿ- ನನ್ನ- ಯಿತ್ರ ಮಾಡಾಕೆ- ಯಿಂಗೆ ಯೇಳ ತೀರ- ಅವರು ಸತ್ತರು
ಅವರ- ಯಮಿಕೇಲ- ಗಂಗೆಗೆ ಚಿಡಾಕೆ, ಕೊಂಡೋಗುತಿನಿ- ನೀವಲ್ಲ- ಓಗಿರಿ ಅಪ್ಪ- ಕಾಲಕಾ
ಡಿ ಕೊಂಡು- ತಿರಗ- ಅವರ ಮುಕಾ ನೋಡದೆ- ವರಟು ವೋದನು - ||-||

ಪಾಪಿ ಮೊರೆಗೆ- ದುಷ್ಟ ಬುದ್ಧಿಯುಂಬ- ಪರದಾರಿ- ಶತಪಾತಕನೆಂಬ- ತಳವಾರ- ಕೂಡ-
ಬಂದು ಸಿಟ್ಟಿದಾಗ- ದಾರಿತನ ಮಾಡಿ ಕೊಂಡು ಯಿರಲು- ಅಪಿಟ್ಟ ಹೋಗಿ ಬಬ್ಬುವತೆಕ
ಊದ್ದ ಸಾವಕಾರ- ಅವನ ಮನೆಗೆ ಬಂದು ರಾತ್ರಿ, ಬಬ್ಬುಕಳ್ಳ ಕನ್ನಾ ಯಿಗೆದ- ವೈಕೆ
ವೋಗುವಾಗ- ಕಾಡಿ- ಮೇಲೆ ಬಿದ್ದು. ಆಕಳ್ಳ ಅಲ್ಲಿ- ಚತ್ತನು- ಆವತಾರೆ- ತಳವಾರ

కళ్ళ, చత్రి యిశాదుశందు, – చెట్టవని గౌడె, కళ్ళన్న జాయి బిడెతు, తిందు– పర
దానిగె– యేళిదరె– పరదాని మొరిగె– యేళిదను– ఆగ అపాబిదారియు– ఈచె
ట్టిగాన కరేకళిసి– హోచెట్టి– నిన్నమనె గౌడె కళ్ళన్న జాంయి బిడుందదె– అదరి
ంద నినగె అపరాజివాతు– తప్పుకొడు అమ్మ కేళిదరె– ఆ చెట్టియు– వా
దారియే– నానేను మాడ్లి– కామూటి గరవను అంగెమాడిదను– అదరింద–
గౌడె కళ్ళతు– అవనదె– తప్పు– నందల్లవందరె– మొరె– కామూటిగరవన్న
కరిసి– యెలోకామూటిగా– చెట్టె తావ– ఉళ్ళింగె హొగి తక్కొండు– జళ్ళగౌ
డెఆళిదె– అదు– కళ్ళన్న కొండితు– అదకె బదలాగి– నిన్న కాల్లబేకు అమ్మ–
అప్పునో కొట్టరె– ఆ కూలిగారర– అప్పుదు– నాను కూలితక్కొండు– చెట్టవని గౌ
డె ఆళిద్దనిజ– నానేను మాడ్లి– కౌడె ఆకువాగ– బుబ్బు కూలి– అదెల్లి
తిరిగాడువళు– అవళన్న నోడుత ఆళిదెనో యేనో– అవళింద కెట్టో
గిద్దాతు– అందరె– ఆ నూలేన కరిసి– యెలే నూలి– ఈ కామూటి– కెలబ– మా
డోతారె– నీను యాకె హోదె– నీ హోద్దరింద– ఆ గౌడె– జళ్ళాగి కళ్ళన్న
జాంయి హోయితు– నినగె అజ్జె మాడబేకు– అందరె– ఆ సూలి– హేళ్నాను–
నాను– ఈ కామూటి కాస్ర– హోగలిల్ల– వాజరోనిగె వడివె మాడాంకె
కిన్న కొట్టె– అవను– మాడికొడదె– నాహోగి కేళిదరె– యిందు నాళె– ఇంజా
నె– మంజానె– బా అమ్మ అగలెల్ల తిరిగిసుత్తిద్ద– అదకె నానోదెను– అ
ందరె– ఆ వాజిన కరిసి– యెలో వాజా– నీను ఈ కూలి– కిన్న కొట్టరె యి
వళిగె వడివెమాడి కొడదె– మున్నె– తిరిగిసిదరింద– అవళన– నోడి కొం
డు– కామూటి గౌడె యిక్కిదనంతె– అదు– జళ్ళాయితు అమ్మ యేళ్లా పాపె–
సిన్నదు– తప్పాయితు– అందరె– ఆ వాజను– అప్పుదు– ఈ కూలి కిన్న కొడ
లిల్ల– కిన్నక్కె ఆనా కొట్టద్దు– ఆ అనా సంతెగె తక్కో హోగి కిన్నబె
టె మాడువాగ– కళ్ళ– చెంబి కత్తరి, కద్దు కొండు హోద– అదరింద– రవాట
తేడవాయితు– నందు తప్పల్ల అమ్మ అందరె– ఆ పాపిదారియు– తళవార
న్న కరెదు– యెలో తళవార– నీను హోగి– చెంటిగె– కద్ద కళ్ళన్న యిడితా

రవ్రు - శ్వళిసలం - అతళవార వాంగి - జంతెంవుల్లవుడిళి కళ్ళబాక్షది - జంతె
జనయుల్లారను - ంయుడితండుం - డూరినె వాప్పునదను - అపాబదారి - ంసుల్లా
రిగె - బలం - అజ్జె - మాడిబదను - ॥ - ॥

ಧೃವ ಪರೀಕ್ಷೆಯು

ಷು ಶುದ್ಧಸ್ಸರ್ವವ್ಯಾಪಿ ಸರ್ವಭೂತಾಂತರಾತ್ಮಕಃ । ಸರ್ವದೃಷ್ಟಸ್ಯ
ೀ ನಿರ್ಗುಣಾತ್ಮ ॥೧॥ ॥ಧ್ರುವವುಂಟೆಂದು ಮನುಷ್ಯರಾಗಿ ಹುಟ್ಟಿದ
ಮನುಷ್ಯನು ಅರಣ್ಯದಲ್ಲಿ ಜನ್ಮತಿ ಮನುಷ್ಯರೊಳು ಸಂಚರಿಸದೆ ಒಂದು
ವ್ಯಾ ಇಲ್ಲದೆ ದುಷ್ಟಮೃಗಗಳೊಳಗೆ ದುಷ್ಟಮೃಗದ ಹಾಗೆ ಕಲತುವರ್ತ
ಜ್ಯೋತಿರ್ಮಂಡಲಗಳು ಧ್ಯಾನಿಸಿ ನೋಡುವಾಗಲು ಬ್ರಹ್ಮಾಂಡಗಳ
ಕೂಡಿಗಳು ಕ್ರಮವ್ಯಾ ವಿಚಿತ್ರಲಕ್ಷಣಗಳು ಆಶ್ಚರ್ಯಗುಣಗಳು ಪ
ಪ್ರದಳು ತಾನೆ ಆಗಿರಲಾರದೆ ಅಪ್ರಕೃತಿ ಆದಿಮೂಲವು ಆದಿಪುರಾಣ
ತನ್ನ ಸ್ವಭಾವ ಬುದ್ಧಿಯಿಂದ ಗ್ರಹಿಸಲ್ಪಡುವದು- ಗ್ರಹಿಸಿದ ಮೇಲೆ ಅಂಥಾ
ಜಗತ್ಕರ್ತನೆಂದು ಹೇಳಿ ಅಂಥಾ ದೇವರ ಮೇಲೆ ಭಯ ಭಕ್ತಿ ವಿಶ್ವಾ
ವನಿಗೆ ಸ್ವತಂತ್ರವಾದ ಮನಸ್ಸುಂಟೆಂಬು ಅನುಮಾನವಿಲ್ಲದೆ ನಿಶ್ಚಯಿಸ
ಾಗಂಡರೆ- ಚಂಚುಕುಲದವನಿಗೆ ಈ ಜ್ಞಾನವ್ಯಾ ಯುಷ್ಟ ಮಾತ್ರ ತನ್ನ
ಂತರವಾಗದೆಯುತ್ತು- ಕಿಲವು ವೇಳೆಗಳಲ್ಲಿ ಪಟ್ಟಣದ ನಿವಾಸಿಗಳಾದ
ೀಳುವ ಮಾತುಗಳೇನಂದರೆ- ಎಲ್ಲಾ ಸುಳ್ಳು ಯುಂದು ಪ್ರಪಂಚದ ಮಾ
ವರು ದಾರು ಎಂದು ಯೋಚಿಸಿ ಬಾರಿಸುತ್ತಾ ಇದ್ದೀರಿ ಯೆಂದು ಕೇಳಿದರೆ
ೃಮಾರಿದವರಾಗಿ ಕಾಮಾಂಧಕಾರದಿಂದ ಕುರುಡರಾಗಿ ಪಳಲಾರದೆ ಮ
ಳ್ಳಿ ಬೆಳಗ ಗೊಡದೆ (ಕಾರಣ) ದೇಹಸುಖ ಭೋಗಂಗಳನ್ನು ಅಪೇಕ್ಷಿಸುತ್ತಿರು